ಡಾ. ಬಸವರಾಜ ಸಬರದ

ಗುಲ್ಬರ್ಗ ಜಿಲ್ಲೆಯ ಅನುಭಾವಿ ಕವಿಗಳು

ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ



ಗುಲ್ಬರ್ಗ ಜಿಲ್ಲೆಯ ಅನುಭಾವಿ ಕವಿಗಳು

ಡಾ. ಬಸವರಾಜ ಸಬರದ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

Gulbarga Jilleya Anubhavi Kavigalu : By Dr. Basavaraj Sabarada, Published by Dr. Karigouda Beechanahalli, Director, Prasaranga, Kannada University, Hampi, Vidyaranya, Kamalapur - 583 221

First Impression 1996 Rs. 2-00 Pages : ii + 42

ಮಂಟಪ ಮಾಲೆ : ೨೦

ಪ್ರಕಾಶಕರು :
ಡಾ. ಕರೀಗೌಡ ಬೀಚನಹಳ್ಳಿ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೨೧

ಬೆಲೆ : ೨-೦೦

ಮುದ್ರಣ :
ಮನು ಗ್ರಾಫಿಕ್ಸ್, ಧಾರವಾಡ - ೩
☎ ೦೮೩೬ - ೪೪೮೬೦

ತತ್ವಪದ-ವಿಶ್ಲೇಷಣೆ

'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. ತತ್ವಜ್ಞಾನವನ್ನು ಬ್ರಹ್ಮಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು', 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ, ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ, 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನೂ ಸಮನ್ವಯಗೊಳಿಸಿಕೊಂಡಿರುವ 'ತತ್ವಪದ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ. ತತ್ವಪದಗಳು ಹರ ಸಂಸ್ಕೃತಿಯನ್ನು ಹೇಳಿದರೆ, ಕೀರ್ತನೆಗಳು ಹರಿಸಂಸ್ಕೃತಿಯನ್ನು ಹೇಳಿವೆ.

ತತ್ವಪದಗಳನ್ನು ಭಜನೆ ಪದಗಳೆಂದೂ, ಅನುಭಾವ ಪದಗಳೆಂದೂ ಕರೆಯುತ್ತಾರೆ. ಈ ಪದಗಳನ್ನು ಭಜನೆಗಳ ಮೂಲಕ ಅಭಿವ್ಯಕ್ತಿಸಲು ಪ್ರಾರಂಭಿಸಿದಾಗ ಇವುಗಳಿಗೆ ಭಜನೆ ಪದಗಳೆಂದು ಹೆಸರು ಬಂದಂತೆ ಕಾಣುತ್ತದೆ. ಭಜನೆ ಸಾಮಾನ್ಯವಾಗಿ ಎರಡು ರೀತಿಯಿಂದ ನಡೆಯುತ್ತದೆ. ವ್ಯಕ್ತಿಗತ ಭಜನೆ ಮತ್ತು ಸಾಮೂಹಿಕ ಭಜನೆಗಳನ್ನು ಉದಾಹರಿಸಬಹುದು. ಭಕ್ತನೊಬ್ಬನೇ ದೇವರ ಮುಂದೆ ಕುಳಿತು ಹಾಡುತ್ತಾ, ದೇವರನ್ನು ಕುರಿತು ಭಜಿಸುವ ಕ್ರಿಯೆ ವ್ಯಕ್ತಿಗತ ಭಜನೆಯಾದರೆ, ಏಳೆಂಟು ಜನರು ಸಮೂಹಗೊಂಡು ತಾಳ, ದಮ್ಮಡಿ, ಏಕತಾರಿ ಈ ಮುಂತಾದ ವಾದ್ಯಗಳೊಂದಿಗೆ ಸ್ವರವೆತ್ತಿ ಹಾಡುವುದು ಸಾಮೂಹಿಕ ಭಜನೆಯಾಗುತ್ತದೆ. ಈ ತತ್ವಪದ ಹೀಗೆ ಭಜನೆ ಮೇಳದ ಮೂಲಕ ಬಂದಾಗ ಪರಿಣಾಮಕಾರಿಯಾದ ಒಂದು ಸಮೂಹ ಮಾಧ್ಯಮವಾಗುತ್ತದೆ. ಸಾಮೂಹಿಕ ಭಜನೆಯಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳಿರುತ್ತವೆ. ಮುಮ್ಮೇಳದಲ್ಲಿ ಪ್ರಮುಖ ಹಾಡುಗಾರನೊಬ್ಬ ಪದ ಎತ್ತಿಕೊಂಡು ಹಾಡಿ ಪಲ್ಲವಿ ಹೇಳಿದ ಕೂಡಲೇ, ಹಿಮ್ಮೇಳ ಅದನ್ನೇ ಅನುಕರಿಸಿ ಸ್ವರವೆತ್ತಿ ಹಾಡಲು ಪ್ರಾರಂಭಿಸುತ್ತದೆ. ಅಂತೆಯೇ ತತ್ವಪದಗಳನ್ನು ಸ್ವರವಚನಗಳೆಂದೂ ಕರೆಯಲಾಗಿದೆ.

ತತ್ವಪದಗಳನ್ನು ಅನುಭಾವ ಪದಗಳೆಂದೂ, ಇದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕೈವಲ್ಯ ಸಾಹಿತ್ಯವೆಂದೂ ಗುರುತಿಸಲಾಗಿದೆ. ಕನ್ನಡದಲ್ಲಿ ರಚನೆಯಾಗಿರುವ ತತ್ವಪದ ಸಾಹಿತ್ಯಕ್ಕೆ ಒಂದು ಪರಂಪರೆಯನ್ನು ಕಟ್ಟಿಕೊಂಡು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು "ಕನ್ನಡದಲ್ಲಿ ಕೈವಲ್ಯ ಸಾಹಿತ್ಯ" ಎಂಬ ಗ್ರಂಥವನ್ನೇ ರಚಿಸಿದ್ದಾರೆ. (ನೋಡಿ-'ಕನ್ನಡದಲ್ಲಿ ಕೈವಲ್ಯ ಸಾಹಿತ್ಯ' - ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಕಾಶಕರು : ಚಿತ್ರರಗಿ ಶ್ರೀವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲಿ, ಇಲಕಲ್ಲ, ೧೯೮೩).

"ತತ್ವಪದಗಳು ಒಂದು ಅನುಭವ ಘಟನೆಯಿಂದ ಹುಟ್ಟುತ್ತವೆ. ಆ ಘಟನೆಗಳ 'ತತ್ವ'ವನ್ನು ಭೇದಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಸಂತರ ಅಥವಾ ಅವರ ಶಿಷ್ಯರ ಬದುಕಿನ ಘಟನೆಗಳೇ ತತ್ವಪದಗಳಿಗೆ ವಿವರಣೆಯಾಗುತ್ತವೆ. ಕೆಲವು ಸಲ ವಿಲಕ್ಷಣವಾದ ಸ್ಥಿತಿಗಳ ಮುಖಾಂತರ ಸಂತರು ಲೋಕದವರ ಮನಸ್ಸಿನಲ್ಲಿ ಹೊಸ ಅರ್ಥಗಳನ್ನು ಹೊರಡಿಸುತ್ತಾರೆ. ಇದನ್ನು ಸಂತ ಪರಂಪರೆಯಲ್ಲಿ 'ಕಾರಣೀಕ' ಅನ್ನುತ್ತಾರೆ. ಇಂಥ 'ಕಾರಣೀಕ'ಗಳು ತತ್ವಪದಗಳ ಕ್ರಿಯಾರೂಪಗಳು; ತತ್ವಪದಗಳು 'ಕಾರಣೀಕ'ಗಳ ವಾಗ್ರೂಪಗಳು" ಎನ್ನುವ ಪ್ರೊ.ಎಚ್.ಎಸ್. ಶಿವಪ್ರಕಾಶ ಅವರು "ತತ್ವಪದ"ಗಳಿಗೂ "ಕಾರಣೀಕ"ಗಳಿಗೂ ಇರುವ ಅರ್ಥಪೂರ್ಣ ಸಂಬಂಧವನ್ನು ವಿವರಿಸಿದ್ದಾರೆ (ನೋಡಿ : ಎಚ್.ಎಸ್. ಶಿವಪ್ರಕಾಶ ಎಲ್ಲ ಜಾತಿಯ ಮರಗಳ ಕಾಡು ತತ್ವಪದಕಾರರು- "ಕನ್ನಡ ತತ್ವಪದಕಾರರು" ಪುಟ : ೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩).

ತತ್ವಪದ ಸಾಹಿತ್ಯ ಆಧ್ಯಾತ್ಮಕ್ಕೆ ಸಂಬಂಧಿಸಿರುವುದರಿಂದ, ಈ ಸಾಹಿತ್ಯ ಪ್ರಕಾರ ಧರ್ಮದ ಚೌಕಟ್ಟಿನಲ್ಲಿ ಬೆಳೆದುಬಂದಿರುವುದನ್ನು ಕಾಣಬಹುದಾಗಿದೆ. ತತ್ವಪದಗಳನ್ನು ಜನಪದ ಹಾಡುಗಳೆಂದು ಕೆಲವು ವಿದ್ವಾಂಸರು ಗುರುತಿಸಿದರೆ, ಅವುಗಳನ್ನು ಶಿಷ್ಟ ಸಾಹಿತ್ಯ ಪರಂಪರೆಗೆ ಸೇರಿಸಿದವರೂ ಇದ್ದಾರೆ. ತತ್ವಪದವನ್ನು ಇತ್ತೀಚೆಗೆ mysticism ಪದದೊಂದಿಗೆ ಸಮೀಕರಿಸಲಾಗುತ್ತಿದೆ. ಬೇರೆ ಬೇರೆ ಮಾರ್ಗಗಳ ಮೂಲಕ ಒಂದೇ ಸತ್ಯವನ್ನು ಕಂಡುಕೊಳ್ಳುವ ಕ್ರಿಯೆಗೆ mysticism ಎಂದು ಕರೆಯಲಾಗುತ್ತದೆ. 'Mysticism' ಪದವು 'ಅನುಭಾವ' ಪದಕ್ಕೆ ಸಮಾನವಾಗಲಾರದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ತತ್ವಪದಗಳನ್ನು ಅನುಭಾವ ಪದಗಳೆಂದು ಈಗಾಗಲೇ ಒಪ್ಪಿಕೊಂಡಿದ್ದಾರೆ. ಆದರೆ ಅನುಭಾವವೆಂಬುದು ಕೇವಲ ತತ್ವಪದ ಸಾಹಿತ್ಯ ಪ್ರಕಾರದಲ್ಲಿ ಮಾತ್ರ ಇರದೆ ವಚನ, ಕೀರ್ತನೆಯಂತಹ ಇತರ ಪ್ರಕಾರಗಳಲ್ಲಿಯೂ ಹುದುಗಿಕೊಂಡಿದೆ.

ತತ್ವಪದಗಳನ್ನು ರಚಿಸುವವರಿಗೆ ಅನುಭಾವಿ ಕವಿಗಳೆಂದು ಕರೆದರೆ, ತತ್ವಪದಗಳನ್ನು ಪ್ರಸಾರ ಮಾಡುವವರಿಗೆ ಭಜನೆ ಮೇಳಗಳೆಂದು ಗುರುತಿಸಲಾಗಿದೆ. ಅಂದರೆ ತತ್ವಪದ ಸಾಹಿತ್ಯ ಪ್ರಕಾರ ಪೂರ್ಣಗೊಳ್ಳಬೇಕಾದರೆ ಅದರ ರಚನಾಕಾರನಷ್ಟೇ, ಅದನ್ನು ಪ್ರಸಾರಗೊಳಿಸುವ ಹಾಡುಗಾರನ ಪ್ರಾಮುಖ್ಯತೆಯೂ ಎದ್ದುಕಾಣುತ್ತದೆ. ಕನ್ನಡ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ತತ್ವಪದ ರಚನಾಕಾರರೇ, ಅದರ ಹಾಡುಗಾರರಾಗಿರುವುದು ವಿಶಿಷ್ಟವಾಗಿದೆ.

ವಚನಕಾರರನ್ನು, ಕೀರ್ತನಕಾರರನ್ನು ಅನುಭಾವಿ ಕವಿಗಳೆಂದು ಕರೆದಿಲ್ಲ. ಆದರೆ ವಚನ, ಕೀರ್ತನೆಗಳಲ್ಲಿ ಅನುಭಾವ ತುಂಬಿದೆ. ತತ್ವಪದ ರಚನಾಕಾರರನ್ನು ಮಾತ್ರ ಅನುಭಾವಿ ಕವಿಗಳೆಂದು ಕರೆಯಲಾಗಿದೆ. ಆದ್ದರಿಂದ ತತ್ವಪದಕ್ಕೂ-ಅನುಭಾವಕ್ಕೂ ಅವಿನಾಭಾವ ಸಂಬಂಧವಿದೆ. ಅನುಭಾವವನ್ನು ಹೊರತುಪಡಿಸಿದ ತತ್ವಪದಗಳು ತುಂಬಾ ವಿರಳವೆನ್ನಬಹುದು. ಇಲ್ಲಿ ಬರುವ ತತ್ವ, ಅನುಭವದ ಮೂಲಕ ಹುಟ್ಟಿಕೊಂಡು, ಅನುಭಾವದ ಮುಖಾಂತರ ಹೊರಹೊಮ್ಮುತ್ತದೆ.

ಅನುಭಾವ-ಅರ್ಥವಿವರಣೆ

'ಅನುಭಾವ' ಪದವನ್ನು ಕುರಿತಂತೆ ಈಗಾಗಲೇ ವಿವಿಧ ರೀತಿಯ ಚರ್ಚೆ ನಡೆದಿದೆ. 'ಅನುಭಾವ'ದ ಅರ್ಥ ವಿವರಣೆಯನ್ನು ಕುರಿತಂತೆ ಅನೇಕ ವಿದ್ವಾಂಸರು ತಮ್ಮ ಅನಿಸಿಕೆಗಳನ್ನು ಪ್ರಕಟಪಡಿಸಿದ್ದಾರೆ.

'ಅನುಭಾವವೆಂಬುದು ಅಂತರಂಗದ ರತ್ನ'. 'ಅನುಭಾವವೆಂಬುದು ಆತ್ಮವಿದ್ಯೆ,' 'ಅನುಭಾವವೆಂಬುದು ನಿಜ ನಿವಾಸದಲ್ಲಿರುವುದು' ಎಂದು ಹನ್ನೆರಡನೆಯ ಶತಮಾನದ ವಚನಕಾರರು 'ಅನುಭಾವ' ಪದದ ಅರ್ಥ ವಿವರಣೆಯನ್ನು ಸ್ಪಷ್ಟಗೊಳಿಸಿದ್ದಾರೆ. "ಅನುಭಾವವು ಅಂತಃಪ್ರಜ್ಞೆಯ ಮೂಲಕ ಬಂದ ಅನುಭವ. ಈ ಅಂತಃಪ್ರಜ್ಞೆಯು ಸದ್ಗುರುಗಳ ಅನುಗ್ರಹದಿಂದ ಪಾರಮಾರ್ಥಿಕ ಸಾಧನದಿಂದ ನಮ್ಮಂತರಂಗದಲ್ಲಿ ಜನಿಸುವ ಶಕ್ತಿ ವಿಶೇಷ" ಎಂದು ಡಾ. ಆರ್.ಡಿ. ರಾನಡೆಯವರು ಅಭಿಪ್ರಾಯಪಟ್ಟಿದ್ದಾರೆ.

"ಅನುಭಾವವೆಂದರೆ ಜೀವಾತ್ಮ-ಪರಮಾತ್ಮರ ಏಕರ ಸತ್ವದ, ಶಿವ-ಜೀವರ ಐಕ್ಯದ ಲಿಂಗಾಂಗ ಸಮರಸತ್ವದ ಅನುಭವ"ವೆಂದು ಆರ್.ಆರ್. ದಿವಾಕರ್ ಅವರು ಹೇಳಿದರೆ, "ಅನುಭಾವವು ಆತ್ಮ-ಆತ್ಮಗಳ ಮಥನದಿಂದುದಿಸುವ ಜ್ಞಾನಾಗ್ನಿ" ಎಂದು ಡಾ. ಆರ್.ಸಿ. ಹಿರೇಮಠ ಅವರು ಅಭಿಪ್ರಾಯಪಟ್ಟಿದ್ದಾರೆ.

"ಈ ಬಾಹ್ಯ ಸೌಂದರ್ಯದ ಹಿಂದಿರುವ ಚಿರಂತನ ಎಚ್ಚರದ ಬೆಳಗನ್ನು ಎಲ್ಲೆಲ್ಲಿಯೂ ಕಂಡುಕೊಂಡು, ಅದರ ಕಂಪನಕ್ಕೆ ಅನುಗುಣವಾಗಿ ತನ್ನ ಹೃದಯದ ವೀಣೆಯನ್ನು ಮಿಡಿದಾಗ ಅದು ನಿಜವಾದ ಅರ್ಥದಲ್ಲಿ ಅನುಭಾವವಾಗುತ್ತದೆಂದು" ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳಿದರೆ, ಸಾಧನೆಯ ಸಿದ್ಧಸ್ಥಿತಿಯನ್ನೂ, ಅದರಿಂದ ಅನುಭವೈಕ್ಯ ವೇದ್ಯವಾಗುವ ಎರಡಿಲ್ಲದ ಅವಿರಳ ಆನಂದಾನುಭವವನ್ನೂ, ಈ ಕೇವಲ ಸ್ಥಿತಿಯನ್ನು ಪಡೆಯುವ ಎಲ್ಲಾ ಒಟ್ಟು ಮಾರ್ಗವನ್ನು ನಿಜಗುಣರು ಕೈವಲ್ಯ ಪದ್ಧತಿಯೆಂದು ಕರೆದಿದ್ದಾರೆ.

ಹನ್ನೆರಡನೆಯ ಶತಮಾನದ ಶಿವಶರಣರಂತೂ ಅನುಭಾವವನ್ನು ಕುರಿತಂತೆ ಸರಳ, ಸ್ಪಷ್ಟ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಅವರ ಪ್ರಕಾರ ಅನುಭಾವವೆಂದರೆ ನೆಲದ ಮರೆಯ ನಿದಾನದಂತೆ, ಶಿಶು ಕಂಡ ಕನಸಿನಂತೆ, ಮೂಕ ಮೆದ್ದ ಬೆಲ್ಲದಂತೆ. ಜೀವ-ದೇವನಾಗುವ ವ್ಯಕ್ತಿ-ಶಕ್ತಿಯಾಗುವ, ನರ-ಹರನಾಗುವ ಸಾಧ್ಯತೆಗೆ ಈ ಅನುಭಾವವೇ ಕಾರಣವಾಗಿದೆ.

"Mysticism is the immediate feeling of the unity of the self with God. It is nothing, therefore, but the fundamental feeling of religion, religions life at its very heart and centre" ಎಂದು ಡಬ್ಲ್ಯು.ಆರ್. ಇಂಗೆ ಅವರು ಅನುಭಾವವನ್ನು ಕುರಿತು ವಿಶ್ಲೇಷಿಸಿದರೆ, "Mysticism denotes that attitude of mind which involves a direct, immediate, first hahd intutive apprehension of God" ಎಂದು ಆರ್.ಡಿ. ರಾನಡೆ ಸ್ಪಷ್ಟಪಡಿಸಿದ್ದಾರೆ. ಹೀಗೆ ಜೀವಾತ್ಮ-ಪರಮಾತ್ಮಗಳ ಸಂಬಂಧದಿಂದುಂಟಾಗುವ ಅಮೃತತತ್ವವೇ ಅನುಭಾವದ ತಳಹದಿಯಾಗಿದೆಯೆನ್ನಬಹುದು.

ತತ್ವಪದದ ಪರಂಪರೆ

ಕನ್ನಡದಲ್ಲಿ ತತ್ವಪದ ಸಾಹಿತ್ಯಕ್ಕೆ ಒಂದು ದೀರ್ಘವಾದ ಪರಂಪರೆಯಿದೆ. ಆ ಪರಂಪರೆ ಹನ್ನೆರಡನೆಯ ಶತಮಾನದ ವಚನಕಾರರಿಂದ ಪ್ರಾರಂಭವಾಗುತ್ತದೆ. ತತ್ವಪದಗಳನ್ನೇ ಸ್ವರವಚನಗಳೆಂದು ಗುರುತಿಸಿದರೆ, ಸ್ವರವಚನಗಳನ್ನು ಮೊಟ್ಟಮೊದಲು ರಚಿಸಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ. ಸಕಲೇಶ ಮಾದರಸ ಕನ್ನಡದ ಮೊಟ್ಟಮೊದಲನೆಯ ಸ್ವರವಚನಕಾರನೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದ ಶಿವಶರಣರು ಅಸಂಖ್ಯಾತ ಸ್ವರವಚನಗಳನ್ನು ರಚಿಸಿದ್ದು ಅವುಗಳ ಸಾಂಸ್ಕೃತಿಕ ಅಧ್ಯಯನ ನಡೆಯಬೇಕಾಗಿದೆ.

ಆದ್ಯ ಸ್ವರವಚನಕಾರ ಸಕಲೇಶ ಮಾದರಸನಾದರೂ ಕೂಡ; ಇದೇ ಸಾಹಿತ್ಯ ಪ್ರಕಾರವನ್ನು 'ಕೀರ್ತನೆ' ಎಂಬ ಹೆಸರಿನಲ್ಲಿ ರಚಿಸಿ ಜನಮನಕ್ಕೆ ಮುಟ್ಟಿಸಿದ ಕೀರ್ತಿ ಮುಂದೆಬಂದ ಪುರಂದರ ದಾಸಾದಿ ಕೀರ್ತನಕಾರರಿಗೆ ಸಲ್ಲುತ್ತದೆ. ಶಿವಪರವಾದ ಸ್ತುತಿ ಶರಣರದಾದರೆ, ವಿಷ್ಣುಪರವಾದ

ಸ್ತುತಿ ದಾಸರದಾಗಿದೆ. ಹೀಗೆ ಹುಟ್ಟಿಕೊಂಡ ಈ ಸ್ತುತಿ ಸಾಹಿತ್ಯಕ್ಕೆ ಕನ್ನಡದಲ್ಲಿ ದೀರ್ಘವಾದ ಪರಂಪರೆಯೇ ಇದೆ. ತತ್ವಪದಗಳು ಶರಣರ ಸ್ವರವಚನಗಳಂತೆ, ದಾಸರ ಕಿರ್ತನೆಗಳಂತೆ ಕಂಡರೂ ಅಭಿವ್ಯಕ್ತಿ ಕ್ರಿಯೆಯಲ್ಲಿ ಇವು ಸ್ವರವಚನ-ಕೀರ್ತನೆಗಳಿಗಿಂತ ಭಿನ್ನವಾಗಿವೆಯೆಂದೆನಿಸುತ್ತದೆ. ಶರಣರ ಸ್ವರವಚನಗಳಲ್ಲಡಗಿರುವ ಆಧ್ಯಾತ್ಮ ಜನಸಾಮಾನ್ಯರನ್ನು ತಲುಪಲಿಲ್ಲ. ವಚನಗಳು ಜನಪ್ರಿಯವಾದಂತೆ, ಸ್ವರವಚನಗಳು ಜನಪ್ರಿಯವಾಗಲಿಲ್ಲ. ಇನ್ನು ಕೀರ್ತನೆಗಳು ಸಮೂಹ ಮಾಧ್ಯಮವಾಗಿ ಹೊರಹೊಮ್ಮಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ತತ್ವಪದ, ಭಜನೆಯಂತಹ ಸಮೂಹ ಮಾಧ್ಯಮದ ಮೂಲಕ ಬಹುಬೇಗ ಜನಮನವನ್ನು ತಲುಪಿತು. ನಿಜಗುಣ ಶಿವಯೋಗಿಗಳನ್ನು ಈ ತತ್ವಪದ ಸಾಹಿತ್ಯದ ಆದ್ಯ ಪ್ರವರ್ತಕರೆನ್ನಬಹುದಾಗಿದೆ. ಕ್ರಿ.ಶ. ೧೫೦೦ರಲ್ಲಿದ್ದ ನಿಜಗುಣರು ಗಹನವಾದ, ಉದಾತ್ತವಾದ ತತ್ವಗಳನ್ನು ಸರಳಗೊಳಿಸಿದರು, ಸುಲಭವಾದ ರೀತಿಯಲ್ಲಿ ಹೇಳಿದರು. ಆಗ ಈ ಸಾಹಿತ್ಯ ಜನಪ್ರಿಯತೆಯನ್ನು ಪಡೆಯಿತು. ಅಂತೆಯೇ ಈ ಸಾಹಿತ್ಯ ಪ್ರಕಾರವನ್ನು ಡಾ. ಚಂದ್ರಶೇಖರ ಕಂಬಾರ ಅವರು ಜನಪ್ರಿಯ ಸಾಹಿತ್ಯವೆಂದು ಕರೆದರು. (ನೋಡಿ : ಮಾತಾಡು ಲಿಂಗವೆ, ಪ್ರಸ್ತಾವನೆ ಪುಟ (XV)

ಹೀಗೆ ಹದಿನಾರನೆಯ ಶತಮಾನದಲ್ಲಿ ನಿಜಗುಣರಿಂದ ಅಧಿಕೃತವಾಗಿ ಪ್ರಾರಂಭವಾದ ಈ ತತ್ವಪದ ಸಾಹಿತ್ಯ ಇಂದಿನವರೆಗೂ ವಿವಿಧ ರೀತಿಯ ಆಯಾಮಗಳನ್ನು ಪಡೆದು ಬೆಳೆದುಕೊಂಡು ಬಂದಿದೆ. ನಿಜಗುಣರು ಪ್ರಾರಂಭಿಸಿದ ಈ ಸಾಹಿತ್ಯ ರೂಪವನ್ನು ಹದಿನೆಂಟು-ಹತ್ತೊಂಬತ್ತನೆಯ ಶತಮಾನದಲ್ಲಿ ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು ಮುಂದುವರಿಸಿಕೊಂಡು ಬಂದರು. ನಿಜಗುಣರು ತಮ್ಮ ತತ್ವಪದಗಳ ಸಂಕಲನವನ್ನು 'ಕೈವಲ್ಯ ಪದ್ಧತಿ' ಎಂದು ಕರೆದರೆ, ಸರ್ಪಭೂಷಣವರು ತಮ್ಮ ಹಾಡುಗಳ ಸಂಕಲವನ್ನು 'ಕೈವಲ್ಯ ಕಲ್ಪವಲ್ಲರಿ' ಎಂದು ಕರೆದಿದ್ದಾರೆ. ಅದೇ ರೀತಿ ಬಾಲಲೀಲಾ ಮಹಾಂತ ಶಿವಯೋಗಿಗಳು 'ಕೈವಲ್ಯದರ್ಪಣ' ಎಂದಿದ್ದಾರೆ.

ಹೀಗೆ ಹದಿನಾರರಿಂದ ಹತ್ತೊಂಬತ್ತನೆಯ ಶತಮಾನದವರೆಗೆ ಈ ತತ್ವಪದ ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ ಬೆಳೆದುಕೊಂಡು ಬಂದಿದೆ. ಇಂತಹ ಮಹತ್ವದ ತತ್ವಪದಕಾರರನ್ನು ಚರಿತ್ರೆ ಮರೆತುಬಿಟ್ಟಿದೆ. ನಿಜವಾಗಿ ನೋಡಿದರೆ ಹದಿನೆಂಟು-ಹತ್ತೊಂಬತ್ತನೆಯ ಶತಮಾನವನ್ನು ಕನ್ನಡ ತತ್ವಪದ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದಾಗಿದೆ.

ಈ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದಾಗಿದೆ. ಹನ್ನೆರಡನೆ ಶತಮಾನದಲ್ಲಿ ಸಕಲೇಶ ಮಾದರಸ ಮುಂತಾದ ಶಿವಶರಣರಿಂದ ಪ್ರಾರಂಭಗೊಂಡ ಸ್ವರವಚನ ಸಾಹಿತ್ಯ ಮೊದಲನೆ ಹಂತ. ಹದಿನಾರನೆಯ

ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಜನಪ್ರಿಯವಾದ ತತ್ವಪದ ಸಾಹಿತ್ಯದ ಎರಡನೇ ಹಂತ. ಹದಿನೆಂಟು-ಹತ್ತೊಂಬತ್ತನೇ ಶತಮಾನದಲ್ಲಿ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗಶರಣರು, ಕೈವಾರ ನಾರಾಯಣಪ್ಪ ಮುಂತಾದ ತತ್ವಪದಕಾರರಿಂದ, ಜನಮನ ತಲುಪಿ, ಜನಪದ ರೂಪ ಪಡೆದ ಮೂರನೇ ಹಂತ. ಈ ಮೂರೂ ಘಟ್ಟಗಳಲ್ಲಿ ರಚನೆಯಾಗಿರುವ ತತ್ವಪದಗಳಲ್ಲಿ ಮೊದಲು ಹಾಗೂ ಎರಡನೇ ಘಟ್ಟದ ತತ್ವಪದಗಳು ಪ್ರಕಟವಾಗಿವೆ. ಆದರೆ ಮೂರನೇ ಘಟ್ಟದ ಬಹುಮುಖ್ಯವಾದ ತತ್ವಪದ ಸಾಹಿತ್ಯವನ್ನು ಇನ್ನೂ ಸಂಗ್ರಹಿಸಬೇಕಾಗಿದೆ. ಮೂರನೇ ಘಟ್ಟದಲ್ಲಿ ಸಂಗ್ರಹಗೊಂಡು ಪ್ರಕಟನೆಯಾದದ್ದು ಬಹಳ ಕಡಿಮೆ, ಸಂಗ್ರಹಿಸಿ ಪ್ರಕಟಿಸಬೇಕಾಗಿರುವುದು ಬಹಳಷ್ಟಿದೆ.

ತತ್ವಪದ ಸಾಹಿತ್ಯ, ಶಿಷ್ಟವೊ? ಜನಪದವೊ?

ತತ್ವಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಪರಂಪರೆಗೆ ಸೇರಿಸಬೇಕೆ? ಜನಪದ ಸಾಹಿತ್ಯ ಪರಂಪರೆಗೆ ಸೇರಿಸಬೇಕೆ? ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಈ ಬಗೆಗೆ ನಿರ್ಣಾಯಕವಾದ ಚರ್ಚೆ ಇದುವರೆಗೆ ನಡೆದಿಲ್ಲವಾದರೂ; ತತ್ವಪದ ಸಾಹಿತ್ಯದ ಬೆಳವಣಿಗೆಯನ್ನು ಗಮನಿಸಿ, ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರಬಹುದಾಗಿದೆ.

ತತ್ವಪದ ಸಾಹಿತ್ಯದ ಪ್ರಾರಂಭದ ಘಟ್ಟವನ್ನು ಅಂದರೆ ಹನ್ನೆರಡನೆಯ ಶತಮಾನದಲ್ಲಿ ಸ್ವರವಚನಗಳನ್ನು ರಚಿಸಿದ ಸಕಲೇಶ ಮಾದರಸ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಈ ಮುಂತಾದ ವಚನಕಾರರನ್ನು ಈಗಾಗಲೇ ಶಿಷ್ಟ ಸಾಹಿತ್ಯ ಪರಂಪರೆಗೆ ಸೇರಿಸಿ ಚರಿತ್ರೆಯಲ್ಲಿ ದಾಖಲಿಸಲಾಗಿದೆ. ಅದೇ ರೀತಿ ಎರಡನೆಯ ಘಟ್ಟದಲ್ಲಿ ತತ್ವಪದಗಳನ್ನು ರಚಿಸಿ ತತ್ವಪದ ಸಾಹಿತ್ಯವನ್ನು ಜನಪ್ರಿಯಗೊಳಿಸಿದ ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳನ್ನು ಕೂಡಾ ಶಿಷ್ಟಸಾಹಿತ್ಯ ಪರಂಪರೆಯಲ್ಲಿಯೇ ಸೇರಿಸಲಾಗಿದೆ. ಈ ಎರಡೂ ಘಟ್ಟಗಳು ಶಿಷ್ಟಸಾಹಿತ್ಯ ಚರಿತ್ರೆಯಲ್ಲಿ ಸೇರ್ಪಡೆಯಾಗಿರುವುದು ಸೂಕ್ತವೇ ಆಗಿದೆ.

ಹೊಸಗನ್ನಡದ ಅರುಣೋದಯವನ್ನು ಕೆಂಪುನಾರಾಯಣ, ಮುದ್ದಣರಿಂದ ಆರಂಭಿಸುವುದನ್ನು ಕೈಬಿಟ್ಟು, ಹೊಸಗನ್ನಡ ಸಾಹಿತ್ಯದ ಪ್ರಾರಂಭವನ್ನು ತತ್ವಪದಕಾರರಿಂದ ಪ್ರಾರಂಭಿಸಬೇಕಾಗಿದೆಯೆಂದು ಪ್ರೊ. ಕಿ.ರಂ. ನಾಗರಾಜ ಅವರು ಅಭಿಪ್ರಾಯಪಟ್ಟಿದ್ದಾರೆ. (ವಿವರಗಳಿಗೆ : ಕನ್ನಡ ತತ್ವಪದಕಾರರು, ಪುಟ:೫೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩). ಪ್ರೊ. ಕಿ.ರಂ. ನಾಗರಾಜ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ, ತತ್ವಪದ ಅಥವಾ ಭಜನೆ ಹಾಡಿನ ಸಾಹಿತ್ಯವನ್ನು ಜನಪದ ಸಾಹಿತ್ಯ ಪರಂಪರೆಗೆ ಸೇರಿಸಬೇಕಾಗುತ್ತದೆಂದು ಅನೇಕ ಜಾನಪದ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ.

ಡಾ. ಎಂ.ಎಸ್. ಸುಂಕಾಪುರ, ಡಾ. ಪಿ.ವಿ. ಮಲ್ಲಾಪುರ, ಡಾ. ಎಂ.ಜಿ. ಬಿರಾದಾರ ಹಾಗೂ ಶ್ರೀ ಶಾಂತರಸ ಅವರು ಈ ತತ್ವಪದ ಸಾಹಿತ್ಯವನ್ನು ಜನಪದ ಸಾಹಿತ್ಯದ ಭಾಗವೆಂದೇ ಗುರುತಿಸಿದ್ದಾರೆ. ತತ್ವಪದಕಾರರು ಅಲ್ಪ-ಸ್ವಲ್ಪ ವಿದ್ಯಾಭ್ಯಾಸ ಮಾಡಿ ತತ್ವಪದ ರಚಿಸಿದಾಕ್ಷಣ ಅವರು ಶಿಷ್ಟಸಾಹಿತಿಗಳಾಗುವುದಿಲ್ಲ, ಲಾವಣಿಕಾರರಂತೆ ಜನಪದ ಸಾಹಿತಿಗಳಾಗತ್ತಾರೆಂದು ಈ ಜಾನಪದ ವಿದ್ವಾಂಸರು ವಿಶ್ಲೇಷಿಸಿದ್ದಾರೆ. (ವಿವರಗಳಿಗೆ : "ಜಾನಪದ ಸಾಹಿತ್ಯದರ್ಶನ" ಭಾಗ-ಐದು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦)

ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪನಂತಹ ಅನುಭಾವಿ ಕವಿಗಳು ನಾಲ್ಕಕ್ಷರ ಕಲಿತು ಬರೆದಾಕ್ಷಣ ಶಿಷ್ಟ ಸಾಹಿತಿಗಳಾಗುವುದಿಲ್ಲವೆಂದು ಹೇಳುವ ಡಾ. ಎಂ.ಜಿ. ಬಿರಾದಾರ ಅವರು ಸೊಗಸಾದ ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸುತ್ತಾರೆ. "ಇಂಗ್ಲಿಷನ್ನರಿಯದವನೂ ಮೋಟಾರು, ಸೈಕಲ್, ರೇಡಿಯೊ ಪದಗಳನ್ನು ಬಳಸಿದಾಗಲೂ ಅವನನ್ನು ಹೇಗೆ ಇಂಗ್ಲಿಷ್ ಬಲ್ಲವನೆಂದು ಹೇಳುವುದಿಲ್ಲವೋ ಹಾಗೆ ಅವರು ಕೇವಲ ಕೆಲವು ತಾತ್ವಿಕ ಪ್ರೌಢಪದಗಳನ್ನು ಬಳಸಿದ ಮಾತ್ರಕ್ಕೆ ಅವರ ಸಾಹಿತ್ಯವನ್ನು ಪ್ರೌಢಸಾಹಿತ್ಯವೆಂದು ಹೇಳಲಾಗದು. ಅದರಲ್ಲಿ ಅಭಿವ್ಯಕ್ತವಾದ ಜನಪದ ಪ್ರಜ್ಞೆ ಪ್ರಮುಖವೆ ಹೊರತು, ಭಾಷೆಯಲ್ಲ" ಎಂದು ವಿವರಿಸಿದ್ದಾರೆ. (ನೋಡಿ : ಜಾನಪದ ಸಾಹಿತ್ಯದರ್ಶನ-ಭಾಗ ೫, ಪುಟ:೧೨೮, ೧೯೮೦)

ಇದೇ ರೀತಿ ಡಾ. ಬಿ.ಎಸ್. ಗದ್ದಗಿಮಠ ಹಾಗೂ ಡಾ. ಬೆಟಗೇರಿ ಕೃಷ್ಣಶರ್ಮ ಅವರು ಭಜನೆ ಹಾಡುಗಳನ್ನು ಜನಪದವೆಂದು ಹೆಸರಿಸಿದ್ದಾರೆ. ಆದರೆ ಭಜನೆ ಪದಗಳನ್ನು, ಜನಪದ ಸಾಹಿತ್ಯದ ಭಾಗವನ್ನಾಗಿಸಿಕೊಂಡು ಇದುವರೆಗೆ ಯಾರೂ ವ್ಯಾಪಕವಾದ ಅಧ್ಯಯನವನ್ನು ಕೈಗೊಂಡಿಲ್ಲ. ಜನಪದ ಕಲೆಗಳಲ್ಲಿಯೂ ಭಜನಾಮೇಳಗಳನ್ನು ಹೆಸರಿಸಿಲ್ಲ.

ಈ ಎಲ್ಲ ಚರ್ಚೆಯನ್ನು ಗಮನಿಸಿದ ನಂತರ ಒಂದು ವಿಷಯ ಸ್ಪಷ್ಟವಾಗುತ್ತದೆ. ತತ್ವಪದ ಸಾಹಿತ್ಯವು ಶಿಷ್ಟ ಸಾಹಿತ್ಯ ಹಾಗೂ ಜನಪದ ಸಾಹಿತ್ಯ ಎರಡೂ ಸಾಹಿತ್ಯದ ಪರಂಪರೆಗೆ ಸೇರಿದ್ದಾಗಿದೆ. ಧರ್ಮಸಮನ್ವಯ, ಭಾಷಾಸಮನ್ವಯ, ಪ್ರಾದೇಶಿಕ ಸಮನ್ವಯವನ್ನು ಸಾಧಿಸುವುದರೊಂದಿಗೆ ತತ್ವಪದವು ಸಾಹಿತ್ಯ ಸಮನ್ವಯವನ್ನೂ ಸಾಧಿಸಿದೆ. ಇದರ ತತ್ವ ಪ್ರೌಢವಾದುದೂ, ಶಿಷ್ಟಪರಂಪರೆಗೆ ಸೇರಿದುದೂ ಆದರೆ, ಇದರ ಅಭಿವ್ಯಕ್ತಿಯ ಕ್ರಮ ಜನಪದವಾಗಿದೆ. ಈ ಮೊದಲು ಉಲ್ಲೇಖಿಸಿದ ಮೊದಲನೆಯ ಹಾಗೂ ಎರಡನೆಯ ಘಟ್ಟಗಳನ್ನು ಶಿಷ್ಟಸಾಹಿತ್ಯ ಪರಂಪರೆಗೆ ಸೇರಿಸುವುದು; ಇತ್ತೀಚಿನ ಬೆಳವಣಿಗೆಯಾದ ಮೂರನೆಯ ಘಟ್ಟವನ್ನು

ಜನಪದ ಸಾಹಿತ್ಯ ಪರಂಪರೆಗೆ ಸೇರಿಸುವುದು, ನನ್ನ ಪ್ರಕಾರ ಹೆಚ್ಚು ಸೂಕ್ತವೆನಿಸುತ್ತದೆ. ಹೀಗಾದಾಗ, ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಕಡಕೋಳ ಮಡಿವಾಳಪ್ಪ ಮುಂತಾದ ತತ್ವಪದಕಾರರು ಜನಪದ ಸಾಹಿತ್ಯ ಪರಂಪರೆಗೆ ಸೇರಿದವರಾಗುತ್ತಾರೆ.

ಭಜನೆ ಮೇಳದವರಿಗೆ ಶಿಷ್ಟಕವಿ, ಜನಪದ ಕವಿ ಎಂಬ ಭೇದಭಾವವಿಲ್ಲ. ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿಗಳಂತಹ ಶಿಷ್ಟಕವಿಗಳು ಬರೆದಿರುವ ತತ್ವಪದಗಳನ್ನು ಭಜನೆ ಮೇಳದವರು ಹಾಡುವಂತೆ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಕೈವಾರ ನಾರಾಯಣಪ್ಪನಂತಹ ಜನಪದ ಕವಿಗಳ ತತ್ವಪದಗಳನ್ನೂ ಹಾಡುತ್ತಾರೆ. ಪ್ರಾರಂಭದ ಘಟ್ಟವಾದ ಹನ್ನೆರಡನೆಯ ಶತಮಾನದ ಶಿವಶರಣರ ಸ್ವರವಚನಗಳನ್ನು, ಭಜನಾ ಮೇಳಗಳಲ್ಲಿ ಹಾಡುವುದು ತುಂಬಾ ವಿರಳ. ಆ ಸ್ವರವಚನಗಳಲ್ಲಿರುವ ಕ್ಲಿಷ್ಟತೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಅಂತೆಯೇ ಭಜನೆ ಹಾಡುಗಳ ನಿಜವಾದ ಪ್ರಾರಂಭ ಹದಿನಾರನೆಯ ಶತಮಾನದ ನಿಜಗುಣ ಶಿವಯೋಗಿಗಳಿಂದ ಪ್ರಾರಂಭವಾಗುತ್ತದೆಂದು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ನಿಜಗುಣ ಶಿವಯೋಗಿಗಳ ತತ್ವಪದಗಳು ಸತ್ವಯುತವಾಗಿದ್ದೂ ಸರಳವಾಗಿವೆ, ಗೇಯತೆಯನ್ನೊಳಗೊಂಡಿವೆ.

ಹೀಗೆ ಶಿಷ್ಟಕವಿಗಳಿಂದ ಪ್ರಾರಂಭವಾದ ಈ ತತ್ವಪದ ಸಾಹಿತ್ಯ ಪ್ರಕಾರ, ಹತ್ತೊಂಬತ್ತು-ಇಪ್ಪತ್ತನೆಯ ಶತಮಾನದಲ್ಲಿ ಜನಪದ ಕವಿಗಳ ವಶವಾಯಿತು. ಕನ್ನಡ ಶಿಷ್ಟಸಾಹಿತಿಗಳ ಮೇಲೆ ಜಾನಪದದ ಪ್ರಭಾವ ದಟ್ಟವಾಗಿರುವಂತೆ, ಕನ್ನಡ ಜನಪದ ಸಾಹಿತಿಗಳ ಮೇಲೆ ಶಿಷ್ಟ ಸಾಹಿತ್ಯದ ಪ್ರಭಾವವೂ ಆಗಿದೆ. ಇದಕ್ಕೆ ಈ ತತ್ವಪದ ಸಾಹಿತ್ಯ ಪ್ರಕಾರವೇ ಪ್ರಮುಖ ಸಾಕ್ಷಿಯಾಗಿದೆ. ಇವೆರಡೂ ಸಂಸ್ಕೃತಿಗಳಲ್ಲಿ ಕೊಡುಕೊಳ್ಳುವಿಕೆಯ ಕೆಲಸ ನಡೆದೇ ಇರುತ್ತದೆ. ತತ್ವಪದಗಳ ರಚನೆ ಜನಪದ ಕವಿಗಳಿಂದ ಪ್ರಾರಂಭವಾದ ಕೂಡಲೇ ಹಳ್ಳಿ-ಹಳ್ಳಿಗಳಲ್ಲಿ ಭಜನಾ ಮಂಡಳಿಗಳು ಹುಟ್ಟಿಕೊಂಡವು. ಅನೇಕ ಆಶುಕವಿಗಳು ಬೆಳೆದು ನಿಂತರು. ಭಜನಾ ಮೇಳವಿಲ್ಲದ ಹಳ್ಳಿಯೇ ಇಲ್ಲವೆನ್ನುವಷ್ಟರ ಮಟ್ಟಿಗೆ ಈ ಮಾಧ್ಯಮ ಬೆಳೆದು ನಿಂತಿತು. ಶರೀಫ, ಮಡಿವಾಳಪ್ಪನಂತಹ ತತ್ವಪದಕಾರರು ಜನಪದ ಪರಂಪರೆಗೆ ಸೇರಿದರೂ ತಮ್ಮ ತತ್ವಪದಗಳಲ್ಲಿ ಗಹನವಾದ ತತ್ವಗಳನ್ನು ಹೇಳಿದ್ದಾರೆ, ಅನುಭಾವದೆತ್ತರವನ್ನು ತಲುಪಿದ್ದಾರೆ. ಇವರು ಪಡೆದ ಸಂಸ್ಕಾರವೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಶಿಷ್ಟ ಪರಂಪರೆಯಲ್ಲಿ ಬರುವ ತತ್ವಪದಕಾರರಿಗೆ ವಿಶೇಷವಾದ ಗುರು ಕಂಡುಬರುವುದಿಲ್ಲ. ಆದರೆ ಜನಪದ ಪರಂಪರೆಯಲ್ಲಿ ಬರುವ ತತ್ವಪದಕಾರರು ಗುರುವಿನ ಸಂಸ್ಕಾರದಿಂದ ತಾವು ಕವಿಗಳಾಗಿ ಬೆಳೆದು ನಿಂತಿದ್ದಾರೆ. ಅದನ್ನವರು ಭಕ್ತಿಯಿಂದ ಸ್ಮರಿಸಿದ್ದಾರೆ. ಒಬ್ಬೊಬ್ಬ ತತ್ವಪದಕಾರನ ಹಿಂದೆ ಒಬ್ಬೊಬ್ಬ ಗುರು ಇದ್ದಾನೆ.

ಗುಲಬರ್ಗಾ ಜಿಲ್ಲೆ

ಗುಲಬರ್ಗಾ ಜಿಲ್ಲೆಗೆ ಮಹತ್ವದ ಐತಿಹಾಸಿಕ ಪರಂಪರೆಯಿರುವಂತೆ, ಅರ್ಥಪೂರ್ಣವಾದ ಸಾಂಸ್ಕೃತಿಕ ಸಮನ್ವಯವಿದೆ. ಶಾತವಾಹನರು, ರಾಷ್ಟ್ರಕೂಟರು, ಚಾಳುಕ್ಯರು, ಕಳಚೂರ್ಯರು, ಸೇವುಣರು ರಾಜ್ಯವನ್ನಾಳಿದ ಈ ಪ್ರದೇಶದಲ್ಲಿ, ಬಹುಮನೀ ಅರಸರು, ಆದಿಲ್‌ಶಾಹೀ ಅರಸರೂ ಆಳ್ವಿಕೆ ನಡೆಸಿದ್ದಾರೆ. ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶದಲ್ಲಿ ಧರ್ಮ, ಸಂಸ್ಕೃತಿ, ಸಾಹಿತ್ಯ, ಭಾಷೆಗಳ ಮೇಲೆ ಅನ್ಯರ ಪ್ರಭಾವ ದಟ್ಟವಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಈ ಜಿಲ್ಲೆ ಇಂದು ಈ ಪ್ರದೇಶದ ಕೇಂದ್ರಸ್ಥಾನವಾಗಿದೆ.

ಗುಲಬರ್ಗಾಕ್ಕೆ ಕಲ್ಯಾಣದ ಹೆಬ್ಬಾಗಿಲು ಎಂದು ಕರೆಯಲಾಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ವಚನ ಚಳುವಳಿಗೆ ಈ ಪ್ರದೇಶದ ಕೊಡುಗೆಯೂ ಸೇರಿದೆ. ಕನ್ನಡದ ಮೊಟ್ಟಮೊದಲನೆ ಗ್ರಂಥ ''ಕವಿರಾಜ ಮಾರ್ಗ'' ಇದೇ ಪ್ರದೇಶದಿಂದ ಹುಟ್ಟಿಬಂದಿದೆ. ಹತ್ತು ತಾಲೂಕುಗಳನ್ನು ಹೊಂದಿದ ಈ ಜಿಲ್ಲೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬಹುದೊಡ್ಡ ಜಿಲ್ಲೆಯಾಗಿದೆ. ಕೃಷ್ಣಾ-ಭೀಮಾ ನದಿಗಳು ಇಲ್ಲಿ ಹರಿದಿವೆ. ಈ ಕೃಷ್ಣೆ-ಭೀಮೆಯರ ನಡುವಿನ ಪ್ರದೇಶವಾದ ಜೇವರ್ಗಿ, ಶಹಾಪುರ, ಸುರಪುರ ತಾಲೂಕುಗಳ ಪ್ರದೇಶವನ್ನು ಹಿಂದೆ ಸಗರನಾಡು ಎಂದು ಕರೆಯಲಾಗುತ್ತಿತ್ತು. ಸಗರ ಚಕ್ರವರ್ತಿ ಆಳಿದ ಪ್ರದೇಶವಿದಾದುದರಿಂದ ಈ ಹೆಸರು ಬಂದಿದೆ. ಅನೇಕ ಶಿಲಾಶಾಸನಗಳನ್ನು, ಮಹತ್ವದ ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ಈ ಬಯಲುನಾಡು ಸದಾ ಬರಗಾಲಕ್ಕೆ ತುತ್ತಾಗುತ್ತಲೇ ಬಂದಿದೆ.

ಹಿಂದೂ-ಮುಸ್ಲಿಂ ಭಾವೈಕ್ಯತೆಗೆ, ಧರ್ಮ-ಸಂಸ್ಕೃತಿಗಳ ಸಮನ್ವಯತೆಗೆ ಈ ಪ್ರದೇಶ ಹೆಸರಾಗಿದೆ. ಸುರಪುರ ತಾಲೂಕಿನ ಕೊಡೇಕಲ್ಲ ಗ್ರಾಮವು, ಕೊಡೇಕಲ್ಲ ಬಸವಣ್ಣನ ಕಾಲಜ್ಞಾನ ವಚನಗಳಿಗೆ ಪ್ರಸಿದ್ಧವಾಗಿರುವಂತೆ ಅಲ್ಲಿಯ ದೇವಾಲಯದಲ್ಲಿ ನಡೆಯುವ ಸಮನ್ವಯ ಆಚರಣೆಗಳಿಗೂ ಹೆಸರಾಗಿದೆ. ಕೊಡೇಕಲ್ಲ ಬಸವಣ್ಣನ ಉತ್ಸವವು ದವನದ ಹುಣ್ಣಿಮೆ, ಗೌರೀ ಹುಣ್ಣಿಮೆಗಳಂದು ನಡೆಯುತ್ತದೆ. ಆಗ ಹಿಂದೂ-ಮುಸ್ಲಿಂ ಭಕ್ತರು ಸೇರಿ ಈ ಜಾತ್ರೆಯನ್ನು

ಮಾಡುತ್ತಾರೆ. ಕೊಡೇಕಲ್ಲ ಬಸವಣ್ಣನ ಗುಡಿ ಹೊರಗೆ ಮಸೀದಿಯಂತೆ ಕಾಣುತ್ತದೆ, ಒಳಗೆ ಗೋರಿಯ ಆಕಾರದಲ್ಲಿ ಗದ್ದುಗೆಯಿದೆ. ಇಲ್ಲಿನ ಸ್ವಾಮಿಗಳಿಗೆ ಲಿಂಗವಿಲ್ಲ. ಇದೇ ರೀತಿ ತಿಂಥಿಣಿಯ ಮೌನೇಶ್ವರರೂ ಕೂಡ ಧರ್ಮಸಮನ್ವಯಕ್ಕೆ ಒಳ್ಳೆಯ ಉದಾಹರಣೆಯಾಗಿದ್ದಾರೆ.

ಸುರಪುರದಿಂದ ಮೂರು ಮೈಲು ಅಂತರದಲ್ಲಿರುವ ಗೋನಾಳ ಗ್ರಾಮದಲ್ಲಿ ವಿಶ್ವಕರ್ಮ ಮನೆತನದಲ್ಲಿ ಹುಟ್ಟಿದ ಮೌನೇಶ್ವರರು ಈ ಪ್ರದೇಶದ ಜನತೆಗೆ, ಖ್ವಾಜಾ ಅಮೀನದೀನರ ಅವತಾರವೆಂದೇ ಪ್ರಸಿದ್ಧರಾಗಿದ್ದಾರೆ. ಶಿರಹಟ್ಟಿ ಫಕೀರೇಶ್ವರ ಪುರಾಣದಲ್ಲಿ ದ್ಯಾಂಪುರ ಚನ್ನಕವಿಗಳು ಈ ವಿಷಯವನ್ನು ಉಲ್ಲೇಖಿಸಿದ್ದಾರೆ. ಖ್ವಾಜಾ ಅಮೀನದೀನರು ಶ್ರೀ ಫಕೀರೇಶ್ವರರ ಗುರುಗಳಾಗಿದ್ದರು. ಅವರು ಲಿಂಗೈಕ್ಯರಾದ ಮೇಲೆ (ಕ್ರಿ.ಶ. ೧೫೭೦) ಮೌನೇಶ್ವರರು ಅವತರಿಸಿದರು.

ಈ ದೇಶದ ಬೇರೆ ಪ್ರದೇಶಗಳಲ್ಲಿ ಹಿಂದೂಗಳಿಗೆ ಹಿಂದೂಗಳು, ಮುಸ್ಲೀಮರಿಗೆ ಮುಸ್ಲೀಮರು ಅವತಾರಪುರುಷರಾದದ್ದುಂಟು. ಆದರೆ ಗುಲಬರ್ಗಾ ಜಿಲ್ಲೆಯ ಈ ಮೌನೇಶ್ವರರು, ಮುಸ್ಲೀಮರಾಗಿದ್ದ ಖ್ವಾಜಾ ಅಮೀನದೀನರ ಅವತಾರವೆಂದು, ಜನ ನಂಬಿಕೆಯಿರುವುದು ನಿಜವಾದ ಭಾವೈಕ್ಯತೆಯ ಸಂಕೇತವಾಗಿದೆ. ಅದೇ ರೀತಿ ಕೊಡೇಕಲ್ ಬಸವಣ್ಣನವರನ್ನು ಮಹಮದ್ ಪೈಗಂಬರವರ ಅವತಾರವೆಂದು ಕರೆಯುತ್ತಾರೆ. ಈ ತಿಂಥಿಣಿ ಮೌನೇಶ್ವರರ ಕಾಲ ಹದಿನಾರನೆಯ ಶತಮಾನದ ಉತ್ತರಾರ್ಧವೆಂದು ನಂಬಲಾಗಿದೆ. ಈ ತಿಂಥಿಣಿ ಮೌನೇಶ್ವರರು ಹಿಂದೂ-ಮುಸ್ಲೀಮರಿಬ್ಬರಿಗೂ ಹೊಂದಿಕೆಯಾಗುವ ರೀತಿಯಲ್ಲಿ ವೀರಶೈವ ತತ್ವಗಳನ್ನು ಹೇಳಿದ್ದಾರೆ.

ಪ್ರತಿವರ್ಷ ನಡೆಯುವ ತಿಂಥಿಣಿಯ ಜಾತ್ರೆಗೆ ಲಿಂಗಾಯತ, ವಿಶ್ವಕರ್ಮ, ವೈಷ್ಣವ, ಮುಸ್ಲೀಮ ಹೀಗೆ ವಿವಿಧ ಜನಾಂಗದಿಂದ ಬಂದ ಭಕ್ತ ಬಂಧುಗಳು ಸೇರುತ್ತಾರೆ. ಇವರೆಲ್ಲರೂ ಮೌನೇಶ್ವರರ ಜಾತ್ರೆಯಲ್ಲಿ ಒಂದೇ ಸಂಸ್ಕೃತಿಯವರಂತೆ ಕಾಣುತ್ತಾರೆ. "ಏಕ ಲಾಖ, ಐಂಸೀ ಹಜಾರ ಪಾಚೋ ಪೈಗಂಬರ ಮೌನಧೀನ; ಜಿತಾಫೀರ ಜಗದ್ಗುರು ಪೈಗಂಬರದೀನ ಮೌನದೀನ ಕಾಶೀಪತಿ ಗಂಗಾಧರ ಹರಹರ ಮಹಾದೇವ" ಎಂದು ಕೂಡಿದ ಭಕ್ತಸಮೂಹ ಒಕ್ಕೊರಲಿನಿಂದ ಉಗ್ಗ್ಘ ಡಿಸುತ್ತದೆ. ತಿಂಥಿಣಿ ಮೌನೇಶ್ವರರ ಜಾತ್ರೆಗೆ ಹೋದವರಿಗೆ ಇದೊಂದು ವಿಶಿಷ್ಟ ಅನುಭವ. ಜಾತ್ಯಾತೀತ, ಭಾಷಾತೀತ ಮನೋಭಾವವನ್ನು ಇಲ್ಲಿ ಕಾಣಬಹುದಾಗಿದೆ.

ಈ ಹಿಂದೂ-ಮುಸ್ಲೀಂ ಭಾವೈಕ್ಯತೆಗೆ ಗುಲಬರ್ಗಾ ಜಿಲ್ಲೆ ಮೊದಲಿನಿಂದಲೂ ಹೆಸರಾಗಿದೆ. ಇಂದಿಗೂ ಗುಲಬರ್ಗಾದಲ್ಲಿ ಶ್ರೀಶರಣ ಬಸವೇಶ್ವರ ಮತ್ತು ಖಾಜಾಬಂದೇನವಾಜ ಅವರ ಸಾಂಸ್ಕೃತಿಕ ಸಮನ್ವಯವನ್ನು ಕಾಣಬಹುದಾಗಿದೆ. ಇಂದಿಗೂ ಕೂಡ ಶ್ರೀಶರಣ ಬಸವೇಶ್ವರ

ಜಾತ್ರೆಯಲ್ಲಿ ವಿಶಿಷ್ಟ ರೀತಿಯ ಸಮನ್ವಯ ಸಂಬಂಧವನ್ನು ಕಾಣಬಹುದಾಗಿದೆ. ಗುಲಬರ್ಗಾದಲ್ಲಿ ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ನಡೆಯುವ ಶ್ರೀಶರಣ ಬಸವೇಶ್ವರರ ಜಾತ್ರೆ ಪ್ರಾರಂಭವಾಗುವುದು; ಖಾಜಾ ಬಂದೇನವಾಜ ದರ್ಗಾದಿಂದ ಪರುಸಬಟ್ಟಲು ಬಂದ ನಂತರವೇ. ಇಂತಹ ಸಮನ್ವಯ ಸಂಸ್ಕೃತಿಯನ್ನು ಹೊಂದಿರುವ ಗುಲಬರ್ಗಾ ಜಿಲ್ಲೆಯ ಪ್ರದೇಶದ ತತ್ವಪದಕಾರರೂ ಕೂಡ ಸಮನ್ವಯ ದೃಷ್ಟಿಯನ್ನೇ ಹೊಂದಿದವರಾಗಿದ್ದಾರೆ.

ಗುಲಬರ್ಗಾ ಜಿಲ್ಲೆಯಲ್ಲಿ ಅನೇಕ ಅನುಭಾವಿ ಕವಿಗಳು ಆಗಿಹೋಗಿದ್ದಾರೆ. ಈ ಅನುಭಾವಿ ಕವಿಗಳ ಅಸಂಖ್ಯಾತ ತತ್ವಪದಗಳು ಇಂದಿಗೂ ಹಳ್ಳಿಗರ ನಾಲಿಗೆಯ ಮೇಲಿವೆ. ಇವುಗಳಲ್ಲಿ ಕೆಲವು ತತ್ವಪದಗಳು ಮಾತ್ರ ಪ್ರಕಟವಾಗಿವೆ. ಪ್ರಕಟವಾಗಬೇಕಾಗಿರುವ ತತ್ವಪದಗಳು ಹೇರಳವಾಗಿವೆ. ಈ ಜಿಲ್ಲೆಯಲ್ಲಿ ಹದಿನೇಳನೆಯ ಶತಮಾನದಿಂದ ಪ್ರಾರಂಭವಾದ ತತ್ವಪದ ಸಾಹಿತ್ಯ ಪರಂಪರೆ ಇಂದಿಗೂ ಜೀವಂತವಾಗಿದೆ. ಕ್ರಿ.ಶ. ೧೭೦೦ ರಿಂದ ೧೯೫೦ರ ಅವಧಿಯಲ್ಲಿ ಬರುವ ಅನುಭಾವಿ ಕವಿಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಸ್ವಾತಂತ್ರ್ಯೋತ್ತರ ಸಂದರ್ಭದ ಅನುಭಾವಿ ಕವಿಗಳ ತತ್ವಪದಗಳನ್ನು ಪ್ರತ್ಯೇಕವಾಗಿಯೇ ಅಭ್ಯಸಿಸಬೇಕಾಗಿದೆ. ಹಿಂದೂ-ಮುಸ್ಲಿಂ ಎರಡೂ ಸಂಸ್ಕೃತಿಯಿಂದ ಹುಟ್ಟಿಬಂದ ಅನುಭಾವಿ ಕವಿಗಳು ಈ ಜಿಲ್ಲೆಯ ತತ್ವಪದ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ಕೊಟ್ಟಿದ್ದಾರೆ.

ಪ್ರಮುಖ ಅನುಭಾವಿ ಕವಿಗಳು

ಗುಲಬರ್ಗಾ ಜಿಲ್ಲೆಯಲ್ಲಿ ನೂರಾರು ಅನುಭಾವಿ ಕವಿಗಳು ತತ್ವಪದಗಳನ್ನು ಬಿಟ್ಟುಹೋಗಿದ್ದಾರೆ. ಅವರಲ್ಲಿ ಪ್ರಮುಖರನ್ನು ಹೆಸರಿಸಿ ಅವರ ಕೃತಿ ಪರಿಚಯ ಮಾಡಿಕೊಡುವುದು ಇಲ್ಲಿನ ಉದ್ದೇಶವಾಗಿದೆ. ಗುಲಬರ್ಗಾ ಜಿಲ್ಲೆಯ ಅನುಭಾವಿ ಕವಿಗಳೆಲ್ಲಾ ಜನಪದ ಸಾಹಿತ್ಯ ಪರಂಪರೆಗೆ ಸೇರಿದವರಾಗಿದ್ದಾರೆ. ಹೀಗಾಗಿ ಇವರ ತತ್ವಪದಗಳೆಲ್ಲಾ ಹಳ್ಳಿಗರ ನಾಲಗೆಯ ಮೇಲೆ ನಲಿದಾಡುತ್ತಲಿವೆ. ಅವುಗಳನ್ನೆಲ್ಲ ಸಂಗ್ರಹಿಸಿ ಬೆಳಕಿಗೆ ತರಬೇಕಾಗಿದೆ.

ಗುಲಬರ್ಗಾ ಜಿಲ್ಲೆಯ ತತ್ವಪದ ಸಾಹಿತ್ಯ ಪರಂಪರೆ ಹದಿನೇಳನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಈಗ ದೊರಕಿರುವ ಮಾಹಿತಿಗಳ ಪ್ರಕಾರ ಹದಿನೇಳನೇ ಶತಮಾನದಲ್ಲಿದ್ದ ರಾಮಪುರದ ಬಕ್ಕಪ್ಪನೇ ಈ ಜಿಲ್ಲೆಯ ಪ್ರಾರಂಭದ ತತ್ವಪದಕಾರನಾಗಿ ಕಾಣಿಸುತ್ತಾನೆ.

ರಾಮಪುರ ಬಕ್ಕಪ್ಪ (ಕ್ರಿ.ಶ. ೧೬೧೦-ಕ್ರಿ.ಶ.೧೭೦೦)

ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ರಾಮಪುರ ಒಂದು ಚಿಕ್ಕ ಹಳ್ಳಿ. ಇದು ಅಂದೇಲಿ ಗ್ರಾಮದಿಂದ ಐದು ಮೈಲು ಅಂತರದಲ್ಲಿದೆ. ಈ ಹಳ್ಳಿಯ ಪಕ್ಕದಲ್ಲಿಯೇ ಭೀಮಾ ನದಿ ಹರಿಯುತ್ತದೆ. ಬಕ್ಕಪ್ಪ ಈ ಹಳ್ಳಿಯಲ್ಲಿ ಹದಿನೇಳನೆಯ ಶತಮಾನದಲ್ಲಿದ್ದ ಪ್ರಮುಖ ಅನುಭಾವಿ ಕವಿ. ಹದಿನೇಳನೇ ಶತಮಾನದ ಕೊನೆಯ ಭಾಗದಲ್ಲಿ ಈ ಕವಿ ಪ್ರಸಿದ್ಧಿಗೆ ಬಂದನೆಂದು ತಿಳಿದುಬರುತ್ತದೆ. ಈತನ ಕಾಲವನ್ನು ಕ್ರಿ.ಶ. ೧೬೧೦ರಿಂದ ಕ್ರಿ.ಶ. ೧೭೦೦ ಎಂದು ಡಾ. ಎಂ.ಎಸ್. ಲಠ್ಠೆಯವರು ತಮ್ಮ 'ಜನಪದ ಕವಿಚರಿತೆ'ಯಲ್ಲಿ ಗುರುತಿಸಿದ್ದಾರೆ. ಈ ಕವಿ ಹದಿನೆಂಟನೇ ಶತಮಾನದ ಪ್ರಾರಂಭದ ದಶಕಗಳಲ್ಲಿಯೂ ಬದುಕಿದ್ದನೆಂಬ ವಿಷಯ ಆ ಹಳ್ಳಿಯ ಕೆಲವು ಹಿರಿಯರಿಂದ ತಿಳಿದುಬಂತು.

ಬಕ್ಕಪ್ಪನನ್ನು ರಾಮಪುರದ ಬಕ್ಕ, ಬೊಕಪ್ಪ, ಬೊಕಪ್ಪಯ್ಯ, ಬೊಕ್ಕಪ್ರಭು ಎಂಬ ಹೆಸರುಗಳಿಂದ ಕರೆಯುತ್ತಾರೆ. ರಾಮಪುರದ ಬೂದಿಬಸವೇಶ್ವರ ಈತನ ಆರಾಧ್ಯದೈವ. ಬಕ್ಕಪ್ಪ ನೂರಾರು ತತ್ವಪದಗಳನ್ನು ರಚಿಸಿರುವುದರ ಜತೆಗೆ ೨೧೧ ಪದ್ಯಗಳಿಂದ ಕೂಡಿರುವ 'ನಿಜಶರಣ ತ್ರಿವಿಧಿ' ಎಂಬ ಚಿಕ್ಕ ಕೃತಿ ಕೊಟ್ಟಿದ್ದಾನೆ. ಈತನು ವಚನಗಳನ್ನೂ ಬರೆದಿರಬಹುದೆಂದು ನಂಬಲಾಗಿದೆ.

ಬಕ್ಕಪ್ಪ ತನ್ನ ಹೆಸರನ್ನೇ ಕಾವ್ಯಾಂಕಿತವನ್ನಾಗಿರಿಸಿಕೊಂಡಿದ್ದಾನೆ. ಈತನ ತತ್ವಪದಗಳ ಕೊನೆಗೆ 'ರಾಮಪುರದ ಬಕ್ಕ' ಎಂಬ ಮುದ್ರಿಕೆಯಿದೆ. ಈತ ನೂರಾರು ತತ್ವಪದಗಳನ್ನು ರಚಿಸಿದ್ದರೂ, ಐವತ್ತು ಪದಗಳನ್ನು ಮಾತ್ರ ಸಂಗ್ರಹಿಸಲು ಸಾಧ್ಯವಾಯಿತೆಂದು ಡಾ. ಪಿ.ವಿ. ಮಲ್ಲಾಪುರ ಅವರು ಹೇಳಿದ್ದಾರೆ. ಬಿ.ಎಂ. ಸಿದ್ದವೀರಯ್ಯನವರು ಸಂಗ್ರಹಿಸಿದ ಇಪ್ಪತ್ತೆರಡು ತತ್ವಪದಗಳನ್ನು ೧೯೯೪ರಲ್ಲಿ ಶ್ರೀಶರಣ ಪ್ರಕಾಶನ ಕಲಬುರ್ಗಿ ಇವರು ಪ್ರಕಟಿಸಿದ್ದಾರೆ.

ಜಿಲ್ಲೆಯ ಭಜನೆಯ ಮೇಳಗಳಲ್ಲಿ ಬಕ್ಕಪ್ಪನ ತತ್ವಪದಗಳು ಜನಪ್ರಿಯವಾಗಿವೆ. ಮುಂದೆ ಬಂದ ಕಡಕೋಳ ಮಡಿವಾಳಪ್ಪನ ಮೇಲೆ ಬಕ್ಕಪ್ಪನ ಪ್ರಭಾವವಾಗಿದೆ. ಶರಣಸತಿ-ಲಿಂಗಪತಿಭಾವ, ಭಕ್ತಿ, ಆಧ್ಯಾತ್ಮ, ನೀತಿಯ ಅಂಶಗಳು ಈತನ ತತ್ವಪದಗಳ ವಸ್ತುಗಳಾಗಿವೆ.

"ಯವ್ವ ಕಡಿತ ಹಾವು ಕಡಿತ" ಎಂಬ ತತ್ವಪದವಂತೂ ರಾಮಪುರ ಬಕ್ಕಪ್ಪನ ಹೆಸರನ್ನು ಹಸಿರಾಗಿಸಿದೆ. ವಿಷಯವಾಸನೆಯ ಪ್ರತೀಕವಾದ ಹಾವು ಇಲ್ಲಿ ಸಹಜ ದೃಷ್ಟಾಂತವಾಗಿ ಮೂಡಿಬಂದಿದೆ. ಸತಿ-ಪತಿಭಾವದ ಮಧುರ ಭಕ್ತಿಯೊಂದಿಗೆ ಅನುಭಾವವನ್ನು ಅಭಿವ್ಯಕ್ತಿಸಿರುವ ಬಕ್ಕಪ್ಪನ ಹಾಡುಗಳು ಸರಳ ಮತ್ತು ಸುಂದರವಾಗಿವೆ. 'ಬೀಸನು ಬಾ ಗೋದಿ' ಎಂಬಂತಹ ಪದಗಳಲ್ಲಿ ದಿನನಿತ್ಯದ ವಿಷಯಗಳ ಮೂಲಕ ಆಧ್ಯಾತ್ಮವನ್ನು ಹೇಳಲಾಗಿದೆ. ಈತನ ಸಮಗ್ರ ತತ್ವಪದಗಳೆಲ್ಲಾ ಪ್ರಕಟವಾಗಬೇಕಾಗಿದೆ. ರಾಮಪುರ ವಿರಕ್ತಮಠದಲ್ಲಿ ಬಕ್ಕಪ್ಪನ ಸಮಾಧಿಯಿದೆ.

ಬಿದನೂರ ಗಂಗಮ್ಮ (೧೭೩೫-೧೮೧೦)

ಕಡಕೋಳ ಮಡಿವಾಳಪ್ಪನ ತಾಯಿಯೇ ಬಿದನೂರ ಗಂಗಮ್ಮ. ಈಕೆಯೂ ತತ್ವಪದಗಳನ್ನು ರಚಿಸಿದ್ದು, ಈಕೆಯ ಹನ್ನೆರಡು ಪದಗಳು ಈಗಾಗಲೇ ಕಲಬುರ್ಗಿ ಶರಣ ಪ್ರಕಾಶನದಿಂದ ಪ್ರಕಟವಾಗಿವೆ. ಶಿವಪುತ್ರಪ್ಪಾ ಮಹಾಂತಪುರ ಈ ಹಾಡುಗಳನ್ನು ಸಂಗ್ರಹಿಸಿದ್ದಾರೆ.

ಗಂಗಮ್ಮ ಮೂಲತಃ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣ ಗ್ರಾಮದವಳು. ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಬಂದಾಗ ನಾಗಠಾಣ ಗ್ರಾಮವನ್ನು ಬಿಟ್ಟು, ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಬಿದನೂರಿಗೆ ಬಂದು ತಂದೆಯ ಜತೆ ವಾಸಿಸುತ್ತಿದ್ದಳು. ಬಿದನೂರಿಗೆ ಬಂದಾಗ ಗಂಗಮ್ಮ ಬಾಲವಿಧವೆಯಾಗಿದ್ದಳು. ದಿನಗೂಲಿ ಮಾಡಿ ಜೀವನ ಸಾಗಿಸುತ್ತಿದ್ದ ತಂದೆ-ಮಗಳು ಬಸವೇಶ್ವರ ದೇವಾಲಯದ ಬಳಿ ವಾಸಿಸುತ್ತಿದ್ದರು. ಬಿದನೂರ ಮಲ್ಲಿಕಾರ್ಜುನ ಗೌಡರು ಗಂಗಮ್ಮನ ತಂದೆಯೊಂದಿಗೆ ಆಧ್ಯಾತ್ಮದ ವಿಷಯವನ್ನು ಚರ್ಚಿಸುತ್ತಿದ್ದರು. ಹೀಗೆ ಜೀವನ ಸಾಗಿಸುತ್ತಿದ್ದಾಗ ಗಂಗಮ್ಮನ ತಂದೆ ತೀರಿಕೊಂಡ. ಆಗ ಗಂಗಮ್ಮನಿಗೆ ಯಾರೂ ಆಸರೆಯಿಲ್ಲದಂತಾಯಿತು. ಆಗ ಮಲ್ಲಿಕಾರ್ಜುನಗೌಡರು ಅನಾಥೆ

ಗಂಗಮ್ಮನಿಗೆ ಆಶ್ರಯ ನೀಡಿದರು. ಜನ ಸಲ್ಲದ ಮಾತು ಆಡಿಕೊಳ್ಳತೊಡಗಿದರು. ಆಗ ಜೀವನದಲ್ಲಿ ಜಿಗುಪ್ಸೆಗೊಂಡ ಗಂಗಮ್ಮ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಬಾವಿಗೆ ಬೀಳಲು ಪ್ರಯತ್ನಿಸಿದಳು. ಆ ಸಂದರ್ಭದಲ್ಲಿ ಊರ ಹಿರೇಮಠದ ಚರಪಟ್ಟಾಧ್ಯಕ್ಷರಾದ ವಿರೂಪಾಕ್ಷಯ್ಯನವರು ಅವಳ ಆತ್ಮಹತ್ಯೆಯ ಪ್ರಯತ್ನವನ್ನು ತಡೆದರು. ಆಕೆಗೆ ಹೊಸ ಬದುಕು ನೀಡಿದರು. ಸ್ವಾಮಿಗಳಲ್ಲಿ ಗಂಗಮ್ಮನ ಪ್ರೀತಿ ಬೆಳೆಯಿತು. ಮುಂದೆ ಗಂಗಮ್ಮ ಮಡಿವಾಳಪ್ಪನಿಗೆ ಜನ್ಮವಿತ್ತಳು. ವಿರೂಪಾಕ್ಷಯ್ಯನೊಂದಿಗಿನ ಅನೈತಿಕ ಸಂಬಂಧದಿಂದ ಮಗನನ್ನು ಹೆತ್ತಳೆಂದು ಮತ್ತೆ ಜನ ಆಡಿಕೊಳ್ಳತೊಡಗಿದರು. ಈ ಸಂದರ್ಭದಲ್ಲಿ ಗಂಗಮ್ಮನಿಗೆ ಚಿಣಮಗೇರಿ ಮಹಾಂತ ಶಿವಯೋಗಿಗಳು ಧೈರ್ಯನೀಡಿದರು.

ಅವಮಾನಿತಳಾದ ಗಂಗಮ್ಮನ ಹಾಡುಗಳಲ್ಲಿ ಅರ್ಥಪೂರ್ಣವಾದ ಅನುಭಾವವಿದೆ. ಈಕೆಯ ಕಾಲ ಹದಿನೆಂಟನೆಯ ಶತಮಾನದ ಪ್ರಾರಂಭ. ಕ್ರಿ.ಶ. ೧೭೩೫ರಲ್ಲಿ ಈಕೆ ಜನಿಸಿರಬೇಕು. 'ಬಿದನೂರ ಮಡಿವಾಳ' ಎಂಬುದು ಈಕೆಯ ಅಂಕಿತವಾಗಿದೆ. ಈಕೆ ಜನಪದ ಸಾಹಿತ್ಯದಲ್ಲಿ ಬರುವ ಮೊದಲ ತತ್ವಪದಕಾರ್ತಿಯೆಂದು ಗುರುತಿಸಬಹುದಾಗಿದೆ. ತನ್ನ ಬದುಕಿನ ಕಹಿ ಸತ್ಯಗಳನ್ನು ಈಕೆ ಆಧ್ಯಾತ್ಮದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾಳೆ. 'ಜಾರತನ ಮಾಡಿದೆನವ್ವಾ ಜಂಗಮನೊಡಗೂಡಿ' ಎಂಬ ಪದ ಶರಣಸತಿ ಲಿಂಗಪತಿ ಭಾವದ ಮಧುರ ಭಕ್ತಿಯನ್ನು ವ್ಯಕ್ತಪಡಿಸುತ್ತದೆ.

ಕಡಕೋಳ ಮಡಿವಾಳಪ್ಪ (೧೭೮೫-೧೮೪೦)

ಮುಂಬೈ ಕರ್ನಾಟಕ ಪ್ರದೇಶಕ್ಕೆ ಶಿಶುನಾಳ ಶರೀಫನಿದ್ದಂತೆ, ಹೈದ್ರಾಬಾದ್ ಕರ್ನಾಟಕಕ್ಕೆ ಕಡಕೋಳ ಮಡಿವಾಳಪ್ಪ ಅತ್ಯಂತ ಜನಪ್ರಿಯನಾದ ಅನುಭಾವಿ ಕವಿಯಾಗಿದ್ದಾನೆ. ಕಡಕೋಳ ಮಡಿವಾಳಪ್ಪನ ಬಗೆಗೆ ಈಗಾಗಲೇ ಕೆಲವು ಲೇಖನಗಳು-ಕೃತಿಗಳು ಪ್ರಕಟವಾಗಿವೆ. "ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು" ಎಂಬ ಹೆಸರಿನಲ್ಲಿ ಡಾ. ಎಂ.ಎಸ್. ಲಕ್ಷ್ಮೆಯವರು ಮಡಿವಾಳಪ್ಪನ ತತ್ವಪದಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ, ಗದಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟಿಸಿದ್ದಾರೆ. ೧೯೮೭ರಲ್ಲಿ ಈ ಕೃತಿ ಬಂದಿದೆ. ಇದಕ್ಕಿಂತ ಪೂರ್ವದಲ್ಲಿ ಬಿಡಿ ಬಿಡಿಯಾದ ತತ್ವಪದಗಳನ್ನು ಬೇರೆಯವರು ಪ್ರಕಟಿಸಿದ್ದಾರೆ.

ಕಿ.ಶ. ೧೮ನೇ ಶತಮಾನದಲ್ಲಿದ್ದ ಮಡಿವಾಳಪ್ಪನ ಕಾಲ ನಿರ್ಣಯದಂತಹ ವಿಷಯದ ಬಗೆಗೆ ಈಗಾಗಲೇ ವಿದ್ವಾಂಸರು ಚರ್ಚಿಸಿದ್ದಾರೆ. ಕ್ರಿ.ಶ. ೧೮೨೦ ಎಂದು ಆರ್. ನರಸಿಂಹಾಚಾರ್ಯರು, ಕ್ರಿ.ಶ. ೧೭೪೬ ಎಂದು ಡಾ. ಸಿದ್ದಯ್ಯ ಪುರಾಣಿಕರು, ಕ್ರಿ.ಶ.

೧೮೨೦ ಎಂದು ಡಾ. ವಿ. ಶಿವಾನಂದರು, ಕ್ರಿ.ಶ. ೧೭೫೦ ಎಂದು ಡಾ. ಎಂ.ಎಸ್. ಲಕ್ಷ್ಮೆಯವರು ಮಡಿವಾಳಪ್ಪನ ಜನನದ ಕಾಲವನ್ನು ಕುರಿತು ಹೇಳಿದ್ದಾರೆ. ಇವೆಲ್ಲಾ ಅಂಶಗಳನ್ನು ಗಮನಿಸಿದ ನಂತರ; ನಾನು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿದ ನಂತರ ಆತನ ಕಾಲವನ್ನು ಕ್ರಿ.ಶ. ೧೭೬೫ರಿಂದ ಕ್ರಿ.ಶ. ೧೮೪೦ ಎಂದು ಸ್ಪಷ್ಟಪಡಿಸಬಹುದಾಗಿದೆ. ಬಿದನೂರಿನಲ್ಲಿ ವಿಧವೆ ಗಂಗಮ್ಮನ ಉದರದಲ್ಲಿ ಜನಿಸಿದ ಮಡಿವಾಳಪ್ಪನು ಹುಟ್ಟುತ್ತಲೇ ನಿಂದೆಯ ನುಡಿಗಳನ್ನು ಕೇಳಬೇಕಾಗಿ ಬಂತು. ಈತನು ಕಲುಬುರ್ಗಿ ಶರಣ ಬಸವೇಶನಿಗಿಂತ ೧೫ ವರ್ಷ ಚಿಕ್ಕವನು. ಮಲ್ಲಿಕಾರ್ಜುನಗೌಡನು ಮಡಿವಾಳಪ್ಪನನ್ನು ಅರಳಗುಂಡಿಗೆಗೆ ಕರೆದುಕೊಂಡು ಬಂದು, ದಾಸೋಹಮೂರ್ತಿ ಶರಣಬಸವೇಶನಿಗೆ ಪರಿಚಯ ಮಾಡಿಸಿ, ಮಡಿವಾಳಪ್ಪನ ಜೀವನವೃತ್ತಾಂತವನ್ನು ವಿವರಿಸಿದಾಗ ಶರಣಬಸವೇಶ ಯಾವುದೇ ತಾರತಮ್ಯವನ್ನೆಣಿಸದೆ ಕಲಕೇರಿ ಮರುಳಾರಾಧ್ಯರನ್ನು ಅರಳಗುಂಡಿಗೆಗೆ ಕರೆಯಿಸಿ ಮಡಿವಾಳಪ್ಪನಿಗೆ ಲಿಂಗದೀಕ್ಷೆ ಕೊಡಿಸುತ್ತಾನೆ. ಮಹಾಂತೇಶನ ಕೃಪೆಯಿಂದ ಮುಂದೆ ಮಡಿವಾಳಪ್ಪನೂ ಮಹಾಂತನಾಗಿ, ಅನುಭಾವಿಯಾಗಿ ಬೆಳೆದು ನಿಲ್ಲುತ್ತಾನೆ. ಶರಣಬಸಪ್ಪ ಅನ್ನದಾಸೋಹಕ್ಕೆ ಹೆಸರಾದರೆ, ಮಡಿವಾಳಪ್ಪ ಜ್ಞಾನದಾಸೋಹಕ್ಕೆ ಕಾರಣನಾಗುತ್ತಾನೆ.

ಬಿದನೂರು, ಶ್ರೀಶೈಲ, ಚಿಣಮಗೇರಿ, ಅರಳಗುಂಡಿಗೆ, ಕೆಂಭಾವಿ, ದಿಗ್ಗಿ ಹೀಗೆ ಅನೇಕ ಊರುಗಳನ್ನು ಸುತ್ತಿದ ಮಡಿವಾಳಪ್ಪ ವಿವಿಧ ರೀತಿಯ ಅನುಭವ ಪಡೆದುಕೊಂಡು, ದೊಡ್ಡ ಅನುಭಾವಿಯಾಗಿ ಕಡಕೋಳದಲ್ಲಿ ನೆಲೆನಿಲ್ಲುತ್ತಾನೆ. ಆತನ ಕಾರ್ಯಕ್ಷೇತ್ರವಾದ ಕಡಕೋಳ, ಮಡಿವಾಳಪ್ಪನಿಂದ ಪ್ರಸಿದ್ಧಿಗೆ ಬಂದಿದೆ. ಅರಳಗುಂಡಿಗೆಯ ಮಲ್ಲನಗೌಡನ ತಂಗಿ ಭಾಗಮ್ಮನೊಂದಿಗೆ, ಮಡಿವಾಳಪ್ಪ ಅನೈತಿಕ ಸಂಬಂಧ ಬೆಳೆಸಿದ್ದಾನೆಂದು ಹಳಪ್ಯಾಟಿ ಬಸಯ್ಯನಂಥವರು ಅಪವಾದ ಹೊರಿಸುತ್ತಾರೆ. ಮಲ್ಲನಗೌಡ ಮಡಿವಾಳಪ್ಪನ ಕೊಲೆ ಮಾಡಲು ಹೊಂಚುಹಾಕುತ್ತಾನೆ.

ಇಂತಹ ಅನೇಕ ಆರೋಪಗಳನ್ನು ಹೊತ್ತು ಊರೂರು ಅಲೆದ ಮಡಿವಾಳಪ್ಪ, ದುಡಿವ ವರ್ಗದಿಂದ ಬಂದ ಮಹತ್ವದ ಅನುಭಾವಿ ಕವಿ. ಜನರ ನಿಂದೆಯ ಮಾತುಗಳಿಗೆ ಅಂಜದೆ, ನೋವು ಅಪಮಾನಗಳನ್ನು ಸಹಿಸುತ್ತಲೇ ಬದುಕಿಗೆ ಅರ್ಥಪೂರ್ಣ ಪ್ರತಿಕ್ರಿಯೆಯನ್ನು ತೋರಿಸಿದ ಮಡಿವಾಳಪ್ಪ ಅನುಭಾವಿ ಕವಿಗಳಲ್ಲಿಯೇ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದವನಾಗಿದ್ದಾನೆ.

ಅಸಮಾನತೆಯ ವ್ಯವಸ್ಥೆಯಲ್ಲಿ ತಾಂಡವಾಡುತ್ತಿರುವ ಜಾತೀಯತೆ, ಮಡಿವಂತಿಕೆ, ಮೇಲು-ಕೀಳು ಭಾವನೆಗಳೆಲ್ಲವನ್ನೂ ಕಿತ್ತೊಗೆದ ಮಡಿವಾಳಪ್ಪ ಮಾನವೀಯತೆಯ ಹರಿಕಾರನಾಗುತ್ತಾನೆ. ಅಪಮಾನಿಸಿದವರಿಗೆ, ಆರೋಪಿಸಿದವರಿಗೆ ತನ್ನ ತತ್ವಪದಗಳ ಮೂಲಕವೇ

ಮಾತನಾಡಿ, ಅಂಥವರನ್ನೂ ಆಧ್ಯಾತ್ಮದ ದಾರಿಯಲ್ಲಿ ಕರೆದುಕೊಂಡು ಹೋಗುತ್ತಾನೆ. ಉಳಿದ ಅನುಭಾವಿ ಕವಿಗಳಲ್ಲಿ ಕಾಣಿಸದ ತೀವ್ರವಾದ ಸಾಮಾಜಿಕ ವಿಡಂಬನೆಯನ್ನು, ವಸ್ತು ನಿಷ್ಠತೆಯನ್ನು ಮಡಿವಾಳಪ್ಪನಲ್ಲಿ ಕಾಣಬಹುದಾಗಿದೆ.

ಮಡಿವಾಳಪ್ಪ ಸಾವಿರಾರು ತತ್ವಗಳನ್ನು ರಚಿಸಿದ್ದಾನೆ. ಆದರೆ ಅವೆಲ್ಲವೂ ಇಂದು ದೊರಕಿಲ್ಲ. ಡಾ. ಲಕ್ಕೆಯವರು ಸುಮಾರು ಮೂರುನೂರು ತತ್ವಪದಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ತತ್ವಪದಗಳ ಜತೆಗೆ ಮಡಿವಾಳಪ್ಪ ವಚನಗಳನ್ನೂ ರಚಿಸಿದ್ದಾನೆ. 'ನಿಜಲೀಲಾನುಭವ' ಎಂಬುದು ವಚನಗ್ರಂಥದ ಹೆಸರು. ಇವಲ್ಲದೆ ಇನ್ನೂ ಅನೇಕ ನಾಮಾವಳಿಗಳನ್ನು, ಬೆಡಗಿನ ವಚನಗಳನ್ನೂ ಈತ ರಚಿಸಿದ್ದಾನೆ. 'ಮಹಾಂತ' ಎಂಬುದು ಈತನ ಅಂಕಿತವಾಗಿದೆ.

ಮಡಿವಾಳಪ್ಪ ಆಧ್ಯಾತ್ಮ ಕ್ಷೇತ್ರದಲ್ಲಿ ತಾನು ಬೆಳೆಯುವುದರ ಜತೆಗೆ ಇತರ ಅನೇಕ ಅನುಭಾವಿ ಕವಿಗಳನ್ನು ಬೆಳೆಸಿದ. ಮಡಿವಾಳಪ್ಪನ ಅನೇಕ ಶಿಷ್ಯರು, ಮಡಿವಾಳಪ್ಪನೊಂದಿಗೆ ಮುಕ್ತವಾಗಿ ಚರ್ಚಿಸುತ್ತಿದ್ದರು. ಕಡಕೋಳ ಮಠದಲ್ಲಿ ಈ ಅನುಭಾವದ ಚರ್ಚೆ ನಡೆಯುತ್ತಿತ್ತು. ಇದನ್ನು "ಅನುಭಾವ ಗೋಷ್ಠಿ"ಯೆಂದೂ, "ಕೈವಲ್ಯ ಕಲ್ಯಾಣ"ವೆಂದೂ ಕರೆದಿದ್ದಾರೆ. ಈ ಗೋಷ್ಠಿಯಲ್ಲಿ ಖೈನೂರ ಕೃಷ್ಣಪ್ಪ, ತೆಲುಗುಬಾಳ ರಾಮಪ್ಪ, ಕಡ್ಲೆವಾಡದ ಸಿದ್ದಪ್ಪ, ಗಂವಾರ ಶಾಸ್ತ್ರಿ, ಕೂಡ್ಲೂರು ಬಸವಲಿಂಗಪ್ಪ, ಚೆನ್ನೂರ ಜಲಾಲಸಾಹೇಬ ಮುಂತಾದ ಅನುಭಾವಿ ಕವಿಗಳು ಭಾಗವಹಿಸುತ್ತಿದ್ದರು.

ಮಡಿವಾಳಪ್ಪನ ತತ್ವಪದಗಳು ತಮ್ಮ ಪ್ರಾದೇಶಿಕ ಸೊಗಡಿನಿಂದ ಗಮನ ಸೆಳೆಯುತ್ತವೆ. ಆಡುನುಡಿಯನ್ನು ಅನುಭಾವದೆತ್ತರಕ್ಕೇರಿಸಿ ಈ ಜನಪದ ಕವಿ, ಜನಸಾಮಾನ್ಯರ ಲೌಕಿಕ ಬದುಕಿನ ಮೂಲಕ ಆಧ್ಯಾತ್ಮವನ್ನು ಹುಡುಕುತ್ತಾನೆ. ನೀತಿಪದಗಳ ಜತೆಗೆ, ಸಾಮಾಜಿಕ ವಿಡಂಬನೆಯುಳ್ಳ ಪದಗಳೂ ಇವೆ. 'ಧನವ ಗಳಿಸಬೇಕು ಇಂಥಾದ್ದು' 'ಯಾವುದು ಮುಡಿಚಟ್ಟು?'ದಂತಹ ಅನೇಕ ತತ್ವಪದಗಳು ಮಡಿವಾಳಪ್ಪನ ಅನುಭಾವದೆತ್ತರವನ್ನು ತಿಳಿಸುತ್ತವೆ. ಜನಪದರ ಆಡುನುಡಿ, ನುಡಿಗಟ್ಟು, ಉಪಮೆ, ರೂಪಕಗಳು ಇಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ.

ಚನ್ನೂರ ಜಲಾಲಸಾಹೇಬ (೧೭೭೦-೧೮೫೦)

ಚನ್ನೂರ ಜಲಾಲಸಾಹೇಬ ಕರ್ನಾಟಕದ ಮೊಟ್ಟಮೊದಲನೆಯ ಮುಸ್ಲಿಂ ತತ್ವಪದಕಾರ. ಕಡಕೋಳ ಮಡಿವಾಳಪ್ಪನ ಸಮಕಾಲೀನನಾಗಿದ್ದ ಜಲಾಲಸಾಹೇಬ ಕ್ರಿ.ಶ. ೧೭೭೦ರಲ್ಲಿ ಜೇವರ್ಗಿ ತಾಲೂಕಿನ ಚೆನ್ನೂರಿನಲ್ಲಿ ಜನಿಸಿದ. ಜೇವರ್ಗಿಯ ಪೂರ್ವಕ್ಕೆ ಮೂರು ಮೈಲು ಅಂತರದಲ್ಲಿ

ಚೆನ್ನೂರು ಗ್ರಾಮವಿದೆ. ಕನ್ನಡದ ಪ್ರಸಿದ್ಧ ತತ್ವಪದಕಾರ ಶಿಶುನಾಳ ಶರೀಫ ಸಾಹೇಬನು ಕ್ರಿ.ಶ. ೧೮೮೯ರ ಮಾರ್ಚ್ ತಿಂಗಳಲ್ಲಿ ಜನಿಸಿದ್ದನೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ (ನೋಡಿ ಶಿಶುನಾಳ ಶರೀಫರ ಗೀತೆಗಳು, ಸಂ. ಡಾ. ಶಿವಾನಂದ ಗುಬ್ಬಣ್ಣನವರ, ಪುಟ : ೪, ೧೯೮೫). ಚೆನ್ನೂರ ಜಲಾಲಸಾಹೇಬ ಶರೀಫರಿಗಿಂತ ಮೊದಲು, ಐದು ದಶಕಗಳ ಪೂರ್ವದಲ್ಲಿ ಜನಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ. "ಗುರುಮಡಿವಾಳ" ಜಲಾಲಸಾಹೇಬನ ಅಂಕಿತವಾಗಿದೆ.

ಜಲಾಲಸಾಹೇಬ ಹುಟ್ಟಿನಿಂದ ಮುಸ್ಲೀಮ್‌ನಾದರೂ, ಶರಣ ಸಂಪ್ರದಾಯಕ್ಕೆ ಮಾರುಹೋದ ಮಹತ್ವದ ಅನುಭಾವಿ ಕವಿ. ಈ ಪ್ರದೇಶದ ಶ್ರೇಷ್ಠ ಅನುಭಾವಿ ಕವಿ ಕೂಡಲೂರು ಬಸವಲಿಂಗ ಶರಣರು ಜಲಾಲಸಾಹೇಬನ ಗುರುಗಳಾಗಿದ್ದರು. ಹನ್ನೆರಡು ವರ್ಷಗಳ ಕಾಲ ಗುರುವಿನ ಸೇವೆಗೈದ ಜಲಾಲಸಾಹೇಬ ಗುರುವಿನ ಸಂಸ್ಕಾರದಲ್ಲಿ ಅನುಭಾವಿಯಾಗಿ ಬೆಳೆದುನಿಂತ. ಶರೀಫನಿಗಿಂತಲೂ ಹಿರಿಯನಾಗಿರುವ ಜಲಾಲಸಾಹೇಬ ಪ್ರಚಾರಕ್ಕೆ ಬಂದಿಲ್ಲ. ಶರೀಫನಂತೆ ಅನೇಕ ಪವಾಡಗಳನ್ನು ಮಾಡಿದ ಜಲಾಲಸಾಹೇಬನ ಭೇಟಿಗಾಗಿ ಕಡಕೋಳ ಮಡಿವಾಳಪ್ಪ ಚೆನ್ನೂರಿಗೆ ಬರುತ್ತಾನೆ. ಆಗ ಇಬ್ಬರಿಗೂ ಚರ್ಚೆ ಪ್ರಾರಂಭವಾಗುತ್ತದೆ.

"ಫಕೀರನಾದರೆ ಮನಧಿಃಕಾರ ಮಾಡಿಕೊಂಡಿರಬೇಕು
ನಕಾರ ವಾಕಾರ ಶಿಕಾರ ವಕಾಯ ಯಕಾರ ಓಂಕಾರ ತಿಳಿದಿರಬೇಕು॥"

ಎಂದು ಮಡಿವಾಳಪ್ಪನು ಜಲಾಲಸಾಹೇಬನನ್ನು ಕುರಿತು ಹೇಳಿದಾಗ, ಅದಕ್ಕೆ ಉತ್ತರವಾಗಿ ಜಲಾಲಸಾಹೇಬ ಹೀಗೆ ಪ್ರತಿಕ್ರಿಯಿಸುತ್ತಾನೆ :

"ಜಂಗಮನಾದರೆ ಮನಲಿಂಗ ಮಾಡಿಕೊಂಡಿರಬೇಕು
ಅಂಗದಾಸೆಯಳಿದು ತಾ ಸಂಗನ ಶರಣರ ಕೂಡಿರಬೇಕು"

ಹೀಗೆ ಮಡಿವಾಳಪ್ಪ ಮತ್ತು ಜಲಾಲಸಾಹೇಬ ಇಬ್ಬರೂ ಆಧ್ಯಾತ್ಮ ಕುರಿತು ಮಾತನಾಡುತ್ತಾರೆ. ಹಿಂದೂ-ಮುಸ್ಲೀಮ್ ಭಾವೈಕ್ಯತೆಗೆ ನಂದಾದೀಪವಾಗಿ ಬೆಳಗಿದ ಈ ಅನುಭಾವಿ ಕವಿಗಳು ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಬಹುಮುಖ್ಯರಾಗುತ್ತಾರೆ. "ಸಬ್ ಕಹತೇ ಈಶ್ವರ ಅಲ್ಲಾ"ದಂತಹ ತತ್ವಪದಗಳು ಜಲಾಲಸಾಹೇಬನ ಸಮನ್ವಯ ಸಂಸ್ಕೃತಿಗೆ ಸಾಕ್ಷಿಯಂತಿವೆ.

ಜಲಾಲಸಾಹೇಬನು ಸಂಸಾರಸ್ಥನಾಗಿದ್ದ. ಸಂಸಾರದಲ್ಲಿದ್ದುಕೊಂಡೇ ಅನುಭಾವದ ಸಾಧ್ಯತೆಗಳನ್ನು ಕಂಡುಕೊಂಡ. ಇಂತಹ ಅನುಭಾವಿ ಕವಿಯ ಬಗೆಗೆ ಹೆಚ್ಚಿನ ವಿವರಗಳು ದೊರೆತಿಲ್ಲ. ಚನ್ನೂರಿನಲ್ಲಿ ಜಲಾಲಸಾಹೇಬ ಮತ್ತು ಆತನ ಹೆಂಡತಿಯ ಸಮಾಧಿಗಳಿವೆ. ಅವರ ವಂಶಜರು ಚನ್ನೂರಿನಲ್ಲಿನ್ನೂ ಇದ್ದಾರೆ. ಆದರೆ ಆತನ ಅಮೂಲ್ಯವಾದ ತತ್ವಪದಗಳನ್ನು ಇದುವರೆಗೆ ಯಾರೂ ಪ್ರಕಟಿಸಿಲ್ಲ. ಆತನ ಐದಾರು ಹಾಡುಗಳು ಮಾತ್ರ ನನಗೆ ದೊರೆತವು. ವೀರಶೈವ ಸಿದ್ಧಾಂತವನ್ನು ಗಹನವಾಗಿ ಅಧ್ಯಯನ ಮಾಡಿರುವ ಜಲಾಲಸಾಹೇಬ, ಆಡುನುಡಿಯ ಮೂಲಕ ಉರ್ದು-ಕನ್ನಡವನ್ನು ಬೆರೆಸಿ ಹೇಳುವ ರೀತಿ ಕುತೂಹಲಕಾರಿಯಾಗಿದೆ.

ಖೈನೂರ ಕೃಷ್ಣಪ್ಪ (೧೭೭೨-೧೮೫೫)

ಸುರಪುರ ತಾಲೂಕಿನ ಹಳ್ಳಿಯೊಂದರಲ್ಲಿ ಕ್ರಿ.ಶ. ೧೭೭೨ರಲ್ಲಿ ಜನಿಸಿದ ಖೈನೂರ ಕೃಷ್ಣಪ್ಪ ಮಡಿವಾಳಪ್ಪನ ಸಮಕಾಲೀನ ಕವಿ. ಮಡಿವಾಳಪ್ಪನ ಶಿಷ್ಯಂದಿರಲ್ಲಿ ಕೃಷ್ಣಪ್ಪನೂ ಒಬ್ಬನಾಗಿದ್ದಾನೆ. ಶಿವಭಟ್ಟ ಮತ್ತು ಕಾಶೀಬಾಯಿ ಎಂಬ ಶೈವಬ್ರಾಹ್ಮಣ ದಂಪತಿಗಳಿಗೆ ಮಗನಾಗಿ ಹುಟ್ಟಿಬಂದ ಕೃಷ್ಣಪ್ಪ, ಶಾಸ್ತ್ರ-ಪುರಾಣಗಳನ್ನು ತಿಳಿದುಕೊಂಡು ಪಂಡಿತನಾಗಿದ್ದ. ಮೊದಲು ಮಡಿವಾಳಪ್ಪನನ್ನು ಗೇಲಿಮಾಡಿ ನಂತರ ಆತನ ಅನುಭಾವದೆತ್ತರವನ್ನು ಕಂಡು ಶಿಷ್ಯನಾದ. ಸುರಪುರದ ದೊರೆಗಳಿಂದ ಭೂಮಿ-ಸೀಮೆ ಪಡೆದು ಮಡಿವಾಳಪ್ಪನ ಕೈವಲ್ಯ ತತ್ವವನ್ನು ಪ್ರಸಾರ ಮಾಡಲು ಅನೇಕ ಊರುಗಳಲ್ಲಿ ಮಠಗಳನ್ನು ಕಟ್ಟಿಸಿದ. ಕೃಷ್ಣಪ್ಪ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಹಾಡುಗಳನ್ನು ಮಾತ್ರ ಶಿವಪುತ್ರಪ್ಪ ಮಹಾಂತಪುರ, ಹುಚ್ಚಪ್ಪಜ್ಜ ಚಬನೂರ ಇವರು ಸಂಯುಕ್ತವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ''ಮಡಿವಾಳ''ವೆಂಬುದು ಈತನ ಅಂಕಿತವಾಗಿದೆ. ಈತನ ತತ್ವಪದಗಳಲ್ಲಿ ಸಾಮಾಜಿಕ ವಿಡಂಬನೆ ಎದ್ದುಕಾಣುತ್ತದೆ. ''ತಿಂಡಿಲಿಂದ ಹಾದರ ಮಾಡಿ ಪಂಡಿತ ಮಾತೊಂದ ಹೇಳತೀರಿ'' ಎಂಬ ಪದ ಜನಪ್ರಿಯವಾಗಿದೆ. ಶೈವಬ್ರಾಹ್ಮಣನಾಗಿ ಹುಟ್ಟಿ, ವೀರಶೈವ ಸಿದ್ಧಾಂತವನ್ನು ಪ್ರಸಾರ ಮಾಡಿದ ಈ ಕವಿ ಅಂದಿನ ಪಾಳೇಗಾರಿಕೆಯ ವಿರುದ್ಧ ಪ್ರತಿಭಟಿಸಿದ್ದು ಗಮನಾರ್ಹವಾಗುತ್ತದೆ.

ಕಡ್ಲೆವಾಡ ಸಿದ್ದಪ್ಪ (೧೭೭೫-೧೮೫೮)

ಖೈನೂರ ಕೃಷ್ಣಪ್ಪನಂತೆ, ಕಡ್ಲೆವಾಡ ಸಿದ್ದಪ್ಪನೂ ಮಡಿವಾಳಪ್ಪನ ಶಿಷ್ಯ. ಇಬ್ಬರಿಗೂ 'ನಾ' ಎಂಬಕ್ಷರ ಕೊಟ್ಟು ಪದಕಟ್ಟಲು ಮಡಿವಾಳಪ್ಪ ಹೇಳಿದಾಗ ; 'ನಾ ಕಡಕೋಳದ ಗುಲಾಮ' ಎಂದು ಕೃಷ್ಣಪ್ಪ ಪದ ಕಟ್ಟಿದರೆ, 'ನಾಯೇನು ಬಲ್ಲೆನಪ್ಪ ನಿಮ್ಮ ಕೂಸು' ಎಂದು ಸಿದ್ದಪ್ಪ ಪದ

ಕಟ್ಟುತ್ತಾ. ಕನ್ನವಾಡ ಗ್ರಾಮದ ಸಿದ್ದಪ್ಪ ಹೆಚ್ಚಾಗಿ ಮೌನಿಯಾಗಿರುತ್ತಿದ್ದ. ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಆದರೆ ಅವಿನ್ನೂ ಪ್ರಕಟವಾಗಿಲ್ಲ. 'ಎಷ್ಟು ತೊಳಿಯಲಮ್ಮಾ ಮನಸಿನ ಮೈಲಿಗಿ' ಎಂಬ ಪದ ಜನಪ್ರಿಯವಾಗಿದೆ. 'ಮಹಾಂತ ಮಡಿವಾಳ'ಯೆಂಬುದು ಈತನ ಅಂಕಿತವಾಗಿದೆ. ಈತನ ರಚನೆಗಳಲ್ಲಿ ನೀತಿಪದಗಳೇ ಹೆಚ್ಚು.

ಇತರ ಶಿಷ್ಯರು : ಇದೇ ಕಾಲದಲ್ಲಿದ್ದ ತೆಲುಗು ಬಾಳರಾಮಪ್ಪ ಮತ್ತು ಕೊಡ್ಲಿಬಸಲಿಂಗಪ್ಪ ಇಬ್ಬರೂ ಮಡಿವಾಳಪ್ಪನ ಶಿಷ್ಯರು. ಇವರಿಬ್ಬರೂ ತತ್ವಪದಗಳನ್ನು ರಚಿಸಿದ್ದಾರೆ. 'ಗುರು ಮಡಿವಾಳ' ಎಂಬುದು ತೆಲುಗುಬಾಳ ರಾಮಪ್ಪನ ಅಂಕಿತವಾದರೆ, 'ಮಡಿವಾಳನ ಮಗ' ಎಂಬುದು ಕೊಡ್ಲಿಬಸಲಿಂಗಪ್ಪನ ಅಂಕಿತವಾಗಿದೆ. ಇವರಿಬ್ಬರ ಕೆಲವು ಪದಗಳು ಮಾತ್ರ ಪ್ರಕಟವಾಗಿವೆ. ಶಿವಪುತ್ರಪ್ಪ ಮಹಾಂತಪುರ 'ನಾ ಕಡಕೋಳದ ಗುಲಾಮ' ಎಂಬ ಮೂರು ಭಾಗಗಳನ್ನೊಳಗೊಂಡಿರುವ ಚಿಕ್ಕ ಪುಸ್ತಕಗಳಲ್ಲಿ ಇವರ ಹಾಡುಗಳನ್ನು ಪ್ರಕಟಿಸಿದ್ದಾರೆ. ಕಲಬುರ್ಗಿ ಶರಣ ಪ್ರಕಾಶನದವರು ಈ ಚಿಕ್ಕ ಪುಸ್ತಕಗಳನ್ನು ಹೊರತಂದಿದ್ದಾರೆ.

ಜೇವರ್ಗಿ ತಾಲೂಕಿನ ಗಂಹಾರ ಗ್ರಾಮದ ಪಂಡಿತನಾದ ಗಂಹಾರ ಬಸವಲಿಂಗಶಾಸ್ತ್ರಿಯು ಕೂಡ ಮಡಿವಾಳಪ್ಪನ ಶಿಷ್ಯಂದಿರಲ್ಲಿ ಒಬ್ಬನಾಗಿದ್ದಾನೆ. ಮಡಿವಾಳಪ್ಪನ ಅನುಭಾವದೆತ್ತರವನ್ನು ಕಂಡು ಮಾರುಹೋದ ಗಂಹಾರ ಶಾಸ್ತ್ರಿಯು ಕೂಡ ಅನೇಕ ತತ್ವಪದಗಳನ್ನು ರಚಿಸಿರುವುದಾಗಿ ತಿಳಿದುಬರುತ್ತದೆ. ಮಾಯೆಯನ್ನು ಕುರಿತಂತೆ ಈತ ಚರ್ಚಿಸಿದ್ದಾನೆ. ಕಡಕೋಳ ಮಡಿವಾಳಪ್ಪನ ಈ ಎಲ್ಲ ಶಿಷ್ಯರ ತತ್ವಪದಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯ ಇಂದು ಅಗತ್ಯವಾಗಿದೆ.

ಎಮ್ಮಡಗಿ ಪ್ರಭುದೇವ (೧೭೮೫-೧೮೮೫)

ಸುರಪುರ ತಾಲೂಕಿನ ಕೃಷ್ಣಾತೀರದ ದಡದಲ್ಲಿರುವ ಎಮ್ಮಡಗಿಯಲ್ಲಿ ಪ್ರಭುದೇವ ಜನಿಸಿದ. ಯಾದಗಿರಿಯ ಬಂಡೇಶ ಈತನ ಗುರುವಾಗಿದ್ದ. 'ಎಮ್ಮಡಗಿಯ ಪ್ರಭುಲಿಂಗ' ಎಂಬ ಅಂಕಿತದಿಂದ ಈತ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ಗುರುಮಹತ್ವ, ನೀತಿ, ಆಧ್ಯಾತ್ಮ ಈತನ ತತ್ವಪದಗಳಲ್ಲಿ ಎದ್ದು ಕಾಣುತ್ತವೆ. ಅನೇಕ ರೂಪಕಗಳು ಈತನ ಪದಗಳಲ್ಲಿ ಸುಂದರವಾಗಿ ಮೂಡಿಬಂದಿವೆ. ಈತನ ಕಾಲವನ್ನು ಕ್ರಿ.ಶ. ೧೯೦೦ ಎಂದು ಡಾ. ವಿ. ಶಿವಾನಂದ ಅವರು ತಮ್ಮ 'ಸಗರನಾಡಿನ ಶಿವಶರಣರು' ಪುಸ್ತಿಕೆಯಲ್ಲಿ ತಿಳಿಸಿದ್ದಾರೆ. ಕವಿಚರಿತೆಯಲ್ಲಿ ಈ ಕವಿಯ ಹೆಸರು ಉಲ್ಲೇಖವಾಗಿಲ್ಲ. ಈತ ಹದಿನೆಂಟನೆಯ ಶತಮಾನದಲ್ಲಿಯೇ ಹುಟ್ಟಿರಬೇಕೆಂಬುದು ಈಗ ಸ್ಪಷ್ಟವಾಗಿದೆ. ಪ್ರಾಸಬದ್ಧವಾದ ನುಡಿಗಟ್ಟುಗಳು, ಜನಪದ ರೂಪಕಗಳು ಈತನ ಹಾಡುಗಳಲ್ಲಿ ಎದ್ದು ಕಾಣುತ್ತವೆ.

ನಿಂಬರಗಿಯ ನಾರಾಯಣ (೧೭೮೫-೧೮೮೦)

ಕ್ರಿ.ಶ. ೧೭೮೫ರಲ್ಲಿ ಸೊಲ್ಲಾಪುರದ ಸೋದರಮಾವನ ಮನೆಯಲ್ಲಿ ನಾರಾಯಣ ಜನ್ಮತಾಳಿದ. ಈತ ಆಳಂದ ತಾಲೂಕಿನ ನಿಂಬರಗಿ ಗ್ರಾಮದವನು. ನೇಕಾರ ಮನೆತನದಿಂದ ಬಂದ ನಾರಾಯಣ ಕುರಿಗಳನ್ನು ಕಾಯ್ದು, ಊರೂರು ಸುತ್ತಿ ಜೀವನಾನುಭವ ಪಡೆದ. ಸಿದ್ದಗಿರಿಯ ಮುಪ್ಪಿನ ಮುನಿಗಳಿಂದ ದೀಕ್ಷೆ ಪಡೆದು ಧ್ಯಾನಾಸಕ್ತನಾದ, ತತ್ವಪದಕಾರನಾಗಿ ಬೆಳೆದ. ಈತ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಈತನ ತತ್ವಪದಗಳಲ್ಲಿ ಭಕ್ತಿಯೇ ಪ್ರಧಾನವಾಗಿದೆ. ''ಗುರು-ಲಿಂಗ-ಜಂಗಮ'ವೆಂಬುದು ಈತನ ಮುದ್ರಿಕೆಯಾಗಿದೆ. ಕ್ರಿ.ಶ. ೧೮೮೦ರಲ್ಲಿ ನಿಧನನಾದ. ಈತನ ಹಾಡುಗಳು ಪ್ರಕಟವಾಗಿಲ್ಲ.

ಐನೂಲಿ ಕರಿಬಸವಾರ್ಯ (೧೮೦೦-೧೮೮೦)

ಚಿಂಚೋಳಿ ತಾಲೂಕಿನ ಐನೂಲಿಯೆಂಬ ಹಳ್ಳಿಯಲ್ಲಿ ಕ್ರಿ.ಶ. ೧೮೦೦ರಲ್ಲಿ ಕರಿಬಸವಾರ್ಯನು ಜನಿಸಿದ. ಅನೇಕ ತತ್ವಪದಗಳನ್ನು ರಚಿಸಿರುವ ಕರಿಬಸವಾರ್ಯನು ಲಾವಣಿ, ಸೋಬಾನಪದ, ಜೋಗುಳದ ಹಾಡುಗಳನ್ನೂ ರಚಿಸಿದ್ದಾನೆ. ಇವನು ಪದ ರಚನಾಕಾರನಾಗಿರುವುದರ ಜತಗೆ ಪ್ರಸಿದ್ಧ ಹಾಡಗಾರನೂ ಆಗಿದ್ದನು. 'ಘನಮಠೇಶ' ಎಂಬುದು ಈತನ ಹಾಡುಗಳ ಅಂಕಿತವಾಗಿದೆ. ಸಂಸಾರಸ್ಥನಾಗಿದ್ದರೂ ಕರಿಬಸವಾರ್ಯನದು ವೈರಾಗ್ಯಭಾವವಾಗಿತ್ತು. ಕವೀಂದ್ರ ಎಂಬ ಬಿರುದೂ ಈತನಿಗಿತ್ತು. ಬಹುಮುಖ್ಯ ಸಂಗತಿಯೆಂದರೆ ಹಾರಕೂಡ ಮುತ್ಯಾ ಈತನ ಶಿಷ್ಯನಾಗಿದ್ದ. ಈತನ ಮೊಮ್ಮಕ್ಕಳು ಇನ್ನೂ ಐನೂಲಿಯಲ್ಲಿದ್ದಾರೆ. ೧೮೮೦ರಲ್ಲಿ ಈತನು ನಿಧನನಾದನು. ಕರಿಬಸವಾರ್ಯನ ಎರಡುನೂರು ತತ್ವಪದಗಳನ್ನು ಶಿವರಾಜ ದೇವಪ್ಪ ಸಂಗ್ರಹಿಸಿದ್ದಾರೆ, ಅವಿನ್ನೂ ಪ್ರಕಟವಾಗಬೇಕಾಗಿದೆ. ಈತನ ಹಾಡುಗಳಲ್ಲಿ ವೀರಶೈವ ಸಿದ್ಧಾಂತಗಳ ಪ್ರತಿಪಾದನೆಯಿದೆ. ''ಕುಮಾರವಿಜಯ''ವೆಂಬ ಕಾವ್ಯವನ್ನೂ ಈತ ರಚಿಸಿದ್ದಾನೆ. ಅದು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ.

ಕೋಲಕುಂದಿ ಬಾಪಣ್ಣ (೧೮೫೦-೧೯೨೦)

ಮೂಲತಃ ಬೀದರ ಜಿಲ್ಲೆಯವನಾದ ಕೋಲಕುಂದಿ ಬಾಪಣ್ಣನು ಸೇಡಮ್ ತಾಲೂಕಿನ ಕೋಲಕುಂದಿ ಗ್ರಾಮದಲ್ಲಿ ಬಂದು ನೆಲೆಸುತ್ತಾನೆ. ಸಣ್ಣವನಿರುವಾಗಲೇ ತಾಯಿ-ತಂದೆಗಳನ್ನು ಕಳೆದುಕೊಂಡ ಬಾಪಣ್ಣ ಅನಾಥನಾಗಿ ತಿರುಗುತ್ತಾನೆ. ಕೋಲಕುಂದಿಯ ಊರ ಹೊರಗಿನ ವೀರಭದ್ರ ದೇವರ ಗುಡಿಯೇ ಈತನ ವಾಸಸ್ಥಾನವಾಗಿತ್ತೆಂದು ಆ ಹಳ್ಳಿ ಜನರು ಹೇಳುತ್ತಾರೆ.

ತನಗೆ ಯಾರೂ ಗತಿಯಿಲ್ಲವೆಂದು ತಿಳಿದು ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಪ್ರಯತ್ನಿಸುತ್ತಾನೆ. ಆದರೆ ವೀರಭದ್ರ ದೇವರ ಕೃಪೆಯಿಂದ ಬದುಕುಳಿದನೆಂದು ಜನ ಹೇಳುತ್ತಾರೆ. ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಬಾಪಣ್ಣ ವೀರಭದ್ರನನ್ನೇ ತನ್ನ ದೈವವೆಂದು ತಿಳಿದು ತತ್ವಪದಗಳನ್ನು ರಚಿಸುತ್ತಾನೆ. ಹಾಡುತ್ತ ಭಿಕ್ಷೆಗೆ ತಿರುಗಿದಾಗ ಜನರು ಈತನನ್ನು ಹುಚ್ಚನೆಂದು ಬಗೆದು ಹಿಂಸೆ ಕೊಡುತ್ತಾರೆ. ಆಗ ಈತನ ಬಾಯಿಂದ ಬಂದ ಮಾತುಗಳು ಸತ್ಯವಾಗುತ್ತವೆ. ಹಿಂಸಿಸಿದವರಿಗೆ ಸಂಕಷ್ಟಗಳು ಬಂದವಂತೆ. ಆಗ ಊರಿನ ಜನ ಈತನನ್ನು ಗೌರವದಿಂದ ಕಂಡರಂತೆ. ಎಪ್ಪತ್ತು ವರ್ಷ ಬದುಕಿದ ಬಾಪಣ್ಣ ೧೯೨೦ರಲ್ಲಿ ನಿಧನನಾದ. ಕೋಲಕುಂದಿಯ ರಾಚೋಟೆಪ್ಪ ಸ್ವಾಮಿ ಮೂಲಿಮಠ ಅವರಲ್ಲಿ ಬಾಪಣ್ಣನ ಹಾಡುಗಳ ಸಂಗ್ರಹವಿದೆಯೆಂದು ತಿಳಿದುಬಂದಿದೆ.

ಮೋಟನಳ್ಳಿ ಹಸನಸಾಹೇಬ (೧೮೫೫-೧೯೧೫)

ಮೋಟನಳ್ಳಿ ಹಸನಸಾಹೇಬ, ಮತ್ತೊಬ್ಬ ಮುಸ್ಲೀಮ್ ತತ್ವಪದಕಾರ. ಮುಸ್ಲೀಮನಾಗಿ ಹುಟ್ಟಿ, ವೀರಶೈವ ಪರಂಪರೆಯಲ್ಲಿ ಬೆಳೆದು, ತನ್ನ ಬದುಕು-ಬರಹಗಳ ಮೂಲಕ ಬೆಳಕನ್ನು ನೀಡಿದ ಹಸನಸಾಹೇಬ ಹಿಂದೂ-ಮುಸ್ಲೀಂ ಭಾವೈಕ್ಯತೆಗೆ ಸಾಕ್ಷಿಯಂತಿದ್ದಾನೆ. ಈತ ಸೇಡಮ್ ತಾಲೂಕಿನ ಇಟಗಾಲ ಗ್ರಾಮದಲ್ಲಿ ಕ್ರಿ.ಶ. ೧೮೫೫ರಲ್ಲಿ ಜನಿಸಿದ. ಚಿಕ್ಕವನಿದ್ದಾಗಲೇ ತಂದೆ-ತಾಯಿಗಳನ್ನು ಕಳೆದುಕೊಂಡ ಈ ಹಸನಸಾಹೇಬ ಇಟಗಾಲ ವೀರಭದ್ರನನ್ನೇ ತನ್ನ ಆರಾಧ್ಯ ದೈವವನ್ನಾಗಿಸಿಕೊಂಡು ಕನ್ನಡ ಕಲಿತು, ತತ್ವಪದ ರಚನೆಗೆ ತೊಡಗುತ್ತಾನೆ. ಇಟಗಾಲದ ವೀರಭದ್ರ ದೇವರನ್ನು ಇಟಪುರದ ಈಶನೆಂದು ಸ್ಮರಿಸಿದ್ದಾನೆ. 'ಇಟಪುರೀಶ' ಎಂಬುದು ಈತನ ಅಂಕಿತವಾಗಿದೆ.

ಯಾದಗಿರಿ ತಾಲೂಕಿನ ಮೋಟನಳ್ಳಿಗೆ ಅಳಿಯತನಕ್ಕೆಂದು ಬಂದ ಹಸನಸಾಹೇಬ, ಮೋಟನಹಳ್ಳಿಯಲ್ಲಿಯೇ ಬದುಕಿ ಹೆಸರಾಗಿ ಅಲ್ಲಿಯೇ ೧೯೧೫ರಂದು ಪ್ರಾಣಬಿಡುತ್ತಾನೆ. ಮೋಟನಳ್ಳಿಯಲ್ಲಿ ಈತನ ಸಮಾಧಿಯಿದೆ. ಪ್ರತಿ ವರ್ಷ ಭಾರತ ಹುಣ್ಣಿಮೆಯ ಐದನೆಯ ದಿನಕ್ಕೆ ಜಾತ್ರೆಯಾಗುತ್ತದೆ. ಸಹಸ್ರಾರು ಹಿಂದೂ-ಮುಸ್ಲೀಂ ಭಕ್ತರು ಸೇರಿ ಸಾಮರಸ್ಯದಿಂದ ಜಾತ್ರೆ ಮಾಡುತ್ತಾರೆ.

ಕೋರಟಗಿ ಗ್ರಾಮದಲ್ಲಿ ಹಸನಸಾಹೇಬ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕನಾಗಿ ಕನ್ನಡ ಕಲಿಸುವ ಸೇವೆ ಮಾಡಿದ್ದಾನೆ. ಹಸನಸಾಹೇಬನಿಗೆ ಬಹಳ ವರ್ಷ ಮಕ್ಕಳಾಗಿರಲಿಲ್ಲ. ವೀರಭದ್ರೇಶ್ವರನಿಗೆ ನಡೆದುಕೊಂಡಾಗ ಮಗು ಜನಿಸುತ್ತದೆ. ಹಸನರ ಹೆಂಡತಿಗೆ ತುಂಬಾ ಸಂತೋಷವಾಗುತ್ತದೆ. ಆದರೆ ಕೆಲವೇ ದಿನಗಳಲ್ಲಿ ಮಗು ತೀರಿಕೊಂಡಾಗ, ಹಸನಸಾಹೇಬ

ವೈರಾಗ್ಯ ತಾಳುತ್ತಾನೆ. ಕೋಟಗಿರಿ ಗ್ರಾಮದಲ್ಲಿ ಹಸನಸಾಹೇಬನ ಕೆಲವು ಪವಾಡ ಕತೆಗಳು ಜನಜನಿತವಾಗಿವೆ. ಚಿತ್ತಾಪುರದ ಹಿರಿಯ ಅನುಭಾವಿಗಳಾದ ಶ್ರೀ ರೇಷ್ಮಿ ಕಲ್ಲಪ್ಪನವರು ಹಸನನ ಬಗೆಗೆ ವಿವರ ಕೊಡುತ್ತಾರೆ. ಈ ಅಂಶವನ್ನು ಡಾ. ಲಕ್ಕೆಯವರು ತಮ್ಮ ಕವಿ ಚರಿತ್ರೆಯಲ್ಲಿ ಸ್ಮರಿಸಿದ್ದಾರೆ.

ಡಾ. ಎಂ.ಜಿ. ಬಿರಾದಾರ ಅವರು ೧೯೯೩ರ 'ಉದಯವಾಣಿ' ದೀಪಾವಳಿ ವಿಶೇಷಾಂಕದಲ್ಲಿ ಹಸನಸಾಹೇಬನ ಬಗೆಗೆ ಒಂದು ವಿಶೇಷ ಲೇಖನ ಬರೆದಿದ್ದಾರೆ. ಇದು ಹಸನನನ್ನು ಕುರಿತಂತೆ ಬಂದಿರುವ ಮೊದಲ ಲೇಖನ. ಶಿಶುನಾಳ ಶರೀಫ ಮತ್ತು ಹಸನಸಾಹೇಬ ಇವರೀರ್ವರ ಬದುಕಿನಲ್ಲಿ ಅನೇಕ ಹೋಲಿಕೆಗಳಿವೆ. "ವೀರಶೈವ ಮಠಗಳಲ್ಲಿ ಕನ್ನಡ ಕಲಿತ ಈರ್ವರು ಕೆಲ ಕಾಲ ಶಿಕ್ಷಕರಾಗಿದ್ದರು. ಈರ್ವರೂ ವೀರಶೈವ ತತ್ವಾನುಯಾಯಿಗಳು. ಈರ್ವರಿಗೂ ಒಂದೊಂದು ಮಗುವಾಗಿ ತೀರಿಕೊಂಡವು. ಈರ್ವರ ಪವಾಡಗಳಲ್ಲಿ ಗುಗ್ಗುಳ ಹೊತ್ತಿಸಿದ ಕೆಲವು ಸಾಮ್ಯಗಳಿವೆ. ತಮ್ಮ ಸಾವನ್ನು ಈರ್ವರೂ ಖಚಿತವಾಗಿ ನಿರೀಕ್ಷಿಸಿದ್ದರೆಂಬ ಹೇಳಿಕೆಗಳಿವೆ" ಎಂದು ಡಾ. ಬಿರಾದಾರ ಅವರು ವಿವರಿಸಿದ್ದಾರೆ.

ಹಸನಸಾಹೇಬ ಇನ್ನೂರಕ್ಕಿಂತ ಹೆಚ್ಚು ತತ್ವಪದಗಳನ್ನು ರಚಿಸಿದ್ದಾನೆ. ಡಾ. ವಿ. ಶಿವಾನಂದ ಅವರು ಹಸನನ ಹನ್ನೆರಡು ತತ್ವಪದಗಳನ್ನು ಮೇ, ೧೯೭೫ರ 'ಕರ್ನಾಟಕ ಭಾರತಿ'ಯಲ್ಲಿ ಮೊದಲಬಾರಿಗೆ ಪ್ರಕಟಿಸಿದ್ದಾರೆ. ಡಾ. ಬಿರಾದಾರ ಅವರಲ್ಲಿ ಹಾಗೂ ಶ್ರೀ ಬಿ. ಮಹಾದೇವಪ್ಪನವರಲ್ಲಿ ಹಸನಸಾಹೇಬನ ಹಾಡುಗಳ ಸಂಗ್ರಹಗಳಿವೆ. ಅವಿನ್ನೂ ಪ್ರಕಟವಾಗಬೇಕಾಗಿದೆ. ಆತ್ಮಜ್ಞಾನ, ಗುರುಮಹಿಮೆ ಯೋಗವಿಚಾರಗಳನ್ನು ತನ್ನ ತತ್ವಪದಗಳಲ್ಲಿ ಹೇಳುವ ಹಸನಸಾಹೇಬ ಸಾಮಾಜಿಕ ವಿಷಯಗಳತ್ತ ಗಮನಹರಿಸಿಲ್ಲ. ಶರೀಫನಲ್ಲಿ ಸಾಮಾಜಿಕ ವಿಡಂಬನೆಯನ್ನು ಕಂಡರೆ, ಹಸನನಲ್ಲಿ ಅನುಭಾವದೆತ್ತರವನ್ನು ಕಾಣಬಹುದಾಗಿದೆ.

ತಳವಾರಗೇರಿ ಬಸವನಗೌಡ (೧೮೬೦-೧೯೪೦)

ಸುರಪುರ ತಾಲೂಕಿನ ತಳವಾರಗೇರಿ ಒಂದು ಚಿಕ್ಕ ಗ್ರಾಮ. ಅಲ್ಲಿ ಕ್ರಿ.ಶ. ೧೮೬೦ರಲ್ಲಿ ಬಸವನಗೌಡ ಜನಿಸಿದ. ಈತ ಅನೇಕ ತತ್ವಪದಗಳನ್ನು ಬರೆಯುವುದರ ಜತೆಗೆ ಲಾವಣಿ, ಆಲಾಯಿ ಹಾಡು, ಬಯಲಾಟಗಳನ್ನು ರಚಿಸಿದ್ದಾನೆ. ಚಿಗರಿ ಬೇಟೆಯಲ್ಲಿ ನಿಪುಣನಾಗಿದ್ದ ಬಸವನಗೌಡ ಸಂಸಾರಿಯಾಗಿದ್ದು, ನಂತರದಲ್ಲಿ ಆಧ್ಯಾತ್ಮದ ಕಡೆ ಆಸಕ್ತಿ ತೋರಿಸಿದಂತೆ ಕಾಣಿಸುತ್ತದೆ. ಈತನ ಬಗೆಗೆ ಹೆಚ್ಚಿನ ವಿವರಗಳು ದೊರಕಿಲ್ಲ. ಬಸವನಗೌಡನ ತತ್ವಪದಗಳು ಪ್ರಕಟವಾಗಿಲ್ಲ. ಜನಪದ ಶೈಲಿ ಎದ್ದುಕಾಣುವ ಈತನ ತತ್ವಪದಗಳಲ್ಲಿ ಭಕ್ತಿ-ನೀತಿಯಂತಹ ವಿಷಯಗಳೇ ಪ್ರಧಾನವಾಗಿವೆ.

ಧಂಗಾಪುರ ಬಸವಣ್ಣೆಪ್ಪ (೧೮೭೦-೧೯೭೦)

ಆಳಂದ ತಾಲೂಕಿನ ಧಂಗಾಪುರ ಗ್ರಾಮದಲ್ಲಿ ಜನಿಸಿದ ಬಸವಣ್ಣೆಪ್ಪನು ಕಬ್ಬಲಗೇರ ಜನಾಂಗದಲ್ಲಿ ಹುಟ್ಟಿಬಂದ ತತ್ವಕಾರ. ಒಕ್ಕಲುತನ ಮಾಡುವುದರ ಜತೆಗೆ ಕಮ್ಮಾರಿಕೆಯ ಕಸುಬನ್ನೂ ಈತ ಕಲಿತಿದ್ದ. ಈತನಿಗೆ ಬಸವಣ್ಣೆಪ್ಪ ನಾಟಿಕಾರನೆಂದು ಕರೆಯುತ್ತಿದ್ದರು. ನೂರು ವರಷ ಬದುಕಿದ ಬಸವಣ್ಣೆಪ್ಪ ತುಂಬು ಜೀವನ ನಡೆಸಿದ. ಅನೇಕ ತತ್ವಪದಗಳ ರಚನೆಯ ಜತೆಗೆ ಬಸವಣ್ಣೆಪ್ಪ ಸಣ್ಣಾಟವನ್ನೂ ರಚಿಸಿದ್ದಾನೆ. ಹಂತಿಹಾಡು, ಮೊಹರಂ ಹಾಡುಗಳನ್ನು ರಚಿಸಿದ್ದಾನೆ. 'ಭಾಗಣ್ಣ' ಎಂಬುದು ಈತನ ಅಂಕಿತವಾಗಿದೆ. ಹಿಂದೂ-ಮುಸಲ್ಮಾನರ ಸಾಮರಸ್ಯವನ್ನು ಈತನ ತತ್ವಪದಗಳಲ್ಲಿ ಕಾಣಬಹುದಾಗಿದೆ. ಈತನ ಹಾಡುಗಳು ಇನ್ನೂ ಪ್ರಕಟವಾಗಿರುವುದಿಲ್ಲ.

ಮಹಾಗಾಂವದ ಗುರುಲಿಂಗಸಿದ್ಧ (೧೮೭೩-೧೯೩೮)

ಗುಲಬರ್ಗಾ ತಾಲೂಕಿನ ಮಹಾಗಾಂವದಲ್ಲಿ ಕ್ರಿ.ಶ. ೧೮೭೩ರಲ್ಲಿ ಗುರುಲಿಂಗ ಸಿದ್ಧ ಜನಿಸಿದ. ಈತನ ತಂದೆ ಸಿದ್ದಪ್ಪ, ತಾಯಿ ವೀರಮ್ಮ. ಈ ಗ್ರಾಮದಲ್ಲಿ ಸಿದ್ಧಕವಿಯೆಂದೇ ಈತ ಜನಪ್ರಿಯನಾಗಿದ್ದಾನೆ. ಗಾಂವಠಿ ಶಾಲೆಯಲ್ಲಿ ಓದು ಕಲಿತ ಗುರುಲಿಂಗಸಿದ್ಧ ವೀರಶೈವ ಸಿದ್ಧಾಂತದ ಕಡೆ ಆಕರ್ಷಿತನಾದ. ಅರವತ್ತುಮೂರು ಪುರಾತನರ, ಶರಣರ ಚರಿತ್ರೆಯನ್ನು ಚಿಕ್ಕ-ಚಿಕ್ಕ ಪುಸ್ತಕಗಳಲ್ಲಿ ಪ್ರಕಟಿಸಿದ. ಅನೇಕ ದೊಡ್ಡಾಟಗಳನ್ನು ರಚಿಸಿರುವ ಈತ ನೂರಾರು ತತ್ವಪದಗಳನ್ನು ಬರೆದಿದ್ದಾನೆ. 'ಕನ್ನಡ ಕವಿತಿಲಕ'ನೆಂದು ಜನರು ಈತನಿಗೆ ಬಿರುದು ಕೊಟ್ಟು ಸತ್ಕರಿಸಿದರಂತೆ. ನಾಲ್ಕು ಜನ ಹೆಂಡಂದಿರನ್ನು ಹೊಂದಿದ್ದ ಈತ ಐವರು ಮಕ್ಕಳನ್ನು ಪಡೆದಿದ್ದ. ಸಂಸಾರದಲ್ಲಿದ್ದುಕೊಂಡ ಕೈವಲ್ಯ ಸಾಧನೆ ಮಾಡಿದ ಈ ಸಿದ್ಧಕವಿ ೧೯೩೮ರಲ್ಲಿ ಕೊನೆಯುಸಿರೆಳೆದ. 'ವರಪುರ ಶಿವಲಿಂಗರೂಪ' ಎಂಬುದು ಈತನ ಅಂಕಿತವಾಗಿದೆ.

ದೇಗಾವಿ ಗುಂಡಪ್ಪ (೧೮೭೭-೧೯೩೭)

ಆಳಂದ ತಾಲೂಕಿನ ದೇಗಾವದಲ್ಲಿ ೧೮೭೭ರಲ್ಲಿ ಗುಂಡಪ್ಪ ಜನಿಸಿದ. ದೇಗಾವದ ಹೆಬ್ಬಾಳ ಮನೆತನದ ಪರ್ವತಪ್ಪನ ಮಗನೇ ಈ ಗುಂಡಪ್ಪ. ಗಾಂವಠಿ ಶಾಲೆಯಲ್ಲಿ ಮೋಡಿ ಭಾಷೆಯಲ್ಲಿ ನಾಲ್ಕನೇ ಇಯತ್ತೆ ಕಲಿತು, ಶಾಸ್ತ್ರ ಜ್ಞಾನ ಪಡೆದುಕೊಂಡ ಗುಂಡಪ್ಪ ದೇಗಾವ ಮಹಾಲಿಂಗಪ್ಪನ ಶಿಷ್ಯನಾಗಿದ್ದಾನೆ. 'ಗುಂಡು-ಭದ್ರ' ಎಂಬುದು ಈತನ ಅಂಕಿತವಾಗಿದೆ. ಈತನ ಹಾಡುಗಳು ಬೆಡಗಿನ ರೂಪದಲ್ಲಿವೆ.

ಕಲಬುರ್ಗಿಯ ಅಂಬಾದಾಸ (೧೮೭೭-೧೯೩೨)

ಗುಲಬರ್ಗಾದವನೇ ಆದ ಅಂಬಾದಾಸ ಪ್ರಸಿದ್ಧ ಹಾಡುಗಾರನಾಗಿದ್ದ ಪಿರೋಜನ ಮಗ. ದೇಗಾವಿ ಹಜರತ್ ಕವಿಯ ಸಮಕಾಲೀನನಾಗಿದ್ದ. ಈತ ಅನೇಕ ತತ್ವಪದಗಳನ್ನು, ಲಾವಣಿ, ಗೀಗೀ, ರಿವಾಯತ್ ಹಾಡುಗಳನ್ನು ರಚಿಸಿದ್ದಾನೆ. ಕಲಬುರ್ಗಿಯ ಒಕ್ಕಲಗೇರಿಯಲ್ಲಿ ಈ ಕವಿ ವಾಸಿಸುತ್ತಿದ್ದ. ಈತನ ಮಗನೂ ಹಾಡುಗಾರನಾಗಿದ್ದಾನೆ. ಹಾಡು ಹಾಡುತ್ತ ಬಂದ ಮನೆತನ ಇವರದು. ಶ್ರೀ ಶರಣ ಬಸವೇಶ್ವರ ಮತ್ತು ಬಂದೇನವಾಜ ಇಬ್ಬರನ್ನೂ ಸ್ಮರಿಸಿ ಈತ ಹಾಡು ರಚಿಸಿದ್ದಾನೆ. ಈತನ "ಕಲ್ಗಿ" ಇಲ್ಲದೆ ಬಂದೇನವಾಜ ಗಂಧ ನಡೆಯುವುದಿಲ್ಲ. 'ಅಂಬಾದಾಸ' ಎಂಬುದು ಈತನ ಅಂಕಿತವಾಗಿದೆ.

ನರೋಣಾದ ಹೈದರಲಿ (೧೮೭೭-೧೯೩೭)

ಆಳಂದ ತಾಲೂಕಿನ ನರೋಣಾದಲ್ಲಿ ಹೈದರಲಿ ಜನಿಸಿದ. ಮುಸ್ಲಿಂ ಮನೆತನದ ಲಾಡಲೆ ಸಾಬಶೇಖನ ಮಗನಾಗಿ ಹೈದರಲಿ ಹುಟ್ಟಿದ. ಈತನ ಮಾತೃಭಾಷೆ ಉರ್ದು, ಕಲಿತದ್ದು ಮೋಡಿ, ತತ್ವಪದ ಬರೆದದ್ದು ಕನ್ನಡದಲ್ಲಿ. ಗಾಂವಠಿ ಶಾಲೆಯೊಂದರಲ್ಲಿ ಶಿಕ್ಷಕನಾಗಿ ಸೇವೆಸಲ್ಲಿಸುತ್ತಿದ್ದ ಈತ ಹುಟ್ಟು ಪ್ರತಿಭಾವಂತ. ಅನೇಕ ತತ್ವಪದಗಳನ್ನು ರಚಿಸಿರುವ ಹೈದರಲಿ ಲಾವಣಿ, ಮೊಹರಮ್ ಹಾಡುಗಳನ್ನೂ ರಚಿಸಿದ್ದಾನೆ. ಹೆಮರೆಡ್ಡಿ ಮಲ್ಲಮ್ಮನ ನಾಟಕವನ್ನು ರಚಿಸಿರುವ ಈತ ನಟನೂ ಆಗಿದ್ದ. ಈತನ ತತ್ವಪದಗಳಲ್ಲಿ ಕನ್ನಡ-ಉರ್ದು ಭಾಷೆಗಳ ಬಳಕೆ ಹದವರಿತು ಬಂದಿದೆ. ಈತನ ಹಾಡುಗಳು ಇನ್ನೂ ಪ್ರಕಟವಾಗಿಲ್ಲ. ೧೮೭೭ರಲ್ಲಿ ಹುಟ್ಟಿದ ಈ ಕವಿ ೧೯೩೭ರಲ್ಲಿ ನಿಧನನಾದನೆಂದು ತಿಳಿದುಬರುತ್ತದೆ.

ರಸ್ತಾಪುರ ಭೀಮಕವಿ (೧೮೭೭-೧೯೪೭)

ಶಹಪೂರ ತಾಲೂಕಿನ ಒಂದು ಹಳ್ಳಿ ರಸ್ತಾಪುರ. ಅಲ್ಲಿ ಕ್ರಿ.ಶ. ೧೮೭೭ರಲ್ಲಿ ಕುರುಬರ ಮನೆತನದ ಜಂಬುಲಿಂಗ ಮತ್ತು ಭೀಮವ್ವ ದಂಪತಿಗಳಿಗೆ ಮಗನಾಗಿ ಭೀಮಕವಿ ಜನಿಸಿದ. ಗಾಂವಠಿ ಶಾಲೆಯಲ್ಲಿ ಎರಡನೆ ಇಯತ್ತೆವರೆಗೆ ಓದಿದ ಈ ಕವಿ ಬದುಕಿನ ಅನುಭವದ ಶಾಲೆಯಿಂದಲೇ ಬಹಳಷ್ಟನ್ನು ಕಲಿತುಕೊಂಡ. ಅನೇಕ ತತ್ವಪದಗಳ ಜತೆಗೆ, ಲಾವಣಿ, ಗೀಗೀ ಪುರಾಣ ಕಾವ್ಯಗಳನ್ನೂ ಈತ ರಚಿಸಿದ್ದಾನೆ. ಸುರಪುರದ ವೆಂಕಟಪ್ಪ ನಾಯ್ಕ, ಈತನ ಹಾಡು ಕೇಳಿ ಮೆಚ್ಚಿ ಭೂಮಿಯನ್ನು ಉಂಬಳಿ ಕೊಟ್ಟು 'ಭೀಮಕವಿ'ಯೆಂಬ ಬಿರುದು ಕೊಟ್ಟಿರುವನೆಂದು ಹೇಳುತ್ತಾರೆ. ಈತನ ಮನೆತನದ ಉದ್ಯೋಗ ಒಕ್ಕಲುತನವಾದರೂ ಈತ ಕೆಲವು ವರ್ಷ ಗಾಂವಠಿ ಶಾಲೆಯ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದಾನೆ. ಈತ ಸಣ್ಣಾಟಗಳನ್ನಾಡುತ್ತ ಒಂದು ನಾಟಕ ಕಂಪನಿ

ಕಟ್ಟಿಕೊಂಡು ಊರೂರು ಅಲೆದು ಕಲೆಯ ಪ್ರಸಾರ ಮಾಡಿದ್ದಾನೆ.

ಭೀಮಕವಿ ಕಾಳಿದಾಸಾಖ್ಯಾನ, ನಳಚರಿತ, ಸಿದ್ಧರಾಮಚರಿತ, ಚರಬಸವೇಶ್ವರ ಪುರಾಣ, ಭೀಮವಿಲಾಸ, ಗಿರಿಜಾಕಲ್ಯಾಣ, ಚಂದ್ರಹಾಸ ಮೊದಲಾದ ಕಾವ್ಯಗಳನ್ನು ರಚಿಸಿದ್ದಾನೆ. ''ಶಂಕರ ಕೈವಲ್ಯ ಕಲ್ಪದ್ರುಮ'' ಎಂಬುದು ಈತನ ತತ್ತ್ವಪದಗಳ ಸಂಗ್ರಹವಾಗಿದೆ. ಈ ಕೃತಿ ೧೯೩೦ರಲ್ಲಿ ಪ್ರಕಟವಾಗಿದೆ. 'ಗುರುಶಂಕರ' ಎಂಬುದು ಈತನ ಅಂಕಿತವಾಗಿದೆ. ಕರ್ನೂಲು ಜಿಲ್ಲೆಯ ಪೂಲ್ಸಿಂತಿ ಶಂಕರಗುರು ಈ ಕವಿಯ ಗುರುವಾಗಿದ್ದನೆಂದು ತಿಳಿದುಬರುತ್ತದೆ. 'ಕುರುಬರೋ ನಾವು ಕುರುಬರೋ' ಎಂಬ ತತ್ತ್ವಪದ ಪ್ರಸಿದ್ಧವಾಗಿದೆ. ಅಭಿನವ ಕಾಳಿದಾಸನೆಂದು ಬಿರುದು ಪಡೆದ ಈ ಕವಿ ೧೯೪೬-೪೭ರಲ್ಲಿ ಪ್ಲೇಗ್ ರೋಗಕ್ಕೆ ತುತ್ತಾದನೆಂದು ತಿಳಿದುಬರುತ್ತದೆ. ಈತನನ್ನು ಕುರಿತಂತೆ ಮೊದಲ ಲೇಖನ ಬರೆದ ಬಸವರಾಜ ಸಗರ ಅವರು 'ಸಗರನಾಡ ದರ್ಶನ'ದಲ್ಲಿ ಪ್ರಕಟಿಸಿದ್ದಾರೆ.

ಅಂಬಲಗಿ ಜಗದೇವಪ್ಪ (೧೮೮೦-೧೯೩೭)

ಆಳಂದ ತಾಲೂಕಿನ ಒಂದು ಸಣ್ಣ ಹಳ್ಳಿ ಅಂಬಲಗಿ. ಅಲ್ಲಿ ಕ್ರಿ.ಶ. ೧೮೮೦ರಲ್ಲಿ ಜಗದೇವಪ್ಪ ಜನಿಸಿದ. ಒಕ್ಕಲಿಗನಾಗಿದ್ದ ಈತ ಮೋಡಿ ಓದಿಕೊಂಡಿದ್ದ. ಭಜನೆ ಪದಗಳನ್ನು ರಚಿಸುವುದರ ಜತೆಗೆ ಲಾವಣಿ, ಗೀಗೀ, ಬಯಲಾಟಗಳನ್ನೂ ರಚಿಸಿದ್ದಾನೆ. 'ಕಲ್ಲಿಂಗೇಶ್ವರ' ಎಂಬುದು ಈತನ ಅಂಕಿತವಾಗಿದೆ. ಕ್ರಿ.ಶ. ೧೮೮೦ರಲ್ಲಿ ಜನಿಸಿ ೧೯೩೭ರಲ್ಲಿ ನಿಧನನಾಗಿದ್ದಾನೆ. ವೀರಶೈವ ತತ್ತ್ವಗಳನ್ನು ತನ್ನ ಪದಗಳಲ್ಲಿ ಹೇಳಿದ್ದಾನೆ. ಜಗದೇವಪ್ಪ ರಚಿಸಿರುವ 'ಶುಕಮುನಿ' ಎಂಬ ದೊಡ್ಡಾಟ ಈ ಪ್ರದೇಶದಲ್ಲಿ ಜನಪ್ರಿಯತೆಯನ್ನು ಪಡೆದಿದೆ. ಈತನ ಪದಗಳು ಇನ್ನೂ ಪ್ರಕಟವಾಗಿಲ್ಲ.

ಹೀರಾಪುರ ಚೆನ್ನಬಸವೇಶ್ವರ ಸ್ವಾಮಿ (೧೮೮೪-೧೯೩೦)

ಗುಲಬರ್ಗಾದ ಬ್ರಹ್ಮಪುರದಲ್ಲಿ ವಾಸಿಸುತ್ತಿದ್ದ ಚೆನ್ನಬಸವೇಶ್ವರ ಸ್ವಾಮಿ ಮೂಲತಃ ಹೀರಾಪುರದವನಾಗಿದ್ದಾನೆ. ಕ್ರಿ.ಶ. ೧೮೮೪ರಲ್ಲಿ ಚೆನ್ನಬಸಯ್ಯ ಜನಿಸಿದ. ಈತನ ತಂದೆಯ ಹೆಸರು ಪರ್ವತೇಶ್ವರಸ್ವಾಮಿ ನಂದಿಮಠ. ನಾಲ್ಕು ತಿಂಗಳಲ್ಲಿ ಕನ್ನಡ ಕಲಿತು ಖಾಸಗಿ ಶಾಲೆಯ ಶಿಕ್ಷಕನಾದ, ಚೆನ್ನಬಸವೇಶ್ವರಸ್ವಾಮಿ ಕೆಲಕಾಲ ಅಂಗಡಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡಿದ್ದಾನೆ. ಅನೇಕ ತತ್ತ್ವಪದಗಳನ್ನು ರಚಿಸಿರುವ ಈತ ಹೋಳೀಹಾಡು, ಸೋಬಾನೆಪದ, ಬಯಲಾಟಗಳನ್ನೂ ಬರೆದಿದ್ದಾನೆ. 'ಶರಣ' ಎಂಬುದು ಈತನ ಹಾಡುಗಳ ಮುದ್ರಿಕೆಯಾಗಿದೆ. ಭಕ್ತಿನೀತಿ, ಆಧ್ಯಾತ್ಮದ ಚಿಂತನೆಗಳೇ ಈತನ ತತ್ತ್ವಪದಗಳಲ್ಲಿ ಹೇರಳವಾಗಿ ಸಿಗುತ್ತವೆ.

ವಡಗೇರಿ ಭೀಮಶ್ಯಾ (೧೮೮೪-೧೯೫೪)

ವಡಗೇರಿ, ಜೇವರಗಿ ತಾಲೂಕಿನ ಒಂದು ಗ್ರಾಮ. ಅಲ್ಲಿ ಕ್ರಿ.ಶ. ೧೮೮೪ರಲ್ಲಿ ಭೀಮಶ್ಯಾ ಜನಿಸಿದ. ಈತ ಪ್ರಸಿದ್ಧ ಹಾಡುಗಾರನಾಗಿದ್ದನೆಂದು ತಿಳಿದುಬರುತ್ತದೆ. ಕ್ರಿ.ಶ. ೧೮೮೪ರಲ್ಲಿ ಜನಿಸಿದ ಈತ ಬಿಜಾಪುರ ಜಿಲ್ಲೆಯ ಬೀಬೀ ಇಂಗಳಗಿ ಹಸನಸಾಹೇಬನ ಸಮಕಾಲೀನನಾಗಿದ್ದ. ಒಕ್ಕಲುತನ ಮನೆತನದಲ್ಲಿ ಹುಟ್ಟಿದ ಭೀಮಶ್ಯಾ ಅದೇ ಅನುಭವಗಳನ್ನು ತತ್ವಪದಗಳಲ್ಲಿ ಹೇಳಿದ್ದಾನೆ. ಗಂಡು ಹೆಚ್ಚೆಂದು ಸಾರುವ ಹರದೇಶಿ ಲಾವಣಿಗಳನ್ನು ರಚಿಸಿರುವ ಈತ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದನೆಂದು ತಿಳಿದುಬರುತ್ತದೆ.

ಕೌಲಗಿ ಆನಂದರಾಯ (೧೮೮೭-೧೯೩೭)

ಆಳಂದ ತಾಲೂಕಿನ ದೇಗಾವದಲ್ಲಿ ಕ್ರಿ.ಶ. ೧೮೮೭ರಲ್ಲಿ ಆನಂದರಾಯ ಹುಟ್ಟಿದ. ಈತ ಒಕ್ಕಲುತನದ ಮನೆತನದಿಂದ ಬಂದ ಕವಿ. ಅನೇಕ ತತ್ವಪದಗಳನ್ನು ರಚಿಸಿರುವ ಕೌಲಗಿ ಆನಂದರಾಯ ಮೊಹರಮ್ ಹಾಡುಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಈತನ ಬಗೆಗೆ ಹೆಚ್ಚಿನ ಮಾಹಿತಿಗಳು ದೊರಕಿಲ್ಲ.

ಕಾಳಗಿ ಮಶಾಕಸಾಬ (೧೮೮೭-೧೯೪೭)

ಐತಿಹಾಸಿಕ ಸ್ಥಳವಾಗಿರುವ ಕಾಳಗಿ, ಗುಲಬರ್ಗಾ ಜಿಲ್ಲೆಗೆ ಒಳಪಟ್ಟ ಹಳ್ಳಿ. ಇಲ್ಲಿ ಕ್ರಿ.ಶ. ೧೮೮೭ರಲ್ಲಿ ಮುಸ್ಲಿಮ ಮನೆತನದಲ್ಲಿ ಮಶಾಕಸಾಬ ಜನಿಸುತ್ತಾನೆ. ಈತನು ಅರವತ್ತು ವರ್ಷ ಬದುಕಿದ್ದ. ಅನೇಕ ತತ್ವಪದಗಳನ್ನು ರಚಿಸುವುದರ ಜತೆಗೆ ರಿವಾಯತ್ ಪದಗಳನ್ನೂ ಬರೆದಿದ್ದಾನೆ. ಈತನ ತತ್ವಪದಗಳಲ್ಲಿ ಭಾವೈಕ್ಯತೆ ನೀತಿಯ ವಿಚಾರಗಳಿವೆ. ಈತನ ಹಾಡುಗಳನ್ನು ಇದುವರೆಗೂ ಯಾರೂ ಪ್ರಕಟಿಸಿಲ್ಲ.

ಗುರುವರೇಣ್ಯ ಶರಣ (೧೮೮೭-೧೯೬೧)

ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಬಾಲೇಸಾಹೇಬನ ಜಾವಳಗಿಯಲ್ಲಿ ಕ್ರಿ. ೧೮೮೭ರ ಸುಮಾರಿಗೆ ಗುರುವರೇಣ್ಯ ಶರಣ ಜನಿಸಿದ. ಗುರುಮಠದ ಶಿವಲಿಂಗಯ್ಯ - ರಾಚಮ್ಮ ಈತನ ತಂದೆ-ತಾಯಿಗಳು. ತನ್ನ ಒಂಬತ್ತನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಶರಣ, ಗುಲಬರ್ಗಾಕ್ಕೆ ಬಂದು ಬಸವಲಿಂಗ ಶಾಸ್ತ್ರಿಗಳ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ. ಯಂತ್ರ-ಮಂತ್ರದ ವಿದ್ಯೆಯನ್ನೂ ಕಲಿತ. ತಾವರಗೇರಿ ಗ್ರಾಮದ ಅಡಿವೆಯ್ಯನ ಮಗಳು ಅಣೆಮ್ಮಳನ್ನು ತನ್ನ ಮೂವತ್ತುನಾಲ್ಕನೇ ವಯಸ್ಸಿನಲ್ಲಿ ಮದುವೆಯಾದ. ಸಂಸಾರ ಸಮೇತನಾಗಿ ಪೂರ್ವಾರ್ಜಿತ ಮಠವಿದ್ದ ಹೊಳಕುಂದಾ ಗ್ರಾಮಕ್ಕೆ ಬಂದು ನೆಲೆಸಿದ. ರೇವಣಸಿದ್ದಯ್ಯ ಮತ್ತು ಶಿವಲಿಂಗಯ್ಯನೆಂಬ ಇಬ್ಬರು ಮಕ್ಕಳು ಜನಿಸಿದರು.

ಹರಸೂರು ಗ್ರಾಮದ ಕಲ್ಲೆಮಠದ ಶ್ರೀ ಕರಿಸಿದ್ದೇಶ್ವರ ಶರಣರು ಗುರುವರೇಣ್ಯನ ಸ್ವಪ್ನದಲ್ಲಿ ದರ್ಶನ ಕೊಟ್ಟರು. ಅಲ್ಲಿಂದ ಆಧ್ಯಾತ್ಮದ ಹಸಿವು ಪಪ್ರಾಂಭವಾಯಿತು. ಈತ ಅನೇಕ ಪವಾಡಗಳನ್ನೂ ಮಾಡಿದನೆಂದು ಹೊಳಕುಂದಾ ಗ್ರಾಮದ ಜನರು ಹೇಳುತ್ತಾರೆ. ಈತ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ೧೦೧ ತತ್ವಪದಗಳನ್ನೊಳಗೊಂಡ 'ತತ್ವಾನುಬೋಧ' ಎಂಬ ಕೃತಿ ೧೮೫೮ರಲ್ಲಿಯೇ ಪ್ರಕಟವಾಗಿದೆ. 'ಕಲಿದ್ವೇಶ' ಈ ಕವಿಯ ಅಂಕಿತವಾಗಿದೆ. ಗುಲಬರ್ಗಾದ ಆಡುಮಾತುಗಳಲ್ಲಿ ಅನುಭಾವವನ್ನು ಕವಿ ಹಿಡಿದಿಟ್ಟಿದ್ದಾನೆ. ಕ್ರಿ.ಶ. ೧೯೬೧ರಲ್ಲಿ ಈ ಕವಿ ನಿಧನನಾಗಿದ್ದಾನೆ. ಹೊಳಕುಂದಾಮಠದ ಹೊರಗಿನ ಬಯಲಿನಲ್ಲಿ ಈ ಕವಿಯ ಸಮಾಧಿಯಿದೆ.

ದೇವಿಕೇರಿ ರೇವಯ್ಯ (೧೮೮೭-೧೯೬೭)

ಸುರಪುರ ತಾಲೂಕಿನ ದೇವಿಕೇರಿ ಒಂದು ಸಣ್ಣಹಳ್ಳಿ. ಇಲ್ಲಿ ಕ್ರಿ.ಶ. ೧೮೮೭ರಲ್ಲಿ ರೇವಯ್ಯ ಜನಿಸಿದನೆಂದು ತಿಳಿದುಬರುತ್ತದೆ. ಜಂಗಮ ಮನೆತನದಲ್ಲಿ ಹುಟ್ಟಿದ ರೇವಯ್ಯ ಕಂತಿಭಿಕ್ಷ ಮಾಡುತ್ತ, ಜನಸಾಮಾನ್ಯರಿಗೆ ನೀತಿ ಬೋಧನೆ ಮಾಡುತ್ತಿದ್ದ. ಅನೇಕ ತತ್ವಪದಗಳನ್ನು ರಚಿಸಿರುವ ರೇವಯ್ಯ ಊರಲ್ಲಿ ದೊಡ್ಡಾಟಗಳನ್ನು ಕಲಿಸುತ್ತಿದ್ದ. ಸ್ವತಃ ದೊಡ್ಡಾಟಗಳನ್ನು ಈತ ರಚಿಸಿದ ವಿಷಯ ತಿಳಿದುಬರುತ್ತದೆ. ತನ್ನ ನಲವತ್ತನೆಯ ವಯಸ್ಸಿನಲ್ಲಿ ಕಣ್ಣು ಕಳೆದುಕೊಂಡ ರೇವಯ್ಯ, ನಿಜ ಜೀವನದಲ್ಲಿ ಕುರುಡನಾಗಿ ಬದುಕಿದರೂ ಆಧ್ಯಾತ್ಮ ಕ್ಷೇತ್ರದಲ್ಲಿ ಹೊಸಕಣ್ಣು ಪಡೆದ. ಈತನ ಹಾಡುಗಳು ಪ್ರಕಟವಾಗಿಲ್ಲ.

ಅಮ್ಮಾಪುರದ ಹನುಮಂತ : (೧೮೯೦-೧೯೪೬)

ಕ್ರಿ.ಶ. ೧೮೯೦ರಲ್ಲಿ ಸುರಪುರ ತಾಲೂಕಿನ ಅಮ್ಮಾಪುರ ಗ್ರಾಮದಲ್ಲಿ ಬೇಡರ ಜಾತಿಗೆ ಸೇರಿದ ಪಣಕೆದಾರ ಮನೆತನದಲ್ಲಿ ಈ ಕವಿ ಜನಿಸಿದ. ನಾಲ್ಕನೆಯ ಇಯತ್ತೆವರೆಗೆ ಅಭ್ಯಾಸ ಮಾಡಿದ ಹನುಮಂತ ಒಕ್ಕಲುತನ ಮಾಡುತ್ತಿದ್ದ. ತತ್ವಪದಗಳ ಜತೆಗ ಲಾವಣಿ, ಹಂತಿಹಾಡು, ಗೀಗೀ ಪದಗಳನ್ನೂ ಈತ ರಚಿಸಿದ್ದಾನೆ.

ಇದೇ ಊರಿನ ಅಕ್ಕಸಾಲಿಗ ಮನೆತನದ ವೀರಣ್ಣ ಕೂಡ ಒಳ್ಳೆಯ ತತ್ವಪದಕಾರನಾಗಿದ್ದ. ವೀರಣ್ಣ ಮತ್ತು ಹನುಮಂತ ಇಬ್ಬರೂ ಆಪ್ತ ಸ್ನೇಹಿತರಾಗಿದ್ದರು. ವೀರಣ್ಣ ತನ್ನ ಸ್ನೇಹಿತನ ನೆನಪಿಗಾಗಿ, ಹನುಮಂತನ ಹೆಸರಿನಲ್ಲಿಯೇ ಹಾಡುಗಳನ್ನು ಕಟ್ಟಿ, ಹಾಡುತ್ತಿದ್ದ. ಇಬ್ಬರೂ ಅಮ್ಮಾಪುರ ಬಲಭೀಮನ ಸ್ಮರಣೆ ಮಾಡಿದ್ದಾರೆ. ಇವರ ಹಾಡುಗಳು ಇನ್ನೂ ಪ್ರಕಟವಾಗಿಲ್ಲ.

ಕಾರಭಾಸಗಿಯ ರೇವಣಸಿದ್ಧಯ್ಯ ಸ್ವಾಮಿ (೧೮೯೦-೧೯೭

ಅಫಜಲಪುರ ತಾಲೂಕಿನ ಕಾರಭಾಸಗಿ ಗ್ರಾಮದ ಮರಿಸ್ವಾಮಿ ಮತ್ತು ಗಂಗಮ್ಮ ದಂಪತಿಗಳ ಮಗನಾಗಿ ರೇವಣಸಿದ್ಧಯ್ಯ ಕ್ರಿ.ಶ. ೧೮೯೦ರಲ್ಲಿ ಜನಿಸಿದ. ಗಾಂವಠಿ ಶಾಲೆಯಲ್ಲಿ ನಾಲ್ಕನೇ ಇಯತ್ತವರೆಗೆ ಮೋಡಿ ಭಾಷೆಯಲ್ಲಿ ಅಭ್ಯಾಸ ಮಾಡಿದ ಈತ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದಾನೆ. ಅನೇಕ ತತ್ವಪದಗಳನ್ನು ರಚಿಸಿರುವ ರೇವಣಸಿದ್ಧಯ್ಯ ಬಯಲಾಟಗಳನ್ನೂ ಬರೆದಿದ್ದಾನೆ. ಕಾರಭಾಸಗಿಯಿಂದ ಈತ ಮುಂದೆ ಮದರಾ(ಕೆ) ಗ್ರಾಮಕ್ಕೆ ಹೋಗಿ ಇದ್ದುದು ತಿಳಿದುಬರುತ್ತದೆ. ಆಯುರ್ವೇದ ಔಷಧದಲ್ಲಿಯೂ ಪರಿಣಿತನಾಗಿದ್ದ ಕವಿ ಬಯಲಾಟದಲ್ಲಿ ವೇಷ ಕಟ್ಟುತ್ತಿದ್ದನೆಂದು ಗೊತ್ತಾಗುತ್ತದೆ. 'ಕಾಡಸಿದ್ಧ ಶಿವಯೋಗಿ' ಎಂಬುದು ಈತನ ಅಂಕಿತವಾಗಿದೆ. ಭಕ್ತಿ, ನೀತಿ ಈತನ ಪದಗಳಿಗೆ ಮುಖ್ಯ ವಸ್ತುವಾಗಿವೆ. ವೀರಶೈವ ಸಿದ್ಧಾಂತಗಳನ್ನು ತನ್ನ ತತ್ವಪದಗಳಲ್ಲಿ ಆಡುಮಾತುಗಳಲ್ಲಿ ವಿವರಿಸಿದ್ದಾನೆ. ಈತನ ತತ್ವಪದಗಳು, ಇನ್ನೂ ಪ್ರಕಟವಾಗದೆ ಉಳಿದಿವೆ.

ಸಿದ್ಧರಾಮ ಶಿವಯೋಗಿ (೧೮೯೧-೧೯೫೩)

ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದಲ್ಲಿ ಕ್ರಿ.ಶ. ೧೮೯೧ರಂದು ಸಿದ್ಧರಾಮ ಜನಿಸಿದ. ತಂದೆ ಶಿವಲಿಂಗಪ್ಪ, ತಾಯಿ ಚವಡಾಬಾಯಿ. ಗುರುಬಸಪ್ಪ ಮತ್ತು ಸಿದ್ಧಮಲ್ಲಪ್ಪ ಎಂಬ ಇಬ್ಬರು ತಮ್ಮಂದಿರು. ನೇಕಾರ ಮನೆತನದಲ್ಲಿ ಹುಟ್ಟಿದ ಸಿದ್ಧರಾಮನಿಗೆ ಒಳ್ಳೆಯ ಸಂಸ್ಕಾರ ದೊರೆಯಿತು. ಪ್ರತಿದಿವಸ ತಂದೆ ಶಿವಲಿಂಗಪ್ಪನವರು ಮಗನನ್ನು ಸದ್ಗುರು ಶ್ರೀಶರಣ ಶಿವಲಿಂಗೇಶ್ವರರ ದರ್ಶನಕ್ಕೆ ಕರೆದೊಯ್ಯುತ್ತಿದ್ದರು. ಆಗ ಬಾಲಕನಾಗಿದ್ದ ಸಿದ್ಧರಾಮ "ಕಣ್ಣುಮುಚ್ಚಿ ಕುಳಿತರೆ ಶಿವ ಕಾಣಿಸುವನೆ?" ಎಂದು ಗುರುಗಳನ್ನು ಪ್ರಶ್ನಿಸಿದ್ದ.

ಆಳಂದ ಊರಿನ ಉಳ್ಳೆ ಮನೆತನದ ಬುದ್ಧಪ್ಪನವರ ಮಗಳು ಕಾಶಿಬಾಯಿಯೊಂದಿಗೆ ಸಿದ್ಧರಾಮನ ವಿವಾಹವನ್ನು ಹಿರಿಯರು ಮಾಡಿದರು. ಆದರೆ ಸಿದ್ಧರಾಮ ಸಂಸಾರಿಯಾಗಲಿಲ್ಲ. ಹೆಂಡತಿಯನ್ನು ತಾಯಿಯಂತೆ ಕಂಡ. ಅಕ್ಕಲಕೋಟೆಯ ಶ್ರೀ ರೇವಣಸಿದ್ಧ ಶರಣರು ಈತನಿಗೆ ಗುರುವಾಗಿ ದೊರೆತರು. ಹುಬ್ಬಳ್ಳಿಯ ಶ್ರೀಸಿದ್ಧಾರೂಢರು ಸಿದ್ಧರಾಮನನ್ನು ಆಶೀರ್ವದಿಸಿದರು. ಸಿದ್ಧರಾಮ ಶಿವಯೋಗಿಯಾದ, ತತ್ವಪದ ರಚಿಸಿದ, ಅನುಭಾವದೆತ್ತರಕ್ಕೆ ತಲುಪಿದ. "ಸಿದ್ಧಲಿಂಗ ಕೈವಲ್ಯ"ವೆಂಬ ಈತನ ತತ್ವಪದಗಳ ಸಂಗ್ರಹ ೧೯೫೪ರಲ್ಲಿ ಮೊದಲು ಮುದ್ರಣಗೊಂಡಿದೆ. ಇದರಲ್ಲಿ ಎಪ್ಪತ್ತೈದು ತತ್ವಪದಗಳಿವೆ. 'ಸಿದ್ಧ', 'ಗುರುಸಿದ್ಧ' ಎಂಬುದು ಈತನ ಅಂಕಿತವಾಗಿದೆ. ೧೯೫೩ರಲ್ಲಿ ನಿಧನನಾಗಿರುವ, ಈತನ ಸಮಾಧಿ ಮಾದನ ಹಿಪ್ಪರಗಾದಲ್ಲಿದೆ.

ನರೋಣಾದ ಕಾಶೀನಾಥ (೧೮೯೨-೧೯೬೨)

ಕಾಶೀನಾಥನು ಮೂಲತಃ ಆಳಂದದವನು. ನಂತರ ಉದ್ಯೋಗ ಹುಡುಕಿ ಆಳಂದ ತಾಲೂಕಿನ ನರೋಣಾ ಗ್ರಾಮಕ್ಕೆ ಬಂದು ನೆಲೆಸಿದವನಾಗಿದ್ದಾನೆ. ನಾರಾಯಣದೇವ ಈತನ ಗುರು. ಗುರು ಸೇವೆಯಲ್ಲಿದ್ದುಕೊಂಡೇ ತತ್ವಪದ, ಲಾವಣಿ, ಡಪ್ಪಿನಾಟಗಳನ್ನು ರಚಿಸಿದ್ದಾನೆ. ಈತನ 'ಕಬೀರ-ಕಮಾಲ' ಎಂಬ ಸಣ್ಣಾಟವು ಈ ಭಾಗದಲ್ಲಿ ಜನಪ್ರಿಯವಾಗಿದೆ. ನೇಕಾರ ವೃತ್ತಿಯಿಂದ ಬಂದ. ಕಾಶೀನಾಥನ ತತ್ವಪದಗಳಲ್ಲಿ ಆವೃತ್ತಿಗೆ ಸಂಬಂಧಿಸಿದ ವಸ್ತುಗಳು ಸಂಕೇತಗಳಾಗಿ ಬಂದಿವೆ. ಈತ ನೂರಾರು ತತ್ವಪದಗಳನ್ನು ರಚಿಸಿದ್ದಾನೆಂದು ಹೇಳುತ್ತಾರೆ. ಇವಾವೂ ಪ್ರಕಟವಾಗಿಲ್ಲ.

ಬೇನೂರ ಭಗವಾನ ಸಿಂಗ : (೧೮೯೫-೧೯೬೬)

ಭಗವಾನಸಿಂಗನು ಗುಲಬರ್ಗಾ ತಾಲೂಕಿನ ಬೇನೂರು ಗ್ರಾಮದವನು. ಕ್ರಿ.ಶ. ೧೮೯೫ರಲ್ಲಿ ರಜಪೂತರ ಮನೆತನದಲ್ಲಿ ಹುಟ್ಟಿದ ಈ ಕವಿ ತಕ್ಕಮಟ್ಟಿಗೆ ಅಭ್ಯಾಸ ಮಾಡಿದ್ದ. ಅನೇಕ ಬಯಲಾಟಗಳನ್ನು ಬರೆದಿರುವ ಈತ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ರಜಪೂತ ಸಂಸ್ಕೃತಿಯ ಕೆಲವು ಆಚರಣೆಗಳನ್ನು ಈತನ ತತ್ವಪದಗಳಲ್ಲಿ ಕಾಣಬಹುದಾಗಿದೆ. ಈತನು ಭಾನಾಮತಿ ವಿದ್ಯೆಯನ್ನೂ ತಿಳಿದವನಾಗಿದ್ದನೆಂದು ಹೇಳುತ್ತಾರೆ. ಭಗವಾನಸಿಂಗನ ತತ್ವಪದಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿಲ್ಲ.

ರಾಜೋಳದ ಮುರಘೇಂದ್ರ ಸ್ವಾಮಿ : (೧೮೯೫-೧೯೭೯)

ಸೇಡಂ ತಾಲೂಕಿನ ಗೌಡಗಾಂವದಲ್ಲಿ ಕ್ರಿ.ಶ. ೧೮೯೫ರಲ್ಲಿ ಶರಣಯ್ಯ-ಬಸಲಿಂಗಮ್ಮ ದಂಪತಿಗಳಿಗೆ ಮಗನಾಗಿ ಮುರಘೇಂದ್ರ ಜನಿಸಿದ. ಕರಿಘುಳೇಶ್ವರ, ರಾಮಲಿಂಗ ಇಬ್ಬರು ಸೋದರರು. ಈ ಮೂವರು ಸೋದರರೂ ಆಧ್ಯಾತ್ಮಕ್ಷೇತ್ರ ಪ್ರವೇಶಿಸಿದರು. ತಮ್ಮ ಕರಿಘುಳೇಶನಿಗೆ, ಅಣ್ಣನಾದ ಮುರಘೇಂದ್ರನೇ ಗುರು. ಮೂವರು ಸೋದರರೂ ತತ್ವಪದಗಳನ್ನು ರಚಿಸಿದ್ದಾರೆ. ಮುಂದೆ ಇವರು ಅನುಭಾವಿ ಕವಿಗಳಾಗಿ, ಶರಣರಾಗಿ ಬೆಳೆದು ಬೇರೆ ಬೇರೆ ಸ್ಥಳಗಳಲ್ಲಿ ನೆಲೆನಿಂತರು. ರಾಮಲಿಂಗನು-ರಾಮಲಿಂಗೇಶ್ವರನಾಗಿ ಶಹಾಪುರ ತಾಲೂಕಿನ ಖಾನಾಪುರದಲ್ಲಿ, ಕರಿಘುಳಿ-ಕರಿಘುಳೇಶ್ವರನಾಗಿ ಪರ್ತಾಬಾದಿನಲ್ಲಿ, ಮುರಘೇಂದ್ರ-ಮುರಘೇಂದ್ರಸ್ವಾಮಿಯಾಗಿ ಸೇಡಂ ತಾಲೂಕಿನ ರಾಜೋಳದಲ್ಲಿ ಪ್ರಸಿದ್ಧನಾದನು.

ಮುರಘೇಂದ್ರ ಸ್ವಾಮಿ 'ಕರಿಘುಳೇಶ್ವರ' ಅಂಕಿತದಲ್ಲಿ ಅನೇಕ ತತ್ವಪದ ರಚಿಸಿದ್ದಾರೆ. ಅದರಲ್ಲಿ ತೊಂಬತ್ತು ತತ್ವಪದಗಳನ್ನು ಡಿ.ಎಸ್. ಕುಮಾರ ಎಂಬುವವರು ಸಂಗ್ರಹಿಸಿ, "ಶರಣ ಪ್ರಕಾಶನ ಕಲಬುರ್ಗಿ"ಯಿಂದ (೧೯೯೨) ಪ್ರಕಟಿಸಿದ್ದಾರೆ. ವೇಷಧಾರಿ ಡಾಂಭಿಕರನ್ನು ಖಂಡಿಸುವ ಮುರಘೇಂದ್ರರರು ಸಂಸಾರ ಬಿಡಬಾರದೆಂದು ಹೇಳಿದ್ದಾರೆ. ಮುರಘೇಂದ್ರರ ಶಿಷ್ಯ ಇಮಲಾಪುರದ ರಾಚೋಟಿ ಪೀರಸ್ವಾಮಿಯೂ ತತ್ವಪದ ರಚಿಸಿದ್ದಾನೆ.

ನರೋಣಾದ ಬಂಡಪ್ಪ (೧೮೯೮-೧೯೬೦)

ಆಳಂದ ತಾಲೂಕಿನ ನರೋಣಾದಲ್ಲಿ ಕ್ರಿ.ಶ. ೧೮೯೮ರಲ್ಲಿ ಬಂಡಪ್ಪ ವೀರಶೈವ ಮನೆತನದಲ್ಲಿ ಜನಿಸಿದ. ಚಂದಪ್ಪ ಮತ್ತು ಕಾಶೀಬಾಯಿ ಬಂಡಪ್ಪನ ತಂದೆ-ತಾಯಿಗಳು. ಗಾಂವಠಿ ಶಾಲೆಯಲ್ಲಿ ಮೂರನೇ ಇಯತ್ತೆ ಓದಿದ ಬಂಡಪ್ಪ ಕೈವಲ್ಯ ಶಾಸ್ತ್ರವನ್ನು ಆಳವಾಗಿ ಅಭ್ಯಾಸ ಮಾಡಿದ. ಈತ ಅನೇಕ ತತ್ವಪದಗಳನ್ನು ರಚಿಸುವುದರ ಜತೆಗೆ ಲಾವಣಿ, ನಾಟಕಗಳನ್ನೂ ಬರೆದಿದ್ದಾನೆ. ದೊಡ್ಡಾಟಗಳಲ್ಲಿ ಈತ ಸಾರಥಿ ಪಾತ್ರವಹಿಸಿ ಜನರನ್ನು ರಂಜಿಸುತ್ತಿದ್ದ. ನರೋಣಾದ ಹೈದರಲಿ ಈತನ ಗುರುವಾಗಿದ್ದ. ಮುಸ್ಲೀಮ್ ಗುರುವನ್ನು ಪಡೆದು, ವೀರಶೈವ ತತ್ವಚಿಂತನೆಯನ್ನು ತನ್ನ ತತ್ವಪದಗಳಲ್ಲಿ ಪ್ರತಿಪಾದಿಸಿದ ಈತನ ಹಾಡುಗಳು ಗಮನಾರ್ಹವಾಗಿವೆ.

ಸಿರಗಾಪುರದ ಬಂಡೆಪ್ಪ (೧೯೦೦-೧೯೫೯)

ಸಿರಗಾಪುರ ಗುಲಬರ್ಗಾ ತಾಲೂಕಿನ ಒಂದು ಸಣ್ಣಹಳ್ಳಿ. ಊರಬದಿಗೆ ಬೆಣ್ಣೆತೊರೆ ಹರಿಯುತ್ತದೆ. ಹಳ್ಳದ ದಂಡೆಯ ಮೇಲೆ ಶ್ರೀ ವೀರಭದ್ರ ದೇವಾಲಯವಿದೆ. ಸಿರಗಾಪುರ ಬಂಡೆಪ್ಪ ಈ ವೀರಭದ್ರ ದೇವರ ಭಕ್ತ. ಗುಡಿಯಲ್ಲಿ ಕುಳಿತೇ ತತ್ವಪದಗಳನ್ನು ರಚಿಸಿದ್ದಾನೆ. ಮಡೆಪ್ಪ-ವೀರಮ್ಮ ದಂಪತಿಗಳಿಗೆ ಮಗನಾಗಿ ಕ್ರಿ.ಶ. ೧೯೦೦ರಲ್ಲಿ ಬಂಡೆಪ್ಪ ಜನಿಸಿದ. ಕೊಟ್ಟುರಗಿಯೆಂಬುದು ಇವರ ಮನೆತನದ ಅಡ್ಡಹೆಸರು. ವೀರಶೈವ ಮನೆತನದಲ್ಲಿ ಬಡತನದಲ್ಲಿ ಹುಟ್ಟಿ ಬೆಳೆದ ಬಂಡೆಪ್ಪ ಕೂಲಿಮಾಡಿ ಬದುಕುತ್ತಿದ್ದ. ಈ ಭಾಗದ ಪ್ರಭಾವಶಾಲಿ ಸ್ವಾಮಿಗಳಾದ ಬಬಲಾದಿಯ ಶ್ರೀ ಚೆನ್ನವೀರ ಶಿವಯೋಗಿಗಳ ಆಸರೆಯಲ್ಲಿ ಬಂಡೆಪ್ಪ ಬೆಳೆದು, ತತ್ವಪದಕಾರನಾಗಿ ಜನಪ್ರಿಯನಾದ. ರಾಮಪುರದ ಬಕ್ಕಪ್ಪ, ಕಡಕೋಳ ಮಡಿವಾಳಪ್ಪ ಇವರ ಭಜನೆ ಹಾಡುಗಳ ಪ್ರಭಾವ ಈತನ ಮೇಲಾಗಿದೆ.

ಹರಸೂರಿನ ರ್‍ಯಾವಮ್ಮಳೊಂದಿಗೆ ಮದುವೆಯಾದ ಬಂಡೆಪ್ಪ ಸಂಸಾರಿಯಾಗಿ ಹೆಂಡತಿ ಸತ್ತುಹೋದ ನಂತರ ಜಿಗುಪ್ಸೆಗೊಂಡು ಶ್ರೀಶೈಲದ ಕಡೆ ಹೋಗಿ ಮತ್ತೆ ತನ್ನ ಊರಿಗೆ ಬಂದು ನೆಲೆನಿಂತು ಭಜನೆ ಮೇಳಗಳನ್ನು ಕಟ್ಟಿಕೊಂಡು ಊರೂರು ಅಲೆಯುತ್ತಾನೆ. ಅನೇಕ ತತ್ವಪದಗಳನ್ನು ರಚಿಸಿರುವ ಬಂಡೆಪ್ಪ ಬಯಲಾಟಗಳನ್ನೂ ಕಲಿಸಿದ್ದಾನೆ; ಲಾವಣಿಗಳನ್ನೂ ಬರೆದಿದ್ದಾನೆ. "ಸಿರಗಾಪುರದ ಈಶ ವೀರೇಶ" ಎಂಬುದು ಈತನ ಅಂಕಿತವಾಗಿದೆ. ಬಂಡೆಪ್ಪ ಕವಿಯ ೮೭ ಭಜನೆ ಪದಗಳನ್ನು ಡಾ. ಎಂ.ಎಸ್. ಲಠ್ಠೆಯವರು ಸಂಪಾದಿಸಿ ೧೯೮೩ರಲ್ಲಿ ಪ್ರಕಟಿಸಿದ್ದಾರೆ. ಈತನಲ್ಲಿ ಆಧ್ಯಾತ್ಮದ ಬಗೆಗೆ ಅಭಿರುಚಿಯನ್ನು ಹುಟ್ಟಿಸಿದವರು ಬಾಧನದ ಮಹಾಂತಸ್ವಾಮಿಗಳು. ಹಾಡು ಹುಟ್ಟಲು ಪ್ರೇರಣೆಯಾದವರು ಬಬಲಾದಿ ಮುತ್ಯಾ ಅವರು. ಸಾಮಾಜಿಕ-ಲೌಕಿಕ ಎರಡೂ ವಿಷಯಗಳ ಸಮನ್ವಯವನ್ನು ಈತನ ತತ್ವಪದಗಳಲ್ಲಿ ಕಾಣಬಹುದಾಗಿದೆ.

ನರೋಣಾದ ಚಂದ್ರಾಮಪ್ಪ (೧೯೦೦-೧೯೭೩)

ಆಳಂದ ತಾಲೂಕಿನ ನರೋಣಾ ಗ್ರಾಮದಲ್ಲಿ ೧೯೦೦ರಲ್ಲಿ ಚಂದ್ರಾಮಪ್ಪ ಜನಿಸಿದ. ಕವಿ, ನಾಟಕದ ಮಾಸ್ತರನೆಂದು ಪ್ರಸಿದ್ಧಿಯಾದ ಈತ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ಒಕ್ಕಲುತನ ಈತನ ಉದ್ಯೋಗವಾಗಿತ್ತು. ಪೇಟಿ-ತಬಲಾ ಬಾರಿಸುವ ಒಳ್ಳೆಯ ಕಲಾವಿದನಾಗಿದ್ದ ಚಂದ್ರಾಮಪ್ಪ ಪ್ರತಿಭಾವಂತ ಕವಿ. ಈ ಭಾಗದಲ್ಲಿ ಈತನ ಭಜನೆ ಹಾಡಗಳು ಪರಿಚಿತವಾಗಿವೆ. ಈತನ ಪದಗಳು ಇನ್ನೂ ಪ್ರಕಟವಾಗಿಲ್ಲ.

ಭೀಮನಹಳ್ಳಿ ಕೊಟ್ರಪ್ಪ ಶಾಸ್ತ್ರಿ (೧೯೦೦-೧೯೭೩)

ಚಿತಾಪುರ ತಾಲೂಕಿನ ಭೀಮನಹಳ್ಳಿ ಗ್ರಾಮದಲ್ಲಿ ಕ್ರಿ.ಶ. ೧೯೦೦ರಲ್ಲಿ ಜನಿಸಿದ ಕೊಟ್ರಪ್ಪಶಾಸ್ತ್ರಿ ಕಾಶಿಗೆ ಹೋಗಿ ಕಾವ್ಯಶಾಸ್ತ್ರ ಅಭ್ಯಾಸಮಾಡಿ ಬಂದನು. ನೂರಾರು ತತ್ವಪದಗಳನ್ನು ಈತ ರಚಿಸಿದ್ದಾನೆ. 'ಕೊಟ್ಟೂರ ಬಸವ' ಎಂಬುದು ಕವಿಯ ಅಂಕಿತವಾಗಿದೆ. ಈತನ ಪದಗಳಲ್ಲಿ ತತ್ವನೀತಿಗಳೇ ಪ್ರಧಾನವಾಗಿವೆ. ಈತನ ತತ್ವಪದಗಳು ಇನ್ನೂ ಪ್ರಕಟವಾಗಿಲ್ಲ.

ಕೌಳೂರು ಸಿದ್ಧರಾಮ ಶಿವಯೋಗಿ (೧೯೦೦-೧೯೭೪)

ಯಾದಗಿರಿ ತಾಲೂಕ ಕೌಳೂರಿನಲ್ಲಿ ಹುಟ್ಟಿದ ಸಿದ್ದರಾಮ ದೊಡ್ಡ ಸಂತನಾಗಿ ಹೋದನು. ಕೌಳೂರಿನ ಸಂಸ್ಥಾನ ಗುಡಗುಂಟಿ ಮುತ್ತಿನಪೆಂಡಿ ಬೃಹನ್ಮಠದ ಪಟ್ಟಾಧ್ಯಕ್ಷನಾಗಿದ್ದ ಸಿದ್ದರಾಮ ಶಿವಯೋಗಿ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ದಾಸೋಹ ಮೂರ್ತಿಯೂ, ಷಟ್‌ಸ್ಥಲ ಜ್ಞಾನಿಯೂ ಆದ ಶಿವಯೋಗಿ ಅನೇಕ ಭಕ್ತರನ್ನು ಹೊಂದಿದ್ದ 'ಸದ್ಬೋಧಾಮೃತ'' ಎಂಬ ಈತನ ತತ್ವಪದಗಳ ಪುಸ್ತಕ ೧೯೭೭ರಲ್ಲಿ ಪ್ರಕಟವಾಗಿದೆ. ಅದರಲ್ಲಿ ೧೭೬ ಪದಗಳಿದ್ದು, ಸ್ತುತಿಪದಗಳೇ ಹೆಚ್ಚಾಗಿವೆ. 'ಕೌಳೂರೇಶ' ಎಂಬುದು ಶಿವಯೋಗಿಯ ಅಂಕಿತವಾಗಿದೆ.

ಬಿಜಾಸ್ಪುರದ ಮಲ್ಲಿಕಾರ್ಜುನ ಶಾಸ್ತ್ರಿ (೧೯೦೦-೧೯೮೦)

ಸುರಪುರ ತಾಲೂಕಿನ ಬಿಜಾಸ್ಪುರ ಗ್ರಾಮದ ಮಲ್ಲಿಕಾರ್ಜುನ ಶಾಸ್ತ್ರಿ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ಉರ್ದು ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ ಈ ಕವಿ ಮನೆಯಲ್ಲಿಯೇ ಸಂಸ್ಕೃತ ಓದಿಕೊಂಡವನಾಗಿದ್ದಾನೆ. ಇದೇ ಊರಿನ ಮಲ್ಲಿಕಾರ್ಜುನ ದೇವರನ್ನು ನೆನೆಸುವ ಈತನು 'ಮಲ್ಲೇಶ್ವರನ ದಾಸ ಮಲ್ಲಾಖ್ಯ' ಎಂದು ಅಂಕಿತವನ್ನಿಟ್ಟುಕೊಂಡಿದ್ದಾನೆ. ಈತನ ಪದಗಳಲ್ಲಿ ಭಕ್ತಿಭಾವ, ನೀತಿಬೋಧನೆಯನ್ನು ಕಾಣಬಹುದಾಗಿದೆ.

ಚಂದ್ರಶಾ (೧೯೦೦-೧೯೬೦)

ಅಫಜಲಪುರ ತಾಲೂಕಿನ ಒಂದು ಸಣ್ಣಹಳ್ಳಿ ತೆಲ್ಲೂರು. ಆ ಊರಿನಲ್ಲಿ ಕ್ರಿ.ಶ. ೧೯೦೦ರಲ್ಲಿ ಚಂದ್ರಶಾ ಹುಟ್ಟಿದ. ಈತ ತತ್ವಪದಗಳನ್ನು ರಚಿಸುವುದರ ಜತೆಗೆ ಲಾವಣಿ, ಮೊಹರಂ ಹಾಡು, ಡಪ್ಪಿನಾಟಗಳನ್ನೂ ರಚಿಸಿದ್ದಾನೆ. ಬಯಲಾಟದಲ್ಲಿ ಸ್ವತಃ ವೇಷತೊಟ್ಟು ಕುಣಿಯುತ್ತಿದ್ದ. ಈತನ ಹಾಡುಗಳು ಪ್ರಕಟವಾಗಿಲ್ಲ.

ದೇಗಾವಿ ಹಜರತ ಸಾಹೇಬ (೧೯೦೩-೧೯೯೦)

ಆಳಂದ ತಾಲೂಕ ದೇಗಾವದಲ್ಲಿ ಇಮಾಮಸಾಹೇಬ ಮತ್ತು ಮೀರಾಬಾಯಿ ದಂಪತಿಗಳಿಗೆ ಮಗನಾಗಿ ಕ್ರಿ.ಶ. ೧೯೦೩ರಲ್ಲಿ ಹಜರತ ಹುಟ್ಟಿದ. ಮುಸಲ್ಮಾನ ಮನೆತನದಲ್ಲಿ ಹುಟ್ಟಿದ ಈತನ ಅಡ್ಡಹೆಸರು ಮುಜಾವರ ಎಂದಿದೆ. ಬಡತನದಲ್ಲಿಯೇ ಬೆಳೆದ ಹಜರತನ ಸ್ನೇಹಿತರೆಲ್ಲಾ ಹಿಂದೂಗಳು. ಈತ ಕಲಿತದ್ದು ಮೋಡಿ; ಬರೆದದ್ದು ಮಾತ್ರ ಕನ್ನಡ ಭಾಷೆಯಲ್ಲಿ. ಹಿಂದಿ-ಮರಾಠಿ ಭಾಷೆಗಳನ್ನೂ ಈತ ಬಲ್ಲವನಾಗಿದ್ದ.

ಚಿನ್ನೂರ ಜಲಾಲಸಾಹೇಬ, ಮೋಟನಳ್ಳಿ ಹಸನಸಾಹೇಬರ ಪರಂಪರೆಗೆ ಸೇರುವ ಈ ಹಜರತಸಾಹೇಬ ರಿವಾಯತ, ಹಂತಿಹಾಡು, ಲಾವಣಿಗಳನ್ನೇ ಹೆಚ್ಚಾಗಿ ಬರೆದಿದ್ದಾನೆ. ಕೆಲವು ತತ್ವಪದಗಳನ್ನೂ ಬರೆದಿದ್ದಾನೆ. ಈತನ ಪದಗಳಲ್ಲಿ ಸಾಮಾಜಿಕ ಕಳಕಳಿಯಿದೆ. 'ಹಜರತ್' ಎಂಬುದು ಈತನ ಅಂಕಿತವಾಗಿದೆ. ಈತನ ಹಾಡುಗಳನ್ನು ಹನುಮಂತಪ್ಪ, ಹಿಪ್ಪರಗಿ ಶಾಣಪ್ಪ ಮುಂತಾದವರು ಹಾಡುತ್ತಾರೆ. ೧೯೯೦ರಲ್ಲಿ ಈ ಕವಿ ನಿಧನನಾದುದಾಗಿ ತಿಳಿದುಬರುತ್ತದೆ.

ನರೋಣಾದ ಸಾಯಿಬಣ್ಣ (೧೯೦೫-೧೯೭೦)

ಆಳಂದ ತಾಲೂಕಿನ ನರೋಣಾದಲ್ಲಿ ಕ್ರಿ.ಶ. ೧೯೦೫ರಲ್ಲಿ ಸಾಯಿಬಣ್ಣ ಜನಿಸಿದ. ಒಕ್ಕಲುತನದ ಮನೆತನದಲ್ಲಿ ಹುಟ್ಟಿದ ಸಾಯಿಬಣ್ಣ ಬಹಳ ಬಡವನಾಗಿದ್ದ. ಗಾಂವಠಿ ಶಾಲೆಯಲ್ಲಿ ಎರಡನೇ ಇಯತ್ತೆವರೆಗೆ ಮೋಡಿಯಲ್ಲಿ ಅಭ್ಯಾಸ ಮಾಡಿದ ಸಾಯಿಬಣ್ಣ ಅನೇಕ ತತ್ವಪದಗಳನ್ನು ರಚಿಸಿರುವುದರ ಜತೆಗೆ ಮೊಹರಂ ಹಾಡು, ಲಾವಣಿ, ಗೀಗೀ ಪದಗಳನ್ನೂ ರಚಿಸಿದ್ದಾನೆ. ಪ್ರಾಮಾಣಿಕ ಬದುಕನ್ನು ನಡೆಸಿದ ಈತನ ಹಾಡುಗಳಲ್ಲಿ ಸತ್ಯ, ನಿಷ್ಠೆಯಂತಹ ಮೌಲ್ಯಗಳಿಗೆ ಪ್ರಧಾನ ಸ್ಥಾನವಿದೆ. ಈತನ ಹಾಡುಗಳು ಪ್ರಕಟವಾಗಿಲ್ಲ.

ಜಂಬಗಿ ಶರಣ (೧೯೦೬-)

ಗುಲಬರ್ಗಾ ತಾಲೂಕಿನ ಜಂಬಗಿ ಗ್ರಾಮದ ಹರಿಜನ ಕುಟುಂಬದಲ್ಲಿ ಈ ಶರಣ ಜನಿಸಿದ. ಕ್ರಿ.ಶ. ೧೯೦೬ರಲ್ಲಿ ಶಿವಮ್ಮ-ಶಿವಪ್ಪ ದಂಪತಿಗಳಿಗೆ ಮಗನಾಗಿ ಹುಟ್ಟಿದ ಜಂಬಗಿ ಶರಣ ದನ ಕಾಯುತ್ತಾ ಓದನ್ನು ಕಲಿತ. ಅದೇ ಊರಿನ ತಿಪ್ಪಣ್ಣ ಈತನಿಗೆ ಗುರುವಾಗಿ ಹಾಡು ಹೇಳಿಕೊಟ್ಟ.

ಜಾಲವಾದಿಯ 'ಭೀಮಾಶಂಕರ' ಗುರುಗಳಿಂದ ಲಿಂಗದೀಕ್ಷೆ ಪಡೆದ ಶರಣಪ್ಪ ವೀರಶೈವ ಧರ್ಮದಲ್ಲಿ ಆಸಕ್ತಿ ತಾಳಿದನು. ಶರಣಪ್ಪ ಹೆಂಡತಿ-ಮಕ್ಕಳನ್ನು ಪಡೆದಿದ್ದರೂ, ಆಧ್ಯಾತ್ಮವನ್ನು ಬಿಡಲಿಲ್ಲ. ಕೂಲಿಮಾಡಿ ಬದುಕಿದ ಶರಣಪ್ಪ ಪ್ರಾಮಾಣಿಕ ವ್ಯಕ್ತಿ. ಅನೇಕ ತತ್ವಪದಗಳನ್ನು ರಚಿಸಿರುವುದರ ಜತೆಗೆ ಲಾವಣಿ, ಸೋಬಾನ, ಡಪ್ಪಿನಾಟಗಳನ್ನೂ ಬರೆದಿದ್ದಾನೆ. ತನ್ನ ಗುರುವಿನ ಸ್ಮರಣೆಗಾಗಿ 'ಭೀಮಾಶಂಕರ' ಎಂಬ ಅಂಕಿತವನ್ನಿಟ್ಟುಕೊಂಡಿದ್ದಾನೆ. ಗುಲಬರ್ಗಾದ ಪ್ರಸಿದ್ಧ ಹಾಡುಗಾರ ಭವಾನಿ ಚವ್ಹಾಣ ಈತನ ಶಿಷ್ಯ.

ಸಾವಳಗಿ ಮಹಮ್ಮದ (೧೯೦೬-)

ಗುಲಬರ್ಗಾ ತಾಲೂಕಿನ ಸಾವಳಗಿಯಲ್ಲಿ ಕ್ರಿ.ಶ. ೧೯೦೬ರಲ್ಲಿ ಮಂಚಖೇಡ ಮೋದಿನ ಸಾಹೇಬ ಮತ್ತು ಫಾತಿಮಾ ದಂಪತಿಗಳಿಗೆ ಏಕಮೇವ ಪುತ್ರನಾಗಿ ಮಹಮ್ಮದ ಜನಿಸಿದ. ಈತನ ತಂದೆ ಮೋದಿನಸಾಹೇಬ, ಅಜ್ಜ ಹಸನಸಾಹೇಬ. ಇವರೆಲ್ಲರೂ ಕವಿಗಳೇ ಆಗಿದ್ದರು. ಇಂತಹ ಕವಿವಂಶದ ಪರಂಪರೆಯಿರುವ ಮನೆತನದಲ್ಲಿ ಹುಟ್ಟಿದ ಮಹಮ್ಮದ ಕಾಡಯ್ಯಸ್ವಾಮಿ ಗುರುಗಳಲ್ಲಿ ವಿದ್ಯೆ ಕಲಿತ. ಲಾವಣಿ, ಮೊಹರಂ ಹಾಡು, ಬಯಲಾಟಗಳನ್ನು ಬರೆದಿರುವ ಮಹಮ್ಮದ ಎರಡು ಸಾವಿರಕ್ಕೂ ಹೆಚ್ಚು ತತ್ವಪದಗಳನ್ನು ರಚಿಸಿದ್ದಾನೆ. 'ಸಾವಳಗಿ ಶಿವಲಿಂಗೇಶ್ವರ' ಎಂಬುದು ಈತನ ಹಾಡುಗಳ ಅಂಕಿತವಾಗಿದೆ. ಹಿಂದೂ-ಮುಸ್ಲೀಂ ಭಾವೈಕ್ಯತೆಯ ಸಂಕೇತವಾಗಿ ಮಹಮ್ಮದನಂತಹ ಕವಿಗಳು ಈ ಜಿಲ್ಲೆಯಲ್ಲಿ ಇದ್ದಾರೆ. ಆಶಾಪಾಶ ಹರೆಯಬೇಕೆಂದು ಕವಿ ತನ್ನ ಹಾಡುಗಳಲ್ಲಿ ಹೇಳಿದ್ದಾನೆ.

ಬೆಡಜುರಗಿ ಬಕ್ಸಾರಿ (೧೯೧೭-)

ಆಳಂದ ತಾಲೂಕಿನ ಬೆಡಜುರಗಿ ಗ್ರಾಮದ ಹರಿಜನ ಕೇರಿಯಲ್ಲಿ ಕ್ರಿ.ಶ. ೧೯೧೭ರಲ್ಲಿ ಬಕ್ಸಾರಿ ಜನ್ಮತಾಳಿದ. ಬಡತನದಲ್ಲಿ ಬೆಳೆದ ಈ ಕವಿ ಆ ಊರಿನ ಮಠದ ಸ್ವಾಮಿಗಳ ಕೃಪೆಗೆ ಪಾತ್ರನಾದ. ಆ ಮಠದ ಕೋಮರಾಯ ಸ್ವಾಮಿಯನ್ನೇ ತನ್ನ ಗುರುವೆಂದು ತಿಳಿದು ಅನೇಕ ತತ್ವಪದ ರಚಿಸಿದ ದೊಡ್ಡ ಅನುಭಾವಿ ಕವಿ ಈತ. ತನ್ನ ಹಾಡುಗಳಲ್ಲಿ ಅನೇಕ ಪ್ರಾಣಿರೂಪಕಗಳನ್ನು ಬಳಸಿದ್ದಾನೆ. 'ಕೋಮರಾಯ ಮುತ್ಯಾ" ಎಂಬುದು ಈತನ ಅಂಕಿತವಾಗಿದೆ.

ಸಲ್ಗರದ ಸಿದ್ರಾಮಪ್ಪ (೧೯೦೭-೧೯೬೭)

ಆಳಂದ ತಾಲೂಕಿನ ಸಲ್ಗರ ಎಂಬ ಹಳ್ಳಿಯಲ್ಲಿ ಕ್ರಿ.ಶ: ೧೯೦೭ರಲ್ಲಿ, ವೀರಶೈವ ಮನೆತನದಲ್ಲಿ ಸಿದ್ರಾಮಪ್ಪ ಜನಿಸಿದ. ಈತನ ತಂದೆ ಸಾಖರೆ ಮನೆತನದ ಭದ್ರಪ್ಪ. ತಂದೆ ಒಕ್ಕಲುತನ ಮಾಡಿದರೆ, ಸಿದ್ರಾಮಪ್ಪ ಕಿರಾಣಿ ಅಂಗಡಿ ಇಟ್ಟು, ವ್ಯಾಪಾರ ಮಾಡುತ್ತಿದ್ದ. ಬಯಲಾಟಗಳಲ್ಲಿ ಸ್ತ್ರೀ ಪಾತ್ರ ಹಾಕುವುದೆಂದರೆ ಸಿದ್ರಾಮಪ್ಪಗೆ ಬಹಳ ಹುಮ್ಮಸ್ಸು.

ಸಿದ್ರಾಮಪ್ಪ ಅನೇಕ ತತ್ವಪದಗಳನ್ನು ರಚಿಸಿರುವುದರ ಜತೆಗೆ ಲಾವಣಿ, ಸಣ್ಣಾಟ, ದೊಡ್ಡಾಟಗಳನ್ನೂ ಬರೆದಿದ್ದಾನೆ. ತತ್ವಪದಗಳಲ್ಲಿ ವೀರಶೈವ ಧರ್ಮದ ತತ್ವಗಳನ್ನೇ ಪ್ರತಿಪಾದಿಸಿದ್ದಾನೆ. ಸಲ್ಗರ ಗ್ರಾಮದ ಮಹಾಂತೇಶನೇ ಈತನ ಇಷ್ಟದೈವ ಹಾಗೂ ಈತನ ಹಾಡುಗಳಿಗೆ ಅಂಕಿತವಾಗಿದ್ದಾನೆ.

ಜಾಲಿಬೆಂಚಿ ರಾಮಯ್ಯ (೧೯೦೮-)

ಸುರಪುರ ತಾಲೂಕಿನ ಜಾಲಿಬೆಂಚಿ ಗ್ರಾಮದ ಗುತ್ತೇದಾರ ಮನೆತನದಲ್ಲಿ ಹುಟ್ಟಿದ ರಾಮಯ್ಯ ಗಮನಾರ್ಹ ತತ್ವಪದಕಾರನಾಗಿದ್ದಾನೆ. ಈಡಿಗರ ವಂಶದಲ್ಲಿ ಹುಟ್ಟಿದ ರಾಮಯ್ಯ ಹೆಂಡ ಮಾರುವ ಉದ್ಯೋಗ ಮಾಡುತ್ತಿದ್ದ; ನಂತರ ಒಕ್ಕಲುತನ ಮಾಡಿದ. ಲಾವಣಿ ಹಾಡುಗಳನ್ನು ಬರೆಯುವುದರ ಜತೆಗೆ ನೂರಾರು ತತ್ವಪದಗಳನ್ನು ರಚಿಸಿದ್ದಾನೆ. ತನ್ನ ಹೆಂಡದ ವೃತ್ತಿಯ ಅನೇಕ ಪ್ರತಿಮೆಗಳನ್ನು ಈತ ತನ್ನ ಹಾಡುಗಳಲ್ಲಿ ಬಳಸಿದ್ದಾನೆ.

ಕೋನಾಪುರ ರಾಮಪ್ಪ (೧೯೧೦-೧೯೭೫)

ಸೇಡಂ ತಾಲೂಕಿನ ಕೋನಾಪುರ ಗ್ರಾಮದಲ್ಲಿ ಕ್ರಿ.ಶ. ೧೯೧೦ರಲ್ಲಿ ಚಂದ್ರಪ್ಪ-ಬುಗ್ಗಮ್ಮ ದಂಪತಿಗಳಿಗೆ ಮಗನಾಗಿ ರಾಮಪ್ಪ ಹುಟ್ಟಿದ. ಗೊಲ್ಲರ ಮನೆತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದ ರಾಮಪ್ಪ ಕೆಲವರ್ಷ ಸರಕಾರಿ ಸೇವೆ ಮಾಡಿ, ರಾಜೀನಾಮೆ ಕೊಟ್ಟು ಹೋರಾಟದ ಜೀವನ ನಡೆಸಿದ. ಮುಂದೆ ಸಂಸಾರದ ತಾಪತ್ರಯಗಳಿಗೆ ಬೇಸತ್ತು ನೆಮ್ಮದಿ ಹುಡುಕುತ್ತ ಹೋಗಿ ಮುರಗೇಂದ್ರ ಸ್ವಾಮಿಗಳ ಶಿಷ್ಯನಾದ. ಅನೇಕ ತತ್ವಪದಗಳನ್ನು ರಚಿಸಿದ ಈತನ ಹಾಡುಗಳಲ್ಲಿ ಸಾಮಾಜಿಕ ವಿಡಂಬನೆಯಿದೆ. 'ಗುರು ಮೃಗೇಂದ್ರ' ಎಂಬುದು ಈ ಕವಿಯ ಅಂಕಿತವಾಗಿದೆ. ಈತನ ಮಗ ಬಾಲಚಂದ್ರ ಕುರಕುಂಟಾ ಸಿಮೆಂಟ್ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿದ್ದಾನೆ. ರಾಮಪ್ಪನ ತತ್ವಪದಗಳು ಪ್ರಕಟವಾಗಿವೆ.

ಕಮಲಾಪುರ ಮಲ್ಲಿಕಾರ್ಜುನ (೧೯೧೨-)

ಗುಲಬರ್ಗಾ ತಾಲೂಕಿನ ಕಮಲಾಪುರ ಗ್ರಾಮದಲ್ಲಿ ಕ್ರಿ.ಶ. ೧೯೧೨ರಲ್ಲಿ ಡೋಹರ ಮನೆತನದಲ್ಲಿ ಮಲ್ಲಣ್ಣ ಜನಿಸಿದ. ಅತ್ಯಂತ ಬಡತನದಲ್ಲಿ ಹುಟ್ಟಿಬೆಳೆದ ಮಲ್ಲಣ್ಣ ಚರ್ಮದ ಕೈಗಾರಿಕೆ, ಗೋಡೆಕಟ್ಟುವ ಕೆಲಸ ಮಾಡುತ್ತ ಬದುಕು ಸಾಗಿಸಿದ. ನಾಲ್ಕನೇ ಇಯತ್ತೆವರೆಗೆ ಮರಾಠಿ ಕಲಿತ ಮಲ್ಲಣ್ಣ ಬರೆದದ್ದು ಕನ್ನಡದ ತತ್ವಪದಗಳನ್ನು. ಇದರೊಂದಿಗೆ ಲಾವಣಿ, ರಿವಾಯತ್ ಹಾಗೂ ಡಪ್ಪಿನಾಟಗಳನ್ನೂ ರಚಿಸಿದ್ದಾನೆ. ಈತ ಈ ಭಾಗದ ಜನಪದ ಕಲಾವಿದನಾಗಿದ್ದಾನೆ. ಚಿಕ್ಕಂದಿನಿಂದಲೂ ಇಂಪಾಗಿ ಹಾಡುವ ಮಲ್ಲಣ್ಣ ಅನೇಕ ಶಿಷ್ಯಂದಿರನ್ನು

ಹೊಂದಿದ್ದಾನೆ. ಕಮಲಾಪುರದ ಬಾಳೇಹಣ್ಣಿನ ಪ್ರಸ್ತಾಪವನ್ನು ಅನೇಕ ಹಾಡುಗಳಲ್ಲಿ ತಂದಿದ್ದಾನೆ. ಈ ಗ್ರಾಮದ ವೀರಶೆಟ್ಟಿ ಈತನ ಪಟ್ಟದ ಶಿಷ್ಯ. 'ಮಲ್ಲಿಕಾರ್ಜುನ' ಎಂಬುದು ಈ ಕವಿಯ ಅಂಕಿತವಾಗಿದೆ.

ಸಲ್ಗರದ ಸಂಗಯ್ಯ (೧೯೧೨-)

ಆಳಂದ ತಾಲೂಕಿನ ಸಲ್ಗರದಲ್ಲಿ ಕ್ರಿ.ಶ. ೧೯೧೨ರಲ್ಲಿ ಸಂಗಯ್ಯ ಹುಟ್ಟಿದ. ಈ ಊರಿಗೆ ವಜ್ರಸಲ್ಗರವೆಂದೂ ಕರೆಯುತ್ತಾರೆ. ಶಂಕ್ರಯ್ಯನ ಮಗನಾದ ಸಂಗಯ್ಯ ಗಾಂವಠಿ ಶಾಲೆಯಲ್ಲಿ ನಾಲ್ಕನೆ ಇಯತ್ತೆವರೆಗೆ ಓದಿದ್ದಾನೆ. ಅನೇಕ ತತ್ವಪದಗಳನ್ನು ರಚಿಸಿರುವ ಈ ಕವಿ ಲಾವಣಿ, ಜೋಗುಳ, ಸೋಬಾನೆ ಪದಗಳನ್ನೂ ಬರೆದಿದ್ದಾನೆ. 'ಮಹಾಂತೇಶ್ವರ'ಯೆಂಬುದು ಈತನ ಹಾಡುಗಳ ಅಂಕಿತವಾಗಿದೆ.

ಸಲ್ಗರದ ಲಕ್ಷ್ಮಣ (೧೯೧೩-೧೯೭೩)

ಆಳಂದ ತಾಲೂಕಿನ ಸಲ್ಗರದಲ್ಲಿ ನಾಟಿಕಾರ ಮನೆತನದ ಅಂದಪ್ಪನ ಮಗನಾಗಿ ಕ್ರಿ.ಶ. ೧೯೧೩ರಲ್ಲಿ ಜನಿಸಿದ ಲಕ್ಷ್ಮಣ ಒಕ್ಕಲುತನ ಮಾಡುತ್ತಲೇ ಕವಿಯಾಗಿ ಬೆಳೆದ. ಬಯಲಾಟಗಳಲ್ಲಿ ಪಾತ್ರವಹಿಸುವುದು ಈತನ ಹವ್ಯಾಸವಾಗಿತ್ತು. ಈತನ ತತ್ವಪದಗಳೆಲ್ಲ ಮೋಡಿಲಿಪಿಯಲ್ಲಿವೆ. ರಿವಾಯತ್, ಲಾವಣಿ, ಕೋಲಿನ ಹಾಡುಗಳನ್ನೂ ರಚಿಸಿದ್ದಾನೆ. ಈತನ ಹಾಡುಗಳು 'ಮೌನೇಶ್ವರ' ಅಂಕಿತದಿಂದೊಡಗೂಡಿವೆ. ನಿಜಾಮನ ಕಾಲದಲ್ಲಿ ನಡೆದ ಅನ್ಯಾಯ, ಶೋಷಣೆಗಳನ್ನು ಈತ ತನ್ನ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾನೆ.

ಧಂಗಾಪುರ ಶಿವರಶರಣಪ್ಪ (೧೯೧೬-)

ಆಳಂದ ತಾಲೂಕಿನ ಧಂಗಾಪುರದಲ್ಲಿ ಕ್ರಿ.ಶ. ೧೯೧೬ರಲ್ಲಿ ಬಸವಣ್ಣೆಪ್ಪನ ಎರಡನೆಯ ಮಗನಾಗಿ ಶಿವಶರಣಪ್ಪ ಜನ್ಮತಾಳಿದ. ಮನೆತನದ ಉದ್ಯೋಗ ಒಕ್ಕಲುತನ. ಅಕ್ಷರವನ್ನೇ ಕಲಿಯದ ಶಿವಶರಣ ಅಪ್ಪಟ ಜನಪದ ಕವಿ. ತಂದೆಯಿಂದ ಆಧ್ಯಾತ್ಮದ ಕಡೆ ಒಲವು ಮೂಡಿತು. ತಂದೆ 'ನಾಗೇಶಿ' ಹಾಡುಗಳನ್ನು ಹಾಡಿದರೆ, ಈತ 'ಹರದೇಶಿ' ಹಾಡುಕಟ್ಟಿ ಹಾಡಿದ. ಹಂತಿಯ ಪದ, ಮೊಹರಂ ಹಾಡುಗಳ ಜತೆಗೆ ನೂರಾರು ತತ್ವಪದಗಳು ಈತನ ನಾಲಗೆಯ ಮೇಲಿವೆ. 'ಶಿವಶರಣ' ಎಂಬುದು ಈತನ ಹಾಡುಗಳ ಅಂಕಿತವಾಗಿದೆ.

ಮಹಾಗಾಂವದ ಮೀರಾಸಾಹೇಬ (೧೯೧೭-)

ಗುಲಬರ್ಗಾ ತಾಲೂಕಿನ ಮಹಾಗಾಂವದಲ್ಲಿ ಕ್ರಿ.ಶ. ೧೯೧೭ರಲ್ಲಿ ಮುಸ್ಲೀಂ ಕುಟುಂಬದಲ್ಲಿ ಕಮಾಲಸಾಹೇಬ ಮತ್ತು ಹುಸೇನಬಿಯವರ ಮಗನಾಗಿ ಮೀರಾಸಾಹೇಬ ಜನ್ಮತಾಳಿದ. ಐದನೇ ಇಯತ್ತೆವರೆಗೆ ಕಲಿತ ಮೀರಾಸಾಹೇಬನಿಗೆ ದ್ಯಾಗಾಂವಿ ಹಾಡುಗಾರ

ಹನುಮಂತಪ್ಪನ ಗೀಗೀ ಪದ ಪ್ರಭಾವ ಬೀರಿತು. ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಹಾಡುವುದಕ್ಕೆ ಪ್ರಾರಂಭಿಸಿದ ಮೀರಾಸಾಹೇಬ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ದ್ಯಾಂಪೂರ ಚೆನ್ನಕವಿಗಳ ಪ್ರಭಾವವೂ ಈತನ ಮೇಲಾಗಿದೆ. ಸ್ವಾಮಿ ರಮಾನಂದ ತೀರ್ಥರಿಂದ 'ಪಂಚಾಕ್ಷರಿ' ಎಂಬ ಬಿರುದು ಪಡೆದ ಈ ಕವಿ ತನ್ನ ಹಾಡುಗಳಲ್ಲಿ ದಸ್ತಗಿರಿ ಸ್ವಾಮಿಯನ್ನು ಸ್ಮರಿಸಿದ್ದಾನೆ. 'ಮಾಗಾಂವ ಮೀರಾ' 'ಪಂಚಾಕ್ಷರಿ' ಇವು ಈ ಕವಿಯ ಅಂಕಿತಗಳಾಗಿವೆ.

ಡಿಕ್ಸಂಗಿ ಚೆನ್ನಯ್ಯ (೧೯೧೮-)

ಅಫಜಲಪುರ ತಾಲೂಕ ಡಿಕ್ಸಂಗಿಯಲ್ಲಿ ಕ್ರಿ.ಶ. ೧೯೧೮ರಲ್ಲಿ ಅಡವಯ್ಯ ಸಿಲಂಗೆಯವರ ಮಗನಾಗಿ ಚೆನ್ನಯ್ಯ ಜನಿಸಿದ. ಮರಾಠಿ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಹಾಡು ರಚಿಸಿದ್ದಾನೆ. ಈತ ಒಳ್ಳೆಯ ಹಾಡುಗಾರನೂ ಆಗಿದ್ದಾನೆ. 'ಚೆನ್ನಕವಿ' ಎಂಬುದು ಈತನ ಹಾಡುಗಳ ಅಂಕಿತವಾಗಿದೆ. ಇಂತಹ ಇಳಿವಯಸ್ಸಿನಲ್ಲಿಯೂ ಚೆನ್ನಯ್ಯ ತತ್ವಪದಗಳನ್ನು ಹಾಡುತ್ತಾನೆ. ಈತನ ಹಾಡುಗಳನ್ನು ಇನ್ನೂ ಯಾರೂ ಪ್ರಕಟಿಸಿಲ್ಲ.

ಬಳೂರಗಿ ದುಂಡಲಿಂಗಪ್ಪ (೧೯೧೮-)

ಅಫಜಲಪುರ ತಾಲೂಕಿನ ಬಳೂರಗಿ ಗ್ರಾಮದಲ್ಲಿ ಕ್ರಿ.ಶ. ೧೯೧೮ರಲ್ಲಿ ಸುಸಂಸ್ಕೃತ ಮನೆತನದ ಗುಡೂರ ನಾಗಪ್ಪ ಹಾಗೂ ಮಲಕವ್ವ ದಂಪತಿಗಳ ಮಗನಾಗಿ ದುಂಡಲಿಂಗಪ್ಪ ಜನಿಸಿದ. ಈತನನ್ನು ಶಿವಶರಣನೆಂದೇ ಜನ ಕರೆಯುತ್ತಾರೆ. ಏಳನೇ ಇಯತ್ತೆ ಕಲಿತು ಗಾಂವಠಿ ಶಾಲಾಶಿಕ್ಷಕನಾಗಿ ಸೇವೆಸಲ್ಲಿಸಿದ್ದಾನೆ. ಸೋದರತ್ತೆಯ ಮಗಳಾದ ಬಸಮ್ಮನನ್ನೇ ಲಗ್ನವಾಗಿದ್ದ. ಮಡದಿ ಬಸಮ್ಮ ಲಿಂಗಪೂಜೆ ಮಾಡುತ್ತಲೇ ಲಿಂಗೈಕ್ಯಳಾಗಿದ್ದಾಳೆ. ಅಂದಿನಿಂದ ದುಂಡಲಿಂಗಪ್ಪ ದೇಶಸಂಚಾರ ಕೈಕೊಂಡು ಅನುಭಾವಿಯಾಗಿದ್ದಾನೆ. 'ದುಂಡಲಿಂಗ' ಎಂಬುದು ಈತನ ತತ್ವಪದಗಳ ಅಂಕಿತವಾಗಿದೆ. ಮರಾಠಿಯಲ್ಲೂ ಹಾಡು ರಚಿಸಿದ್ದಾನೆ.

ಯನಗುಂಟಿ ವೀರಮ್ಮ (೧೯೧೯-)

ಜೇವರಗಿ ತಾಲೂಕಿನ ಯನಗುಂಟಿಯೆಂಬ ಹಳ್ಳಿಯಲ್ಲಿ ವೀರಮ್ಮ ಎಂಬ ಕವಯತ್ರಿ ಇದ್ದಾಳೆ. ಈಕೆಯ ಪತಿ ಬಸವಂತರಾವ ಪಾಟೀಲ ನಿಧನರಾಗಿದ್ದಾರೆ. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿಗಳ ಕೃಪೆಯಿಂದ ತಾನು ತತ್ವಪದಗಳನ್ನು ರಚಿಸಿರುವುದಾಗಿ ಈಕೆ ಹೇಳುತ್ತಾಳೆ. ಚಿಕ್ಕಂದಿನಿಂದಲೂ ಧರ್ಮ-ದೇವರುಗಳ ಬಗೆಗೆ ಆಸಕ್ತಿ ಹೊಂದಿದ್ದ ವೀರಮ್ಮ ಬಡವಿದ್ಯಾರ್ಥಿಗಳಿಗೆ - ಕಲಾಕಾರರಿಗೆ ಸಹಾಯ ಮಾಡಿದ್ದಾಳೆ. ಈಕೆ ವತನದಾರ ಮನೆತನಕ್ಕೆ ಸೇರಿದವಳಾಗಿದ್ದಾಳೆ. ಈಕೆಗೆ ಕಾನೂನು ಪದವೀಧರನಾದ ಒಬ್ಬ ಮಗ ಹಾಗೂ ಒಬ್ಬ ಮಗಳು ಇದ್ದಾರೆ. ತಾಯಿಯಂತೆ ಮಗಳೂ ಜನಪದ ಹಾಡು ಹಾಡುತ್ತಾಳೆ.

ಕರಲಗಿ ಶರಣಪ್ಪ (೧೯೧೯-)

ಆಳಂದ ತಾಲೂಕಿನ ಕರಲಗಿ ಗ್ರಾಮದ ಶರಣಪ್ಪ ಮೂಲಗೆ ಒಕ್ಕಲು ಮನೆತನದ ಗುರುಲಿಂಗಪ್ಪ-ಶಿವಮ್ಮ ದಂಪತಿಗಳಿಗೆ ಮಗನಾಗಿ ಕ್ರಿ.ಶ. ೧೯೧೯ರಲ್ಲಿ ಜನಿಸಿದ. ಸಣ್ಣವನಿದ್ದಾಗಲೇ ಲಿಂಗಪೂಜೆಯ ಕಡೆಗೆ ಆಸಕ್ತಿ. ಅತ್ಯಂತ ಪ್ರಾಮಾಣಿಕನಾಗಿರುವ ಶರಣಪ್ಪ ಹದಿನಾಲ್ಕು ವರ್ಷ ಊರ ಸರಪಂಚನಾಗಿದ್ದ. ಸಲ್ಗರದ ಸಾಂಬಶಿವಯೋಗಿಗಳಲ್ಲಿ ಭಕ್ತಿಯಿಟ್ಟಿರುವ ಶರಣಪ್ಪ ಅನೇಕ ತತ್ವಪದಗಳನ್ನು ರಚಿಸುವುದರ ಜತೆಗೆ ಡಪ್ಪಿನಾಟವನ್ನು ಬರೆದಿದ್ದಾನೆ. ಹೆಣ್ಣು ಹೆಚ್ಚೆಂದು ಈತ ಹಾಡು ಹೇಳುತ್ತಾನೆ. 'ಗುರುಸಾಂಬಶಿವಯೋಗಿ', 'ಮುರಘೇಂದ್ರ ಶಿವಯೋಗಿ' ಎಂದು ತನ್ನ ಹಾಡುಗಳಲ್ಲಿ 'ಅಂಕಿತ' ಬಳಸಿದ್ದಾನೆ. ಈತನ ಹಾಡುಗಳಲ್ಲಿ ಆಧ್ಯಾತ್ಮವೇ ಪ್ರಧಾನವಾಗಿದೆ.

ನಿಂಬೋಳಿ ತಿಪ್ಪಣ್ಣ ಮಾಸ್ತರ್ (೧೯೨೨-೧೯೮೩)

ಸೇಡಮ್ ತಾಲೂಕಿನ ರಂಜೋಳ ಗ್ರಾಮದಲ್ಲಿ ಕ್ರಿ.ಶ. ೧೯೨೨ರಲ್ಲಿ ಹಣಮಪ್ಪ-ವೆಂಕಮ್ಮ ದಂಪತಿಗಳಿಗೆ ಮಗನಾಗಿ ತಿಪ್ಪಣ್ಣ ಹುಟ್ಟಿದ. ಎಂಟುಜನ ಮಕ್ಕಳಲ್ಲಿ ಕೊನೆಯಾತನೇ ತಿಪ್ಪಣ್ಣ. ರಂಜೋಳದ ಬುಗ್ಗಪ್ಪ ಜೋಯಿಸ್ ಅವರಲ್ಲಿ ಬಯಲಾಟಗಳನ್ನು ಕಲಿತು, ಬಯಲಾಟದ ಮಾಸ್ತರ್ ಆದ. ಯೌವನ ಕಳೆದಂತೆ ಆಧ್ಯಾತ್ಮದ ಕಡೆ ಆಸಕ್ತಿ ಹೆಚ್ಚಿತು. ಜಾಕನಳ್ಳಿಯ ಶಿವಯೋಗಿ ಸ್ವಾಮಿ ಮತ್ತು ಮುರಘೇಂದ್ರ ಸ್ವಾಮಿಗಳ ಪ್ರಭಾವ ಈತನ ಮೇಲಾಯಿತು. ಅನೇಕ ತತ್ವಪದಗಳನ್ನು ತಿಪ್ಪಣ್ಣ ರಚಿಸಿದ್ದಾನೆ. ಶ್ರೀ ಲಿಂಗಾರೆಡ್ಡಿ ಶೇರಿಯವರು 'ನಿತ್ಯಾನಂದ ತತ್ವಪದಗಳು' ಎಂಬ ಹೆಸರಿನಲ್ಲಿ ತಿಪ್ಪಣ್ಣ ಕವಿಯ ೫೦ ತತ್ವಪದಗಳನ್ನು ಸಂಗ್ರಹಿಸಿ ಜಾಕನಳ್ಳಿ ಬಸವ ಪ್ರಕಾಶನದಿಂದ ಪ್ರಕಟಿಸಿದ್ದಾರೆ. 'ಜಾಕನಳ್ಳಿ' ಮತ್ತು 'ಶಿವಯೋಗಿ' ಇವು ಈ ಕವಿಯ ಅಂಕಿತಗಳಾಗಿವೆ. 'ನುಚ್ಚಿನ ಗಡಿಗೆ ಸ್ವಚ್ಛ ತೊಳೆಯಮ್ಮಾ' ಎಂಬ ತತ್ವಪದ ಜನಪ್ರಿಯವಾಗಿದೆ.

ಇತರ ಅನುಭಾವಿ ಕವಿಗಳು

ಇದುವರೆಗೆ ಉಲ್ಲೇಖಿಸಿದ ಕವಿಗಳ ಜೊತೆಗೆ ಇತರ ನೂರಾರು ಅನುಭಾವಿ ಕವಿಗಳು ಗುಲಬರ್ಗಾ ಜಿಲ್ಲೆಯಲ್ಲಿ ತತ್ವಪದಗಳ ಮೂಲಕ ತಮ್ಮ ಹೆಸರನ್ನು ಹಸಿರಾಗಿರಿಸಿಕೊಂಡಿದ್ದಾರೆ.

ಕೊಡೇಕಲ್ ರಾಚಪ್ಪಯ್ಯ, ಬಿಜಾಸ್ಪುರದ ಕೃಷ್ಣಯ್ಯ, ಗಾರಂಪಳ್ಳಿ ಭಕ್ತಾವರ, ಮುಗಳಿ ಕಾಶಪ್ಪ, ಮೋಟನಳ್ಳಿ ಅಬ್ದುಲ್‌ನಬಿ, ಹೆಮ್ಮಡಿಗೆಯ ಪ್ರಭುಸ್ವಾಮಿ, ಕಲಬುರ್ಗಿ ಸಿದ್ದೇಶ್ವರ, ಹುಗ್ಗಿ ಗುರಪ್ಪ, ಸತ್ಯಂಪೇಟೆಯ ಚನ್ನಮಲ್ಲಪ್ಪರಂತಹ ಅನೇಕ ಅನುಭಾವಿ ಕವಿಗಳು ಸ್ವಾತಂತ್ರ್ಯಪೂರ್ವದ ತತ್ವಪದಕಾರರಾಗಿದ್ದಾರೆ.

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಈ ತತ್ವಪದ ಸಾಹಿತ್ಯದ ಪರಂಪರೆ ಇಲ್ಲಿ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ಸುರಪುರ ತಾಲೂಕಿನ ಜೋನಾಳದ ಮಲ್ಲೇಶಯ್ಯ, ಚಿತಾಪುರ ತಾಲೂಕಿನ ಹಿರೇಬೇನೂರದ ಜಗನ್ನಾಥ, ಸುರಪುರ ತಾಲೂಕಿನ ಬಿಜಾಸ್ಪುರದ ವೆಂಕಯ್ಯ, ಸೇಡಂ ತಾಲೂಕಿನ ರಾಯಕೋಡಿ ಭೀಮಣ್ಣ, ಗುಲಬರ್ಗಾ ತಾಲೂಕಿನ ಭವಾನಿರಾವ್ ಇವರೆಲ್ಲಾ ತತ್ವಪದಗಳನ್ನು ರಚಿಸಿದ್ದಾರೆ.

ಆಳಂದ ಒಂದೇ ತಾಲೂಕಿನಲ್ಲಿ ಅನೇಕ ಅನುಭಾವಿ ಕವಿಗಳು ಇದ್ದಾರೆ. ಅವರಲ್ಲಿ ಬಸವನ ಸಂಗೊಳ್ಳಿಯ ಚಂದಣ್ಣ, ಬಿಲಗುಂದಿ ಮಾರ್ತಂಡಪ್ಪ, ಕರಹರಿಯ ಶರಣಪ್ಪ ಮಾಸ್ತರ್, ಜಿರಹಳ್ಳಿ ಪರಮೇಶ್ವರ, ಕಡಗಂಚಿ ಬಾಬೂ ದೇಗಾಯಿ ಅಂಬಾರಾಯ, ಬೋಧನದ ಶಂಕ್ರಯ್ಯ, ನರೋಣಾದ ಗುಂಡುಸಿಂಗ, ಬಸವಂತವಾಡಿ ಮಾಣಿಕರಾವ, ಕಮಲಾನಗರದ ಶಿವರುದ್ರಪ್ಪ ಮಾಸ್ತರ್, ವಗ್ದರಿಯ ರೇವಣಯ್ಯಸ್ವಾಮಿ ಮುಂತಾದವರು ಪ್ರಮುಖರಾಗಿದ್ದಾರೆ.

ಅಫಜಲ್‌ಪುರ ತಾಲೂಕಿನಲ್ಲಿ ಭೈರಾಮಡಗಿ ಹೈದರಸಾಹೇಬ, ಬಿದನೂರ ಬಸಯ್ಯ, ಡಿಕ್ಸಂಗಿ ಸಿದ್ದರಾಮ, ಬಿದನೂರ ಶಾಂತಪ್ಪ, ತತ್ವಪದ ರಚಿಸಿದ್ದಾರೆ. ಜೇವರ್ಗಿ ತಾಲೂಕಿನಲ್ಲಿ ಮಾವನೂರ ಸಿದ್ದರಾಮ, ಆಲ್ದಾಳದ ಎಲ್.ಬಿ.ಕೆ. ಆಲ್ದಾಳ ಭಜನೆ ಹಾಡುಗಳನ್ನು ರಚಿಸಿದರೆ; ಯಾದಗಿರಿ ತಾಲೂಕಿನ ಮುನಗಾಲು ಬನಶಂಕರ, ಸೇಡಂ ತಾಲೂಕಿನ ಕಲಕಂಬಾದ ಅನಂತಯ್ಯ, ಮನಳ್ಳಿಯ ಶಿವಪುತ್ರಪ್ಪ ಮಹಾಂತಪುರ ಇವರೆಲ್ಲರೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಸಾವಿರಾರು ತತ್ವಪದಗಳನ್ನು ನೀಡಿದವರಾಗಿದ್ದಾರೆ. ಇವರ ತತ್ವಪದಗಳ ಸಂಗ್ರಹ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಹುಟ್ಟಿ, ರಾಯಚೂರ ಜಿಲ್ಲೆಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಕನ್ನಡದ ಪ್ರಮುಖ ತತ್ವಪದಕಾರರಾದ ಕೂಡಲೂರ ಬಸವಲಿಂಗ ಶರಣ ಮತ್ತು ಗೂಗಲ್ಲ ಪರಪ್ಪಯ್ಯ ಇವರನ್ನು ರಾಯಚೂರ ಜಿಲ್ಲೆಯ ತತ್ವಪದಕಾರರೆಂದು ಪರಿಗಣಿಸಿ ಮುಂದಿನ ಭಾಗದಲ್ಲಿ ವಿವರಿಸಲಾಗಿದೆ. ಹೀಗೆ ಅನೇಕ ಅನುಭಾವಿ ಕವಿಗಳು ಈ ಗುಲಬರ್ಗಾ ಜಿಲ್ಲೆಯಲ್ಲಿ ತತ್ವಪದ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದಾರೆ.

★ ಇಲ್ಲಿ ಉಲ್ಲೇಖಿಸಿರುವ ಅನುಭಾವಿ ಕವಿಗಳಿಗೆ ಸಂಬಂಧಿಸಿರುವ ಕೆಲವು ಮಾಹಿತಿಗಳನ್ನು ಡಾ. ಎಂ.ಎಸ್. ಲಠ್ಠೆಯವರ "ಜನಪದ ಕವಿಚರಿತೆ" ಯಿಂದ ಆಯ್ದುಕೊಂಡಿದ್ದೇನೆ. ಅದಕ್ಕಾಗಿ ಆ ಕೃತಿಗೆ ಉಪಕೃತನಾಗಿದ್ದೇನೆ.

ಸಮಾರೋಪ

ತತ್ವಪದ ಸಾಹಿತ್ಯಕ್ಕೆ ಗುಲಬರ್ಗಾ ಜಿಲ್ಲೆಯ ಅನುಭಾವಿ ಕವಿಗಳ ಕೊಡುಗೆ ಅದ್ಭುತವಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿಯೇ ಅತಿ ದೊಡ್ಡದಾದ ಈ ಜಿಲ್ಲೆ ತತ್ವಪದಕಾರರ ಸಂಖ್ಯೆಯ ದೃಷ್ಟಿಯಿಂದಲೂ ಪ್ರಥಮ ಸ್ಥಾನದಲ್ಲಿದೆ. ಹದಿನೇಳನೇ ಶತಮಾನದ ಅಂದಿನ ರಾಮಪುರ ಬಕ್ಕಪ್ಪನಿಂದ ಪ್ರಾರಂಭವಾದ ಈ ಜಿಲ್ಲೆಯ ತತ್ವಪದ ಸಾಹಿತ್ಯದ ಪರಂಪರೆ, ಇಪ್ಪತ್ತನೆಯ ಶತಮಾನದ ಇಂದಿನ ಯುವಕವಿ ಶಿವಪುತ್ರಪ್ಪ ಮಹಾಂತಪುರನವರೆಗೂ ಬೆಳೆದುಕೊಂಡು ಬಂದಿದೆ. ಈ ತತ್ವಪದ ಸಾಹಿತ್ಯಕ್ಕೆ ಈ ಜಿಲ್ಲೆಯ ಬೇರೆ ಬೇರೆ ಜನಾಂಗದ, ಬೇರೆ ಬೇರೆ ಸಂಸ್ಕೃತಿಯ ಕವಿಗಳು ತಮ್ಮ ಮೌಲಿಕ ಕೊಡುಗೆಯನ್ನು ಕೊಟ್ಟಿದ್ದಾರೆ. ಕೆಳವರ್ಗದವರು, ದಲಿತರು, ಮುಸ್ಲೀಮರು, ಮಹಿಳೆಯರು ಈ ಸಾಹಿತ್ಯ ಪ್ರಕಾರದಲ್ಲಿ ಮಾತನಾಡಿದ್ದಾರೆ. ಜಾತಿ, ಮತ, ಅಂತಸ್ತು, ಅಧಿಕಾರ, ಲಿಂಗ, ವಯಸ್ಸು ಈ ಎಲ್ಲ ಭೇದವನ್ನು ಮರೆಸಿ, ಮಾನವೀಯತೆಯನ್ನು ಉಳಿಸಿ, ಭಾವೈಕ್ಯತೆಯನ್ನು ಬೆಳೆಸಿ, ಅನುಭಾವದೆತ್ತರಕ್ಕೇರಿಸಿದ ಈ ಕೈವಲ್ಯ ಸಾಹಿತ್ಯ ಪ್ರಸ್ತುತ ಸಾಮಾಜಿಕ ಸಂದರ್ಭದ ಮುಖ್ಯ ಅನಿವಾರ್ಯತೆಯಾಗಿದೆ.

ಚೆನ್ನೂರ ಜಲಾಲಸಾಹೇಬ, ಮೋಟನಳ್ಳಿ ಹಸನಸಾಹೇಬ, ನರೋಣಾದ ಹೈದರಲಿ, ದೇಗಾವದ ಹಜರತ ಸಾಹೇಬ, ಮಹಾಗಾಂವದ ಅಮೀರಸಾಹೇಬ, ಭೈರಾಮಡಗಿ ಹೈದರಸಾಹೇಬ ಈ ಮುಂತಾದವರು ಮುಸ್ಲಿಂ ಜನಾಂಗದಲ್ಲಿ ಹುಟ್ಟಿ, ಮೋಡಿ-ಉರ್ದುವಿನಲ್ಲಿ ಅಭ್ಯಾಸಮಾಡಿ ಕನ್ನಡದಲ್ಲಿ ತತ್ವಪದ ರಚಿಸಿದ್ದು, ವೀರಶೈವ ಸಂಸ್ಕೃತಿಯ ವಾರಸುದಾರರಾದದ್ದು, ಮಾನವೀಯತೆಯ ಎದುರು, ಜಾತಿ ತೃಣ ಸಮಾನವೆಂದು ಸಾರಿ ಹೇಳಿದ್ದು ಇಂದು ಬಹುಮುಖ್ಯವೆನಿಸುತ್ತದೆ. ಅದೇರೀತಿ ದಲಿತ, ಬೇಡ, ಕಬ್ಬಲಿಗ, ಕುರುಬ ಈ ಮುಂತಾದ ದುಡಿವ ವರ್ಗದಿಂದ ಬಂದ ಅನೇಕ ಅನುಭಾವಿ ಕವಿಗಳು ಇಲ್ಲಿ ಸಮಾನತೆಯ ತತ್ವವನ್ನು ಕೊಟ್ಟಿದ್ದಾರೆ. ಬಿದನೂರ ಗಂಗಮ್ಮ, ಯನಗುಂಟಿ ವೀರಮ್ಮನಂತಹ ಮಹಿಳೆಯರು ಅನುಭಾವ ಆಧ್ಯಾತ್ಮ ಕ್ಷೇತ್ರದಲ್ಲಿ ಮಹತ್ತರವಾದುದನ್ನು ಸಾಧಿಸಿ ತೋರಿಸಿದ್ದಾರೆ.

ಗುಲಬರ್ಗಾ ಜಿಲ್ಲೆಯ ಅನುಭಾವಿ ಕವಿಗಳ ತತ್ವಪದಗಳು ಪ್ರಕಟವಾದದ್ದು ಬಹಳ ಕಡಿಮೆ ಪ್ರಮಾಣದಲ್ಲಿ; ಪ್ರಕಟವಾಗದ ಜನಪದರ ನಾಲಿಗೆಯ ಮೇಲೆ ಉಳಿದ ಹಾಡುಗಳೇ

ಅಸಂಖ್ಯಾತವಾಗಿವೆ. ಅವೆಲ್ಲವುಗಳನ್ನು ಸಂಗ್ರಹಿಸಿ, ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸುವ ಕಾರ್ಯ ಇಂದು ಆದಷ್ಟು ಬೇಗ ನಡೆಯಬೇಕಾಗಿದೆ. ಇಲ್ಲದಿದ್ದರೆ ಈ ವಿಶಿಷ್ಟ ಸಾಹಿತ್ಯ ಜನತೆಯೊಂದಿಗೆ ಹೊರಟುಹೋಗುತ್ತದೆ. ಈ ಜಿಲ್ಲೆಯ ಆದಿಕವಿ ಕವಿರಾಜಮಾರ್ಗಕಾರ ಹೇಳಿರುವಂತೆ ಇಲ್ಲಿಯ ಜನ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಆಗಿದ್ದಾರೆ. ಅನೇಕ ಕವಿಗಳು ಅಕ್ಷರ ಕಲಿಯದೆಯೇ ಅನುಭಾವದೆತ್ತರವನ್ನು ಕಂಡು ಅಭಿವ್ಯಕ್ತಿಸಿದ್ದಾರೆ. ಇದು ನಿಜಕ್ಕೂ ಈ ನಾಡಿನ ಅಭಿಮಾನದ ಸಂಗತಿಯಾಗಿದೆ.

ತತ್ವಪದ ಸಾಹಿತ್ಯದ ಸಾಧ್ಯತೆ ಮತ್ತು ಮಿತಿಗಳೆರಡನ್ನೂ ಇಂದು ಗುರುತಿಸಿ ಚರ್ಚೆಗೊಳಪಡಿಸಬೇಕಾಗಿದೆ. ಹನ್ನೆರಡನೆಯ ಶತಮಾನದ ವಚನಕಾರರಿಗೂ, ಹದಿನಾರನೆಯ ಶತಮಾನದ ಕೀರ್ತನಕಾರರಿಗೂ, ಜನಪದ ಹಿನ್ನೆಲೆಯಿಂದ ಬಂದ ಈ ತತ್ವಪದಕಾರರಿಗೂ ಭಕ್ತಿ, ಆಧ್ಯಾತ್ಮದಂತಹ ವಿಷಯಗಳಲ್ಲಿ ಅಲ್ಲಲ್ಲಿ ಸಾಮ್ಯತೆ ಕಂಡುಬಂದರೂ ಉಳಿದಂತೆ, ಸೈದ್ಧಾಂತಿಕವಾಗಿ ತೀವ್ರತರವಾದ ವ್ಯತ್ಯಾಸಗಳು, ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಹನ್ನೆರಡನೆಯ ಶತಮಾನದ ವಚನಕಾರರದು ಚಳವಳಿಯ ಸಾಹಿತ್ಯವಾದರೆ, ಈ ತತ್ವಪದಕಾರರದು ಕೇವಲ ಅನುಭಾವ ಸಾಹಿತ್ಯ. ಅವರು ಸಂಸಾರದಲ್ಲಿದ್ದುಕೊಂಡೇ ಈ ಅಸಮಾನತೆಯ ವ್ಯವಸ್ಥೆಯ ವಿರುದ್ಧ ಚಳವಳಿ ಹೂಡಿದರೆ, ಈ ತತ್ವಪದಕಾರರಲ್ಲಿ ಅನೇಕರು ಸಂಸಾರ ತೊರೆದು, ದೈಹಿಕ ಸಾಧ್ಯತೆಗಳನ್ನು ತುಚ್ಛವಾಗಿ ಪರಿಗಣಿಸಿ ಮೋಕ್ಷವೊಂದನ್ನೇ ಪರಮ ಸತ್ಯವೆಂದು ತಿಳಿಯುತ್ತಾರೆ. ಈ ವಿಷಯದಲ್ಲಿ ಇವರು ದಾಸರಿಗೆ ಹತ್ತಿರವಾದರೂ, ಸೈದ್ಧಾಂತಿಕವಾಗಿ ದಾಸರಿಗಿಂತ ಭಿನ್ನರಾಗಿ ಕಾಣುತ್ತಾರೆ. ದಾಸರು ಜಾತೀಯತೆಯನ್ನು ಹೊಡೆದೋಡಿಸಲು ಹೇಳಿದರೇ ಹೊರತು, ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ ಹೋರಾಟಕ್ಕಿಳಿಯಲಿಲ್ಲ, ಆದರೆ ಪ್ರತಿಯೊಬ್ಬ ತತ್ವಪದಕಾರನೂ ಚಾತುರ್ವರ್ಣ ಪದ್ಧತಿಯನ್ನು ತಿರಸ್ಕರಿಸಿದ್ದಾನೆ. ದಾಸರಲ್ಲಿ ಕನಕದಾಸನೊಬ್ಬನನ್ನು ಬಿಟ್ಟರೆ ಉಳಿದ ದಾಸರೆಲ್ಲಾ ಒಂದೇ ಜನಾಂಗಕ್ಕೆ ಸೇರಿದವರಾಗಿದ್ದರು. ಆದರೆ ತತ್ವಪದಕಾರರು ವಚನಕಾರರಂತೆ ಕೆಳವರ್ಗದಿಂದ ಬಂದವರು, ಜನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರು. ಹೀಗಾಗಿ ದಾಸರಿಗೂ ಇವರಿಗೂ ಹೋಲಿಕೆಯಾಗುವುದಿಲ್ಲ. ಆದ್ದರಿಂದ ಈ ಜನಪದ ತತ್ವಪದಕಾರರು ವಚನಕಾರರಿಗಿಂತ, ಕೀರ್ತನಕಾರರಿಗಿಂತ ಭಿನ್ನವಾಗಿ ಕಾಣುತ್ತಾರೆ. ವಚನಕಾರರಂತೆ, ಕೀರ್ತನಕಾರರಂತೆ ತತ್ವಪದಕಾರರಿಗೂ ಅಂಕಿತಗಳಿವೆ. ಪ್ರತಿಯೊಬ್ಬ ತತ್ವಪದಕಾರನ ಹಿಂದೆಯೂ ಒಬ್ಬ ಗುರು ಅಥವಾ ಒಂದು ಆರಾಧ್ಯ ದೈವವಿದೆ. ವಚನಕಾರರು, ತತ್ವಪದಕಾರರು ಶಿವಸಂಸ್ಕೃತಿಯನ್ನು ಬಣ್ಣಿಸಿದರೆ, ಕೀರ್ತನಕಾರರು ವೈಷ್ಣವ ಸಂಸ್ಕೃತಿಯನ್ನು ವೈಭವೀಕರಿಸುತ್ತಾರೆ.

ವಚನಕಾರರದು ಏಕದೇವೋಪಾಸನೆ ಅದರಲ್ಲೂ ಇಷ್ಟಲಿಂಗ ಪೂಜೆಗೆ ಪ್ರಾಮುಖ್ಯತೆ. ಆದರೆ ತತ್ವಪದಕಾರರದು ಕೀರ್ತನಕಾರರಂತೆ ಬಹುದೇವೋಪಾಸನೆಯಾಗಿದೆ. ಆದರೆ ದಾಸರು ಒಂದೇ ಸಂಸ್ಕೃತಿಯಲ್ಲಿ ಬೆಳೆದುಬಂದರೆ, ತತ್ವಪದಕಾರರು ಅನೇಕ ಉಪಸಂಸ್ಕೃತಿಗಳಿಂದ

ಬಂದವರಾಗಿದ್ದಾರೆ. ತತ್ವಪದಕಾರರಲ್ಲಿ ರಾಮಕೃಷ್ಣ ಪರಮಹಂಸರಂತೆ ಶಕ್ತಿ ಆರಾಧಕರೂ ಇದ್ದಾರೆ. ಅಭಿವ್ಯಕ್ತಿಯ ದೃಷ್ಟಿಯಿಂದ ವಚನಗಳಲ್ಲಿ, ಕೀರ್ತನೆಗಳಲ್ಲಿ ಏಕತಾನತೆ ಕಂಡುಬಂದರೆ, ತತ್ವಪದಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆ ಎದ್ದುಕಾಣುತ್ತದೆ. ವಚನ, ಕೀರ್ತನೆಗಳಿಗಿಂತ ಭಜನೆ ಹಾಡುಗಳು ಸರಳವಾಗಿ, ಸುಲಭವಾಗಿ ಜನಪದರ ನಾಲಿಗೆಯ ಮೇಲೆ ಕುಣಿಯಲು ಪ್ರಾರಂಭಿಸುತ್ತವೆ. ವಚನಸಾಹಿತ್ಯ, ಕೀರ್ತನ ಸಾಹಿತ್ಯ, ಕನ್ನಡ ಶಿಷ್ಟಸಾಹಿತ್ಯದಲ್ಲಿಯೇ ವಿಶಿಷ್ಟವಾಗಿ ಕಂಡುಬಂದರೆ; ಈ ಭಜನೆಯ ಸಾಹಿತ್ಯ ಕನ್ನಡ ಜನಪದ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಬೆಳವಣಿಗೆಯಾಗಿದೆ.

ವಸಾಹತುಶಾಹಿ ಹಿನ್ನೆಲೆಯಲ್ಲಿ ತತ್ವಪದಕಾರರನ್ನು ನೋಡಿದಾಗ ಇನ್ನೂ ವಿಶಿಷ್ಟವಾಗಿ ಕಾಣಿಸುತ್ತಾರೆ. ನನ್ನ ಪ್ರಕಾರ ಇವರು ಮೂರು ರೀತಿಯ ವಸಾಹತುಶಾಹಿಯ ವಿರುದ್ಧ ಮಾತನಾಡಿದ್ದಾರೆ. ಮೊದಲನೆಯದು ಈ ದೇಶದ ಚಾತುರ್ವರ್ಣ ವ್ಯವಸ್ಥೆ ಹೇರಿದ ಸಾಂಸ್ಕೃತಿಕ ವಸಾಹತುಶಾಹಿ, ಎರಡನೆಯದು ಬ್ರಿಟೀಷರ ಹಾಗೂ ಇಲ್ಲಿಯ ಪಾಳೇಗಾರರ ವಿರುದ್ಧ ದನಿಯೆತ್ತಿದ ರಾಜಕೀಯ ವಸಾಹತುಶಾಹಿ; ಮೂರನೆಯದು ಪ್ರತಿ ಮನುಷ್ಯನ ಮನಸ್ಸಿನಲ್ಲಿ ಕುದಿಯುತ್ತಿರುವ ಸ್ವಾರ್ಥದ ಮನಸ್ಸಿನ ವಸಾಹತುಶಾಹಿ. ಹೀಗೆ ಈ ಮೂರೂ ವಸಾಹತುಶಾಹಿಗಳ ವಿರುದ್ಧ ಅನುಭಾವಿ ಕವಿಗಳು ತಮ್ಮ ತತ್ವಪದಗಳಲ್ಲಿ ದನಿಯೆತ್ತಿ ಹಾಡಿದ್ದಾರೆ.

ಚಾತುರ್ವರ್ಣ ವ್ಯವಸ್ಥೆಯ ಸಾಂಸ್ಕೃತಿಕ ವಸಾಹತು ವಿರುದ್ಧ ಸಾಮಾನ್ಯವಾಗಿ ಎಲ್ಲ ತತ್ವಪದಕಾರರೂ ಮಾತನಾಡಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ತತ್ವಪದಗಳು ಗಮನಸೆಳೆಯುತ್ತವೆ. ಬ್ರಿಟೀಷರ ರಾಜಕೀಯ ವಸಾಹತುಶಾಹಿಯ ವಿರುದ್ಧ ಶರೀಫಸಾಹೇಬ, ಕೈವಾರ ನಾರಾಯಣಪ್ಪನಂತವರು ದನಿಯೆತ್ತಿದರೆ, ಪಾಳೆಗಾರಿಕೆಯ ಅನ್ಯಾಯದ ವಿರುದ್ಧ ಕಡಕೋಳ ಮಡಿವಾಳಪ್ಪ, ಖೈನೂರ ಕೃಷ್ಣಪ್ಪನಂಥವರು ಪ್ರತಿಭಟಿಸಿದ್ದಾರೆ. ಮನುಷ್ಯನ ಮನಸ್ಸಿನೊಳಗಡಗಿರುವ ಸ್ವಾರ್ಥ, ಸಣ್ಣತನ, ಅಹಂಕಾರ, ಮದ, ಮತ್ಸರದಂತಹ ಮನಸ್ಸಿನ ವಸಾಹತುಶಾಹಿಯ ವಿರುದ್ಧ ಎಲ್ಲ ತತ್ವಪದಕಾರರು ಮಾತನಾಡಿದ್ದಾರೆ.

ರಾಷ್ಟ್ರೀಯ ಭಾವೈಕ್ಯತೆ, ಮತೀಯ ಸಹಿಷ್ಣುತೆ, ಸಾಂಸ್ಕೃತಿಕ ಸಮನ್ವಯತೆಯ ದೃಷ್ಟಿಯಿಂದ ತತ್ವಪದ ಸಾಹಿತ್ಯ ಇಂದಿಗೂ ಕೂಡ ಬಹುಮುಖ್ಯವಾದ ಅನಿವಾರ್ಯತೆಯಾಗಿದೆ. ಅನೇಕ ಉಪಸಂಸ್ಕೃತಿಗಳಿಂದ ಬಂದ ಈ ತತ್ವಪದಕಾರರು ಪ್ರಾದೇಶಿಕ ಸೊಗಡಿನೊಂದಿಗೆ ವಿಶಿಷ್ಟವಾದ ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ. ತತ್ವಪದ ಸಾಹಿತ್ಯದಲ್ಲಿ ಪ್ರಾಣರೂಪಕಗಳು, ದೈಹಿಕ ಪ್ರತಿಮೆಗಳು, ಲೈಂಗಿಕ ಪರಿಕಲ್ಪನೆಗಳು ಆಧ್ಯಾತ್ಮದ ಹಿನ್ನೆಲೆಯಲ್ಲಿ ಮೂಡಿಬಂದಿವೆ.

ತತ್ವಪದಕಾರರಲ್ಲಿ ಸಾಮಾಜಿಕ-ರಾಜಕೀಯ ಹೋರಾಟವಿಲ್ಲ. ಅವರು ಸಮಾಜದಲ್ಲಿದ್ದೂ ಇರದಂತಿರುತ್ತಾರೆ. ಅನೇಕ ಮುಸ್ಲಿಂ ತತ್ವಪದಕಾರರು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬದುಕಿ ಹೋಗಿದ್ದರು ಕೂಡ ಅವರೆಂದೂ ಅಂದಿನ ನಿಜಾಮ ಆಳ್ವಿಕೆಯ ವಿರುದ್ಧ, ರಜಾಕಾರರ ಹಾವಳಿಯ ವಿರುದ್ಧ ಮಾತನಾಡಿಲ್ಲ. ಬಡತನದ ವಿರುದ್ಧ, ಉರಿಯುವ ಜ್ವಲಂತ ಸಾಮಾಜಿಕ ಶೋಷಣೆಗಳ ವಿರುದ್ಧ ಅವರು ಮಾತನಾಡಿಲ್ಲ. ನೆಲ-ನೆಲೆಯನ್ನು ನಿರಾಕರಿಸಿ, ಹೆಂಡತಿ-ಮಕ್ಕಳನ್ನು ಬಿಟ್ಟು, ಕೈವಲ್ಯವೊಂದೇ ಪರಮಸಾಧನೆಯೆಂದು ನಂಬಿದ ಈ ತತ್ವಪದಕಾರರ ವಿಚಾರಗಳು ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಮಿತಿಗಳಾಗಿ ಕಾಣಬಹುದು. ಸಾಮಾಜಿಕ-ರಾಜಕೀಯ-ಆರ್ಥಿಕ ಕ್ಷೇತ್ರಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ಬಯಸದೆ, ಕೇವಲ ಮನುಷ್ಯನಲ್ಲಿ ಬದಲಾವಣೆಯಾಗಬೇಕೆಂದು ಬಯಸುವುದು ತತ್ವಪದಕಾರರ ಗೊಣಗಾಟದಂತೆ ಭಾಸವಾಗುತ್ತದೆ. ನೀತಿಬೋಧನೆಯೇ ಪ್ರಧಾನವಾಗಿರುವ ಇವರ ರಚನೆಗಳು ಅನೇಕ ಸಲ ಹಳಹಳಿಕೆಯ ಹಂತದಲ್ಲಿ ಕರಗಿಹೋಗುತ್ತವೆ. ಇಷ್ಟೆಲ್ಲ ಮಿತಿಗಳ ನಡುವೆಯೂ ತತ್ವಪದಕಾರರು ಮಹತ್ವವಾದದ್ದನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಮಾಜಕ್ಕೆ ಅನಿವಾರ್ಯವೆನಿಸುವ ಹಲವಾರು ಮೌಲ್ಯಗಳು ಅವರಲ್ಲಿವೆ. ಈ ದೃಷ್ಟಿಯಿಂದ ಈ ಸಾಹಿತ್ಯ ಅಧ್ಯಯನ ಯೋಗ್ಯವಾಗಿದೆ.

ಮಂಟಪ ಮಾಲೆ

೨೦

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋದನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಡಿಮೆ ಬೆಲೆಯ ಕಿರು ಪುಸ್ತಿಕಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ. ಜೊತೆಗೆ ನಮ್ಮ ನಾಡಿನ ಖ್ಯಾತ ವಿದ್ವಾಂಸರನ್ನೂ ಮಂಟಪಮಾಲೆಯಲ್ಲಿ ಉಪನ್ಯಾಸ ನೀಡಲು ಆಹ್ವಾನಿಸುತ್ತೇವೆ. ಈ ಮಾಲೆಯಲ್ಲಿ ಪ್ರಸಿದ್ಧ ವಿದ್ವಾಂಸರಾದ ಡಾ.ಬಸವರಾಜ ಸಬರದ ಅವರು ನೀಡಿದ ಉಪನ್ಯಾಸದ ಕಿರುಹೊತ್ತಿಗೆ ಇದು. ಈ ಕೃತಿಯನ್ನು ಮಂಟಪ ಮಾಲೆಯಲ್ಲಿ ಪ್ರಕಟಿಸಲು ನಮಗೆ ಸಂತೋಷವಾಗುತ್ತದೆ.

ಡಾ. ಚಂದ್ರಶೇಖರ ಕಂಬಾರ

ಕುಲಪತಿಯವರು

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ,

ಹಂಪಿ - ೫೮೩ ೨೭೬